# ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು.

(ಕರ್ನಾಟಕ ಸರ್ಕಾರದ ಅಂಗಸಂಸ್ಥೆ)

**ದಿನಾಂಕ:19-01-2016 ರಂದು ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಹಾಗೂ ಅಧ್ಯಕ್ಷರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಇವರ ಅಧ್ಯಕ್ಷತೆಯಲ್ಲಿ ನಡೆದ 65ನೇ ಆಡಳಿತ ಮಂಡಳಿ ಸಭೆಯ ನಡವಳಿ**

# ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು

## ದಿನಾಂಕ:19-01-2016ರಂದು ಬೆಳಗ್ಗೆ 11.00 ಗಂಟೆಗೆ ಸನ್ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಸಚಿವರು ಹಾಗೂ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ 65ನೇ ಆಡಳಿತ ಮಂಡಳಿ ಸಭೆಯ ನಡವಳಿ:

*****

**ಹಾಜರಿದ್ದ ಸದಸ್ಯರುಗಳು:**

| | | |
|---|---|---|
| 1. | ಶ್ರಿ.ಹೆಚ್. ಆಂಜನೇಯ,<br>ಮಾನ್ಯ ಸಮಾಜ ಕಲ್ಯಾಣ & ಹಿಂದುಳಿದ ವರ್ಗಗಳ ಇಲಾಖೆಗಳ ಸಚಿವರು<br>ಹಾಗೂ ಅಧ್ಯಕ್ಷರು. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು. | ಅಧ್ಯಕ್ಷರು |
| 2. | ಶ್ರೀಮತಿ.ಶಾಲಿನಿ ರಜನೀಶ್, ಐ.ಎ.ಎಸ್.<br>ಸರ್ಕಾರದ ಪ್ರಧಾನ ಕಾರ್ಯದರ್ಶಿ,<br>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು. | ಉಪಾಧ್ಯಕ್ಷರು |
| 3. | ಶ್ರೀ.ರಿತೇಶ್ ಕುಮಾರ್ ಸಿಂಗ್ ಐ.ಎ.ಎಸ್.,<br>ಸರ್ಕಾರದ ಕಾರ್ಯದರ್ಶಿ,ಆರ್ಥಿಕ ಇಲಾಖೆ(ವೆಚ್ಚ), ಬೆಂಗಳೂರು | ಸದಸ್ಯರು |
| 4. | ಶ್ರೀಮತಿ. ಎಂ.ವಿ.ಸಾವಿತ್ರಿ , ಐ.ಎ.ಎಸ್.,<br>ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು | ಸದಸ್ಯರು |
| 5. | ಶ್ರಿ.ಎಂ.ಆರ್.ಹಿರೇಮಠ್ ಕೆ.ಎ.ಎಸ್.,<br>ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, | ಸದಸ್ಯ ಕಾರ್ಯದರ್ಶಿ |
| 6. | ಶ್ರೀ.ಇ.ವೆಂಕಟಯ್ಯ ಐ.ಎ.ಎಸ್., ಎಸ್‌ಸಿಪಿ ಟಿಎಸ್‌ಪಿ ಸಲಹೆಗಾರರು, ಸಮಾಜ ಕಲ್ಯಾಣ ಇಲಾಖೆ | ವಿಶೇಷ ಆಹ್ವಾನಿತರು |
| | <u>ಸದಸ್ಯರ ಬದಲಿಗೆ ಹಾಜರಾದವರು</u> | |
| 1 | ಶ್ರೀ.ಹೆಚ್.ಎಸ್.ಹೊನ್ನೇಗೌಡ<br>ಅಧೀನ ಕಾರ್ಯದರ್ಶಿ(ಪ್ರಾಥಮಿಕ), ಶಿಕ್ಷಣ ಇಲಾಖೆ, ಬೆಂಗಳೂರು | ಪ್ರತಿನಿಧಿ |
| 2. | ಶ್ರೀ.ವಿ.ಕೆ.ನಾಗರಾಜ್<br>ಜಂಟಿ ನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು | ಪ್ರತಿನಿಧಿ |
| | <u>ಗೈರು ಹಾಜರಾದ ಸದಸ್ಯರು</u> | |
| 1 | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು<br>ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಕಲ್ಯಾಣ ಇಲಾಖೆ | ಗೈರು ಹಾಜರಿ |
| 2 | ಸರ್ಕಾರದ ಕಾರ್ಯದರ್ಶಿ<br>ಸಮಾಜ ಕಲ್ಯಾಣ ಇಲಾಖೆ | ಗೈರು ಹಾಜರಿ |
| 3 | ಸರ್ಕಾರದ ಕಾರ್ಯದರ್ಶಿ<br>ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ | ಗೈರು ಹಾಜರಿ |
| 4. | ಆಯುಕ್ತರು,<br>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | ಗೈರು ಹಾಜರಿ |
| 5. | ನಿರ್ದೇಶಕರು<br>ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು | ಗೈರು ಹಾಜರಿ |
| 6. | ನಿರ್ದೇಶಕರು<br>ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಂಸ್ಥೆ, ಬೆಂಗಳೂರು | ಗೈರು ಹಾಜರಿ |

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಕಾರ್ಯನಿರ್ವಾಹಕ ನಿರ್ದೇಶಕರು, ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರಿಗೆ, ಸಂಘದ ಉಪಾಧ್ಯಕ್ಷರು, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆರವರುಗಳಿಗೆ, ಇಲಾಖಾ ಮುಖ್ಯಸ್ಥರುಗಳಿಗೆ ಮತ್ತು ಸದಸ್ಯರುಗಳಿಗೆ ಹಾರ್ಧಿಕ ಸ್ವಾಗತವನ್ನು ಬಯಸುತ್ತಾ, ಮಾನ್ಯ ಸಚಿವರನ್ನು ಸಭೆಯ ಅಧ್ಯಕ್ಷತೆಯನ್ನು ವಹಿಸಿ, ಸಭೆಯನ್ನು ನೆಡೆಸಿಕೊಡುವಂತೆ ಕೋರಿದರು.

<u>ವಿಷಯ ಸಂಖ್ಯೆ: 1</u>

ದಿನಾಂಕ:03-11-2015 ರಂದು ನಡೆದ 64ನೇ ಆಡಳಿತ ಮಂಡಳಿ ಸಭೆಯ ನಡವಳಿಗಳನ್ನು ಓದಿ ಅನುಮೋದಿಸುವುದು.

**ತೀರ್ಮಾನ:**

**ದಿನಾಂಕ:03-11-2015 ರಂದು ನಡೆದ 64ನೇ ಆಡಳಿತ ಮಂಡಳಿ ಸಭೆಯ ನಡವಳಿಗಳನ್ನು ಓದಿ ಅನುಮೋದಿಸಲಾಯಿತು.**

<u>ವಿಷಯ ಸಂಖ್ಯೆ: 2</u>

**<u>ದಿನಾಂಕ:03-11-2015 ರಂದು ನಡೆದ 64ನೇ ಆಡಳಿತ ಮಂಡಳಿ ಸಭೆಯ ತೀರ್ಮಾನಗಳ ಮೇಲೆ ತೆಗೆದುಕೊಂಡ ಕ್ರಮ:</u>**

**ತೀರ್ಮಾನ:**

**ದಿನಾಂಕ:03-011-2015 ರಂದು ನಡೆದ 64ನೇ ಆಡಳಿತ ಮಂಡಳಿ ತೀರ್ಮಾನಗಳ ಮೇಲೆ ಸಂಘವು ಕೈಗೊಂಡ ಕ್ರಮವನ್ನು ಸಭೆಯು ದೀರ್ಘವಾಗಿ ಚರ್ಚಿಸಿತು. ಹಾಗೂ ಈ ಕೆಳಕಂಡ ತೀರ್ಮಾಗಳನ್ನು ನೀಡಿದೆ.**

1. **ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಪ್ರಾಂಶುಪಾಲರ ಮತ್ತು ಶಿಕ್ಷಕರುಗಳ ಕರ್ತವ್ಯ ನಿರ್ಲಕ್ಷ್ಯತೆ, ಬೇಜವಾಬ್ಧಾರಿತನ ಹಾಗೂ ಹಣ ದುರ್ಬಳಕೆ ಮಾರ್ಗಪಲ್ಲಟ, ಇತ್ಯಾದಿಗಳ ಪ್ರಕರಣಗಳಲ್ಲಿ ಶಿಸ್ತುಕ್ರಮ ಜರುಗಿಸುವ ಅಧಿಕಾರವು ಕಾರ್ಯನಿರ್ವಾಹಕ ನಿರ್ದೇಶಕರಿಗೆ ಪ್ರದತ್ತವಾಗಿದ್ದು, ಇದರೊಂದಿಗೆ ಈ ಅಧಿಕಾರವನ್ನು ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೂ ಸಹ ನೀಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ತೀರ್ಮಾನಿಸಲಾಯಿತು.**

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

2. ವಸತಿ ಶಾಲೆ/ಕಾಲೇಜುಗಳ ಸಮರ್ಪಕ ನಿರ್ವಹಣೆ ಬಗ್ಗೆ ಸಂಬಂಧಪಟ್ಟ ಜಿಲ್ಲಾ ಮಟ್ಟದ ಇಲಾಖಾ ಅಧಿಕಾರಿಗಳಿಗೆ ಮೇಲುಸ್ತುವಾರಿ ಮಾಡಲು ಸೂಚಿಸಿ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿಗಳು ಕಟ್ಟುನಿಟ್ಟಾದ ಸುತ್ತೋಲೆ ಹೊರಡಿಸಲು ತೀರ್ಮಾನಿಸಲಾಯಿತು. ಈ ಬಗ್ಗೆ ವರದಿಯನ್ನು ಕಾರ್ಯನಿರ್ವಾಹಕ ನಿರ್ದೇಶಕರಿಗೆ ಸಲ್ಲಿಸಲು ತಿಳಿಸುವಂತೆ ಸೂಚಿಲಾಯಿತು.
3. ಪ್ರಸ್ತುತ ವಸತಿ ಶಾಲೆಗಳ ದುರಸ್ತಿ ಹಾಗೂ ಖರೀದಿಗೆ ಸಂಬಂಧಿಸಿದಂತೆ, ಆಡಳಿತಾತ್ಮಕ ಅನುಮೋದನೆಯ ಅಧಿಕಾರವನ್ನು ಕಾರ್ಯನಿರ್ವಾಹಕ ನಿರ್ದೇಶಕರಿಗೆ ನೀಡಲಾಗಿದೆ. ಆರ್ಥಿಕ ಇಲಾಖೆಯ ಕಾರ್ಯದರ್ಶಿಗಳು(ವೆಚ್ಚ)ರವರು, ಈ ಬಗ್ಗೆ ಮಾತಾನಾಡುತ್ತಾ, ಸರ್ಕಾರವು ಜಿಲ್ಲಾಧಿಕಾರಿಗಳಿಗೆ ರೂ.1.00 ಕೋಟಿಯವರೆಗೆ ಖರೀದಿ/ಕಟ್ಟಡಗಳ ನಿರ್ಮಾಣಕ್ಕೆ ಆಡಳಿತಾತ್ಮಕ ಅನುಮೋದನೆ ನೀಡುವ ಅಧಿಕಾರವನ್ನು ನೀಡಿದೆ. ವಸತಿ ಶಾಲೆಗಳಿಗೆ ತುರ್ತು ದುರಸ್ತಿ/ಖರೀದಿಗೆ ಸಂಬಂಧಿಸಿದಂತೆ, ಆಡಳಿತಾತ್ಮಕ ಅನುಮೋದನೆ ನೀಡುವ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ನೀಡುವುದು ಸೂಕ್ತವಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರ ಹಿನ್ನೆಲೆಯಲ್ಲಿ ಸಭೆಯು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಸತಿ ಶಾಲೆಗಳಿಗೆ ಸಂಬಂಧಿಸಿದ ತುರ್ತು ಖರೀದಿ/ದುರಸ್ತಿಗಳಿಗೆ ಸಂಬಂಧಿಸಿದಂತೆ, ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆ ಸಲ್ಲಿಸಿ, ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ಆದೇಶ ಹೊರಡಿಸಲು ಸೂಚನೆ ನೀಡುವಂತೆ ತೀರ್ಮಾನಿಸಲಾಯಿತು.
4. ವಸತಿ ಶಾಲೆಗಳಲ್ಲಿ ಬೋಧಕ ಸಿಬ್ಬಂದಿಗಳ ತೀವ್ರ ಕೊರತೆಯಿರುವುದನ್ನು ಮಾನ್ಯ ಅಧ್ಯಕ್ಷರು ಮನಗಂಡು, ಉನ್ನತ ವ್ಯಾಸಂಗಕ್ಕೆ ಅನುಮತಿ ನೀಡುವುದನ್ನು ಸಧ್ಯಕ್ಕೆ ಕೈಬಿಡಲು ತೀರ್ಮಾನಿಸಲಾಯಿತು.
5. ಆಡಳಿತ ಮಂಡಳಿಯು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ವಸತಿ ಶಾಲೆಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳ ಬಡ ವಿದ್ಯಾರ್ಥಿಗಳು, ವ್ಯಾಸಂಗ ಮಾಡುತ್ತಿದ್ದು, ಇವರಿಗೆ ಸರ್ಕಾರದ ಅನುದಾನದಲ್ಲಿ ಉಚಿತ ಶಿಕ್ಷಣ ಮತ್ತು ಭೋಜನಾ ಮತ್ತು ಇತರೆ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಸಾರ್ವಜನಿಕ

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಶಿಕ್ಷಣ ಇಲಾಖೆಯು ತನ್ನ ಅಧೀನದ ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ಉಚಿತವಾಗಿ ಪಠ್ಯಪುಸ್ತಕಗಳನ್ನು ಸರಬರಾಜು ಮಾಡುತ್ತಿದ್ದು, ಸಂಘದ ವಸತಿ ಶಾಲೆಗಳಿಗೂ ಸಹ ಶಿಕ್ಷಣ ಇಲಾಖೆಯು ಉಚಿತವಾಗಿ ಪಠ್ಯಪುಸ್ತಕ ನೀಡಬೇಕೆಂದು ಕೋರಲು ಸಭೆಯು ತೀರ್ಮಾನಿಸಿತು. ಮುಂದುವರಿದು ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಪತ್ರದಲ್ಲಿ ಪಠ್ಯ ಪುಸ್ತಕಗಳಿಗೆ ಪ್ರತ್ಯೇಕವಾಗಿ ಅನುದಾನ ನಿಗಧಿಯಾಗುತ್ತಿರುವ ಬಗ್ಗೆ ಮಾಹಿತಿ ಕೋರಿರುತ್ತಾರೆ. ತತ್ಸಂಬಂಧವಾಗಿ ಆರ್ಥಿಕ ಇಲಾಖೆಯು ಪಠ್ಯಪುಸ್ತಕಗಳ ಖರೀದಿ ಮತ್ತು ಸರಬರಾಜಿಗೆ ಪ್ರತ್ಯೇಕ ಅನುದಾನ ನಿಗಧಿಮಾಡಿ ಬಿಡುಗಡೆ ಮಾಡುತ್ತಿಲ್ಲವೆಂಬ ಅಂಶವನ್ನು ಸ್ಪಷ್ಟಪಡಿಸಿ, ವಸತಿ ಶಾಲೆಗಳ ಪ.ಜಾತಿ/ಪ.ವರ್ಗ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಉಚಿತವಾಗಿ ಪಠ್ಯಪುಸ್ತಕಗಳನ್ನು ನೀಡುವಂತೆ ಪತ್ರ ಬರೆಯಲು ತೀರ್ಮಾನಿಸಲಾಯಿತು.

6. ಜಿಲ್ಲೆಗೆ ಒಂದು ಅಥವಾ ಎರಡು ಉತ್ತಮ ವಸತಿ ಶಾಲೆಗಳನ್ನು ಗುರುತಿಸಿ, ಸದರಿ ವಸತಿ ಶಾಲೆಯಲ್ಲಿ **CBSC Syllabus** ಅಳವಡಿಸಿಕೊಳ್ಳಲು ತೀರ್ಮಾನಿಸಲಾಯಿತು. ಕಾರ್ಯನಿರ್ವಾಹಕ ನಿರ್ದೇಶಕರು, ತತ್ಸಂಬಂಧವಾಗಿ ಶಿಕ್ಷಣ ಇಲಾಖೆಯಿಂದ ನಿರಾಪೇಕ್ಷಣೆ ಪತ್ರ ಪಡೆದು, ಕೇಂದ್ರ ಸರ್ಕಾರದ ಸಂಬಂಧ ಪಟ್ಟ ಇಲಾಖೆಯ ಅನುಮತಿ ಪಡೆದು ಅಳವಡಿಸಿಕೊಳ್ಳಲು ತೀರ್ಮಾನಿಸಲಾಯಿತು. ಅಲ್ಲದೇ, ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರುಗಳಿಗೆ ಬೋಧನಾ ಸಾಮಾರ್ಥ್ಯ ಉತ್ತಮಪಡಿಸಲು ಕೇಂದ್ರ ಸರ್ಕಾರದ ಅಧೀನದ ಶಿಕ್ಷಣ ತರಬೇತಿ ಸಂಸ್ಥೆಗಳಿಗೆ ನಿಯೋಜಿಸುವ ಕ್ರಮಕೈಗೊಳ್ಳಲು ಮಾನ್ಯ ಅಧ್ಯಕ್ಷರು ಸೂಚಿಸಿದರು.

7. ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ವೆಚ್ಚ ರವರು ಮೆ॥ ಆಡ್ಕರ್ ಸಂಸ್ಥೆಯು ಸಾಮಾಗ್ರಿಗಳ ಗರಿಷ್ಟ ಉತ್ಪಾಧನೆ ಮಾಡುತ್ತಿಲ್ಲ. ಬೇರೆ ಇತರೆ ಸಂಸ್ಥೆಗಳಿಂದ ಸಾಮಾಗ್ರಿಗಳನ್ನು ಖರೀದಿ ಮಾಡಿ ಸರಬರಾಜು ಮಾಡುತ್ತಿರುವುದರಿಂದ ಸದರಿ ಸಂಸ್ಥೆಗೆ ಕರ್ನಾಟಕ ಪಾರದರ್ಶಕತೆ ಅಧಿನಿಯಮ ರಡಿ 4ಜಿ ವಿನಾಯತಿ ನೀಡಲು ಸಾಧ್ಯವಾಗುವುದಿಲ್ಲವೆಂದು ಸಭೆಗೆ ತಿಳಿಸಿದರು. ಈ ಬಗ್ಗೆ ಸಭೆಯು ಕೂಲಂಕುಷವಾಗಿ

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಚರ್ಚಿಸಿ, ಮೆ|| ಲಿಡ್ಕರ್ ಸಂಸ್ಥೆಯು ಸಹ ಸರ್ಕಾರದ ಸ್ವಾಮ್ಯದ ಸಂಸ್ಥೆಯಾಗಿರುವುದರಿಂದ ಸದರಿ ಸಂಸ್ಥೆಯನ್ನೂ ಸಹ ಬಲಪಡಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಮೆ|| ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮಕ್ಕೆ ಸರ್ಕಾರದಿಂದ 4ಜಿ ವಿನಾಯತಿ ಪಡೆದು ಸದರಿ ಸಂಸ್ಥೆಯಿಂದಲೇ ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ಲೆದರ್ ಶೂಗಳನ್ನು ಖರೀದಿಸಲು ತೀರ್ಮಾನಿಸಲಾಯಿತು. ಚರ್ಮದಿಂದ ತಯಾರಿಸಲಾದ ಶೂಗಳನ್ನು ಮಾತ್ರ ಸರಬರಾಜು ಮಾಡಬೇಕೆಂದು ಆರ್ಥಿಕ ಇಲಾಖೆಯ ಷರತ್ತನ್ನು ಮುಂದಿನ ಶೈಕ್ಷಣಿಕ ವರ್ಷದಿಂದ ಪರಿಗಣಿಸಲು ಮತ್ತು ಪ್ರಸಕ್ತ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಲಿಡ್ಕರ್ ಸಂಸ್ಥೆಯು ಪೂರೈಸಲು ಸಿದ್ಧಪಡಿಸಿಕೊಂಡಿರುವ ಫೋಮ್ ಲೆದರ್ ಶೂಗಳನ್ನು ಖರೀದಿಸಲು ತೀರ್ಮಾನಿಸಲಾಯಿತು.

8. ಸಮಾಜ ಕಲ್ಯಾಣ ಇಲಾಖೆಯ ಅಧೀನದ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳಿಗೆ 2015-16ನೇ ಸಾಲಿನಲ್ಲಿ ಶೂ ಮತ್ತು ಸಾಕ್ಸ್‌ಗಳನ್ನು ನಿಗಧಿತ ಅವಧಿಯಲ್ಲಿ ಖರೀದಿಸಿ, ಪೂರೈಕೆ ಕ್ರಮವನ್ನು ಅನುಸರಿಸಿ ವಸತಿ ಶಾಲೆಗಳ ವಿದ್ಯಾರ್ಥಿಗಳಿಗೂ ಸಹ ಖರೀದಿ ಮಾಡಲು ಮಾನ್ಯ ಅಧ್ಯಕ್ಷರು ಸೂಚಿಸಿದರು
9. 2016-17ನೇ ಸಾಲಿನ ಶೈಕ್ಷಣಿಕ ವರ್ಷ ಪ್ರಾರಂಭಕ್ಕೆ ಮೊದಲೇ ಅಗತ್ಯವಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಸಕಾಲದಲ್ಲಿ ಒದಗಿಸಲು ಅಗತ್ಯ ಕ್ರಮಕೈಗೊಳ್ಳುವಂತೆ ಮಾನ್ಯ ಅಧ್ಯಕ್ಷರು ಸೂಚಿಸಿದರು
10. ವಸತಿ ಶಾಲೆಗಳ ಸಮಾಜ ವಿಜ್ಞಾನ ಶಿಕ್ಷಕರುಗಳನ್ನು ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಸೌತ್ ಇಂಡಿಯಾ ಇಲ್ಲಿಗೆ ತರಬೇತಿಗೆ ನಿಯೋಜಿಸಲು ಸರ್ಕಾರದಿಂದ ಅನುಮೋದನೆ ದೊರೆತಿರುವುದನ್ನು ಪರಿಶೀಲಿಸಿತು. ತರಬೇತಿಗೆ ಹಾಜರಾದ ಶಿಕ್ಷಕರುಗಳಿಗೆ ತರಬೇತಿ ಉಪಯೋಗ ಪಡೆದುಕೊಂಡ ಬಗ್ಗೆ ಸದರಿ ಸಂಸ್ಥೆಯು ಪರೀಕ್ಷೆಯನ್ನು ನಡೆಸಿ ಮೌಲ್ಯಮಾಪನ ಮಾಡಲು ಪತ್ರ ಬರೆಯುವಂತೆ ತಿಳಿಸಲಾಯಿತು.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

11. ಮಾನ್ಯ ಉಚ್ಛನ್ಯಾಯಾಲಯದ ಆದೇಶದನ್ವಯ 2011-12ನೇ ಸಾಲಿನಲ್ಲಿ ನೇರ ನೇಮಕಾತಿ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾದ ಹೊರಸಂಪನ್ಮೂಲ ಶಿಕ್ಷಕರು/ಪ್ರಾಂಶುಪಾಲರುಗಳಿಗೆ ಸೇವಾ ಕೃಪಾಂಕ ನೀಡಿ, ಆಯ್ಕೆಗೆ ಅರ್ಹರಾದ 409 ಅಭ್ಯರ್ಥಿಗಳ ಪೈಕಿ 26 ಅಭ್ಯರ್ಥಿಗಳ ಶಾಲಾ ಹಾಜರಾತಿಯು ಕೃತ್ರಿಮವೆಂದು ಕಂಡು ಬಂದಿದ್ದು, ಈ ರೀತಿ ನೈಜವಲ್ಲದ ಸುಳ್ಳು ದಾಖಲೆಗಳನ್ನು ಸೃಷ್ಠಿಸಿ, ಸರ್ಕಾರವನ್ನು ವಂಚಿಸಿದ 26 ಅಭ್ಯರ್ಥಿಗಳ ಆಯ್ಕೆಯನ್ನು ರದ್ದುಗೊಳಿಸಲು ಸಭೆಯು ತೀರ್ಮಾನಿಸಿತು. ಅಂಥ ಅಭ್ಯರ್ಥಿಗಳ ವಿರುದ್ಧ ಕಾನೂನು ತಜ್ಞರ ಅಭಿಪ್ರಾಯ ಪಡೆದು ಕ್ರಿಮಿನಲ್ ಮೊಕದ್ದಮೆಯನ್ನು ಹೂಡಲು ಕ್ರಮವಹಿಸುವಂತೆ ತೀರ್ಮಾನಿಸಲಾಯಿತು.

12. ಆಯ್ಕೆಗೆ ಅರ್ಹರಾದ ಅಭ್ಯರ್ಥಿಗಳ ಫೈಕಿ 246 ಅಭ್ಯರ್ಥಿಗಳ ಜಾತಿ ಸಿಂಧುತ್ವ ಪ್ರಮಾಣ ಪತ್ರ, ಪೋಲಿಸ್ ಪರಿಶೀಲನಾ ವರದಿ, ಮತ್ತು ವೈಧ್ಯಕೀಯ ಪ್ರಮಾಣ ಪತ್ರಗಳು ಸ್ವೀಕೃತವಾಗಿರುವ ಬಗ್ಗೆ ಕಾರ್ಯನಿರ್ವಾಹಕ ನಿರ್ದೇಶಕರು ಸಭೆಗೆ ತಿಳಿಸಿದರು. ಆಡಳಿತ ಮಂಡಳಿಯು ಈ ವಿಷಯದ ಬಗ್ಗೆ ಚರ್ಚಿಸಿ, ಸದರಿ 246 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶವನ್ನು ನೀಡಲು ಅನುಮೋದಿಸಲಾಯಿತು.

<u>ವಿಷಯ ಸಂಖ್ಯೆ: 3</u>

<u>2015-16ನೇ ಸಾಲಿನಲ್ಲಿ ಸಂಘಕ್ಕೆ ನಿಗಧಿಪಡಿಸಿದ ಅನುದಾನ, ಬಿಡುಗಡೆ, ಖರ್ಚು ಹಾಗೂ ಶಿಲ್ಕಿನ ವಿವರಗಳು</u>

ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳು ಹಾಗೂ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜುಗಳ ಕಟ್ಟಡ ನಿರ್ಮಾಣ ಮತ್ತು ವಸತಿ ಶಾಲೆಗಳ ನಿರ್ವಹಣೆಗಾಗಿ 2015-16ನೇ ಸಾಲಿನ ಆಯವ್ಯಯದಲ್ಲಿ ನಿಗಧಿಗೊಳಿಸಿದ ಅನುದಾನ, ಬಿಡುಗಡೆ, ವೆಚ್ಚ ಮತ್ತು ದಿನಾಂಕ:31-12-2015ರ ಅಂತ್ಯಕ್ಕೆ ಖರ್ಚಾಗದೇ ಉಳಿದಿರುವ ಅನುದಾನದ ಶಿಲ್ಕಿನ ವಿವರಗಳನ್ನು ಅನುಬಂಧಗಳಲ್ಲಿ ನೀಡಲಾಗಿದೆ. ವಿಷಯವನ್ನು ಆಡಳಿತ ಮಂಡಳಿ ಸಭೆಯ ಅವಗಾಹನೆಗೆ ಮಂಡಿಸಲಾಗಿದೆ.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

**ತೀರ್ಮಾನ:**

**ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳು ಹಾಗೂ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜುಗಳ ಕಟ್ಟಡ ನಿರ್ಮಾಣ ಮತ್ತು ವಸತಿ ಶಾಲೆಗಳ ನಿರ್ವಹಣೆಗಾಗಿ, 2015-16ನೇ ಸಾಲಿನ ಆಯವ್ಯಯದಲ್ಲಿ ನಿಗಧಿಗೊಳಿಸಿದ ಅನುದಾನ, ಬಿಡುಗಡೆ, ವೆಚ್ಚದ ವಿವರಗಳನ್ನು ಸಭೆಯು ಅವಲೋಕಿಸಿ, ಅನುಮೋದಿಸಿತು.**

**ವಿಷಯ ಸಂಖ್ಯೆ: 4**

**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕೇಂದ್ರ ಕಛೇರಿಯಲ್ಲಿ 16 ಉಳಿತಾಯ ಖಾತೆಗಳನ್ನು ತೆರೆದಿರುವ ಬಗ್ಗೆ.**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕೇಂದ್ರ ಕಛೇರಿಗೆ ವಸತಿ ಶಾಲೆಗಳ ನಿರ್ವಹಣೆ ಮತ್ತು ವಸತಿ ಶಾಲೆ ಕಟ್ಟಡಗಳ ನಿರ್ಮಾಣಕ್ಕೆ ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳ ಆಯವ್ಯಯದಲ್ಲಿ ಅನುದಾನ ನಿಗದಿಯಾಗಿ ಬಿಡುಗಡೆಯಾಗುತ್ತಿದೆ. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕೇಂದ್ರ ಕಛೇರಿಯ ಲೆಕ್ಕ ತಪಾಸಣೆಯನ್ನು ಮಹಾಲೇಖಪಾಲರ ಲೆಕ್ಕ ಪರಿಶೋಧನಾ ತಂಡವು ಲೆಕ್ಕ ಪರಿಶೋಧನಾ ವರದಿಯನ್ನು ಮಂಡಿಸುವಾಗ ಇಲಾಖಾವಾರು ಹಾಗೂ ಕಾರ್ಯಕ್ರಮವಾರು ಬಿಡುಗಡೆಯಾಗುವ ಅನುದಾನಕ್ಕೆ ಪ್ರತ್ಯೇಕವಾದ ಉಳಿತಾಯ ಖಾತೆ ತೆರೆಯುವುದರಿಂದ ಅನುದಾನ ಸಮರ್ಪಕ ನಿರ್ವಹಣೆ ಬಗ್ಗೆ ಮಾಹಿತಿಯು ಲಭ್ಯವಾಗುವುದೆಂದು ಚರ್ಚೆಯ ಸಮಯದಲ್ಲಿ ತಿಳಿಸಿರುತ್ತಾರೆ. ಸಂಘವು ಈವರೆವಿಗೂ ಒಟ್ಟು 16 ಉಳಿತಾಯ ಖಾತೆಗಳನ್ನು ಇಲಾಖಾವಾರು ಹಾಗೂ ಕಾರ್ಯಕ್ರಮವಾರು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ತೆರೆಯಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ತೋರಿಸಿದೆ.

ವಿಷಯವನ್ನು ಆಡಳಿತ ಮಂಡಳಿಯ ಮುಂದೆ ಮಂಡಿಸಿ, ಉಳಿತಾಯ ಖಾತೆ ತೆರೆದಿರುವ ಬಗ್ಗೆ ಘಟನೋತ್ತರ ಅನುಮೋದನೆ ಕೋರಿದೆ.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

| Sl.No | Name of the Bank | Purpose | Bank A/C No. | Opened By |
|---|---|---|---|---|
| 1 | SBM Subedhar Chathram Road, Bengaluru | SC- Construction | 64042123347 | ED |
| 2 | SBM Subedhar Chathram Road Bengaluru | ST-Construction | 64042123369 | ED |
| 3 | Union Bank of India,gandhinagar Bengaluru | EMRS Construction | 353102010013857 | ED |
| 4 | SBM Subedhar Chathram Road Bengaluru | BC-Construction | 64042121850 | ED |
| 5 | SBM Subedhar Chathram Road Bengaluru | MC-Construction | 64042115224 | ED |
| 6 | SBM-Subedhar Chathram Road Bengaluru | KREIS Admin | 54034600939 | ED |
| 7 | SBM-Subedhar Chathram Road Bengaluru | SC Maintenance | 64173745916 | ED |
| 8 | SBM-Subedhar Chathram Road Bengaluru | STMaintenance | 64173745961 | ED |
| 9 | Union Bank of India,Gandhinagar, Bengaluru | EMRS Maintenance | 353102010013855 | ED |
| 10 | SBM-Subedhar Chathram Road Bengaluru | BC Maintenance | 64173745337 | ED |
| 11 | Union Bank of India,Gandhinagar, Bengaluru | FSD/EMD | 353102010013640 | ED |
| 12 | Indian Bank Kempegowda Road, Bengaluru | Corpus Fund | 6020118518 | ED |
| 13 | SBM-Subedhar Chathram Road Bengaluru | SCWD/STWD Dept.Grants | 64081571734 | ED |
| 14 | SBM-Subedhar Chathram Road Bengaluru | SC-Hostel Construction | 64042121918 | ED |
| 15 | SBM-Subedhar Chathram Road Bengaluru | ST-Hostel Construction | 64042121930 | ED |
| 16 | Bank Of Baroda, Malleshwaram, Bengaluru | BC-Hostel Construction | 05200100006389 | ED |

ತೀರ್ಮಾನ:

ಆಡಳಿತ ಮಂಡಳಿಯು ವಿವಿಧ ಇಲಾಖೆಗಳ ಕಾರ್ಯಕ್ರಮವಾರು ಅನುದಾನವನ್ನು ಸಮರ್ಪಕ ಲೆಕ್ಕನಿರ್ವಹಣೆಗಾಗಿ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ 16 ಉಳಿತಾಯ ಖಾತೆಗಳನ್ನು ತೆರೆದಿರುವುದನ್ನು ಅನುಮೋದಿಸಿತು.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

**ವಿಷಯ ಸಂಖ್ಯೆ: 5**

**2014-15ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಲಾದ 100 ಹೊಸ ವಸತಿ ಶಾಲೆಗಳಿಗೆ ನಾಮಕರಣ ಮಾಡುವ ಬಗ್ಗೆ.**

ಪ್ರಸ್ತುತ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ 505 ವಸತಿ ಶಾಲೆ/ ಕಾಲೇಜುಗಳು ಕಾರ್ಯ ನಿರ್ವಹಿಸುತ್ತಿವೆ. ಸರ್ಕಾರವು ಈ ವಸತಿ ಶಾಲೆ ಕಾಲೇಜುಗಳನ್ನು ಪ್ರಧಾನ ಮಂತ್ರಿಗಳ, ಸ್ವಾತಂತ್ರ ಹೋರಾಟಗಾರರ ಹಾಗೂ ಹುತಾತ್ಮರ ಹೆಸರಿನಲ್ಲಿ ಮಂಜೂರು ಮಾಡಿದೆ. ವಿವರಗಳನ್ನು ಈ ಕೆಳಕಂಡಂತಿದೆ.

| ಕ್ರ.ಸಂ. | ವಸತಿ ಶಾಲೆಗಳು | ವಸತಿ ಶಾಲೆಗಳ ಸಂಖ್ಯೆ | ಷರಾ |
|---|---|---|---|
| 1. | ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು | 350 | |
| 2. | ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳು | 115 | ಹೆಣ್ಣು ಮಕ್ಕಳ ವಸತಿ ಶಾಲೆಗಳು |
| 3. | ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳು | 05 | ಸಹಶಿಕ್ಷಣ |
| 4. | ಸಂಗೊಳ್ಳಿ ರಾಯಣ್ಣ ವಸತಿ ಶಾಲೆ | 01 | ಸಹ; ಶಿಕ್ಷಣ (ನಂದಗಡ, ಖಾನಪುರ ತಾ॥ ಬೆಳಗಾವಿ ಜಿಲ್ಲೆ) |
| 5. | ಗಾಂಧೀ ತತ್ವ ಆಧಾರಿತ ವಸತಿ ಶಾಲೆ | 01 | ಗಂಡು ಮಕ್ಕಳ ವಸತಿ ಶಾಲೆ (ಚಳ್ಳಗುರ್ಕಿ- ಬಳ್ಳಾರಿ ತಾ॥ ಮತ್ತು ಜಿಲ್ಲೆ) |
| 6. | ಕವಿರನ್ನ ವಸತಿ ಶಾಲೆ | 01 | ಸಹ:ಶಿಕ್ಷಣ (ಮುಧೋಳ್- ಬಾಗಲಕೋಟೆ ಜಿಲ್ಲೆ) |
| 7. | ಏಕಲವ್ಯ ಮಾದರಿ ವಸತಿ ಶಾಲೆಗಳು | 06 | ಸಹಶಿಕ್ಷಣ (ಕೇಂದ್ರ ಸರ್ಕಾರದಿಂದ ನಾಮಕರಣ ಮಾಡಿ ಮಂಜೂರು ಮಾಡಿದ ಹಾಗೂ ಕೇಂದ್ರದ ಅನುದಾನದಿಂದ ವರ್ಹಿಸಲಾಗುತ್ತಿರುವ ವಸತಿ ಶಾಲೆಗಳು) |
| 8. | ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜುಗಳು | 26 | ಸಹಶಿಕ್ಷಣ |
| ಒಟ್ಟು | | 505 | |

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಸರ್ಕಾರವು 2013-14ನೇ ಸಾಲಿನಲ್ಲಿ ಪ.ಜಾತಿ/ಪ.ವರ್ಗದ ವಿದ್ಯಾರ್ಥಿಗಳಿಗೆ 45 ಹೊಸ ವಸತಿ ಶಾಲೆಗಳನ್ನು ಹಾಗೂ 2014-15 ನೇ ಸಾಲಿನಲ್ಲಿ ಇದೇ ವರ್ಗದ ವಿದ್ಯಾರ್ಥಿಗಳಿಗೆ 100 ಹೊಸ ವಸತಿಗಳನ್ನು ಪ್ರಾರಂಭಿಸುವ ಬಗ್ಗೆ ಪ್ರಸ್ತಾಪಿಸಲಾಗಿದೆ. ಸಂಘದಿಂದ ಹೊಸ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ (ಸಹ ಶಿಕ್ಷಣ) ಪ್ರಾರಂಭಕ್ಕೆ (75 ಪ.ಜಾತಿ ಮತ್ತು 25 ಪ.ವರ್ಗಗಳ ಮೊ.ದೇ.ವ.ಶಾಲೆಗಳು) ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಿದ್ದು ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿದೆ.

ಸನ್ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಸಚಿವರ ಟಿಪ್ಪಣಿ ದಿನಾಂಕ:29.10.2015 ರಲ್ಲಿ 2014-15ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾದ 100 ವಸತಿ ಶಾಲೆಗಳ ಪೈಕಿ 75 ಪ.ಜಾತಿ ವಸತಿ ಶಾಲೆಗಳು ಹಾಗೂ 25 ಪ.ವರ್ಗದ ವಸತಿ ಶಾಲೆಗಳಾಗಿದೆ. ಈ ಪೈಕಿ 30 ವಸತಿ ಶಾಲೆಗಳು ಬಾಲಕಿಯರಿಗಾಗಿ ಹಾಗೂ 70 ವಸತಿ ಶಾಲೆಗಳು ಬಾಲಕರಿಗಾಗಿ ಹೋಬಳಿ ಮಟ್ಟದಲ್ಲಿ ಪ್ರಾರಂಭಿಸಲು, ಮಾನ್ಯ ಸಚಿವರು ನಿರ್ದೇಶಿಸಿರುತ್ತಾರೆ. ಅಲ್ಲದೆ ಹೆಣ್ಣು ಮಕ್ಕಳ ವಸತಿ ಶಾಲೆಗಳಿಗೆ ಶ್ರೀಮತಿ "ಇಂದಿರಾ ಗಾಂಧಿ" ವಸತಿ ಶಾಲೆಗಳೆಂದು ಹಾಗೂ ಬಾಲಕರ ವಸತಿ ಶಾಲೆಗಳನ್ನು " ರಾಜೀವ್ ಗಾಂಧಿ" ವಸತಿ ಶಾಲೆಗಳೆಂದು ನಾಮಕರಣ ಮಾಡುವಂತೆ ಸೂಚಿಸಿರುತ್ತಾರೆ. ಮಾನ್ಯ ಸಚಿವರ ಟಿಪ್ಪಣಿಯನ್ನು ಅನುಬಂಧದಲ್ಲಿ ಇರಿಸಿದೆ.

ವಿಷಯವನ್ನು ಆಡಳಿತ ಮಂಡಳಿಯ ಮುಂದೆ ಮಂಡಿಸಿ ಬಾಲಕರ ವಸತಿ ಶಾಲೆಗಳಿಗೆ "ರಾಜೀವ್ ಗಾಂಧಿ ವಸತಿ ಶಾಲೆಗಳೆಂದು ಹಾಗೂ ಹೆಣ್ಣು ಮಕ್ಕಳ ವಸತಿ ಶಾಲೆಗಳಿಗೆ "ಇಂದಿರಾಗಾಂಧಿ" ವಸತಿ ಶಾಲೆಗಳೆಂದು ನಾಮಕರಣ ಮಾಡುವ ಬಗ್ಗೆ ತೀರ್ಮಾನ ಕೋರಿದೆ. ಆಡಳಿತ ಮಂಡಳಿಯ ತೀರ್ಮಾನದಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು.

**ತೀರ್ಮಾನ:**

**ಆಡಳಿತ ಮಂಡಳಿಯು ವಿಷಯವನ್ನು ಚರ್ಚಿಸಿತು. ಇನ್ನು ಮುಂದೆ ಮಂಜೂರಾಗುವ ಬಾಲಕರ ವಸತಿ ಶಾಲೆಗಳಿಗೆ "ರಾಜೀವ್ ಗಾಂಧಿ ವಸತಿ ಶಾಲೆಗಳೆಂದು ಹಾಗೂ ಹೆಣ್ಣು ಮಕ್ಕಳ ವಸತಿ ಶಾಲೆಗಳಿಗೆ "ಇಂದಿರಾಗಾಂಧಿ" ವಸತಿ ಶಾಲೆಗಳೆಂದು ನಾಮಕರಣ ಮಾಡುವ ಬಗ್ಗೆ ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿ, ಆದೇಶ ಪಡೆಯಲು ತೀರ್ಮಾನಿಸಿತು.**

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ವಿಷಯ ಸಂಖ್ಯೆ:6

**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಖಾಯಂ ಸಿಬ್ಬಂದಿಗಳಿಗೆ ನೂತನ ಪಿಂಚಣಿ ಯೋಜನೆಯನ್ನು ಅಳವಡಿಸುವ ಬಗ್ಗೆ.**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ತನ್ನ ವೃಂದ ಮತ್ತು ನೇಮಕಾತಿ ನಿಯಮ 2011 ರಲ್ಲಿ ಖಾಯಂ ಸಿಬ್ಬಂದಿಗಳಿಗೆ 1) ನೌಕರರ ಭವಿಷ್ಯ ನಿಧಿ 2) ಗುಂಪು ವಿಮೆ 3) ರಜೆ ಪರಿವರ್ತನಾ ಸೌಲಭ್ಯವನ್ನು ಅಳವಡಿಸಿಕೊಳ್ಳಲಾಗಿದೆ.

ಸರ್ಕಾರವು ಆರ್ಥಿಕ ಇಲಾಖೆಯ ಸುತ್ತೋಲೆಯಲ್ಲಿ ಸರ್ಕಾರದ ಅಧೀನದ ಮಂಡಳಿಗಳು, ನಿಗಮ, ವಿಶ್ವ ವಿದ್ಯಾಲಯಗಳು, ಸಂಘಗಳು ಮತ್ತು ಅನುದಾನಿತ ಸಂಸ್ಥೆಗಳು ತಮ್ಮ ಸಿಬ್ಬಂದಿ ನೌಕರರುಗಳಿಗೆ ನೂತನ ಪಿಂಚಣಿ ಯೋಜನೆಯನ್ನು ಅಳವಡಿಸಿಕೊಳ್ಳಲು ಹಾಗೂ ಹಳೆ ಪಿಂಚಣಿ ಯೋಜನೆಯನ್ನು ಕೈಬಿಡುವಂತೆ ತಿಳಿಸಿದೆ.

ಸರ್ಕಾರದ ಆರ್ಥಿಕ ಇಲಾಖೆಯ ಸುತ್ತೋಲೆಯನ್ನು ಆಧರಿಸಿ, ಸರ್ಕಾರವು ತನ್ನ ಆದೇಶ ಕ್ರಮ ಸಂಖ್ಯೆ : ಹಿಂವಕ 579 ಬಿಇಟಿ 2015, ಬೆಂಗಳೂರು ದಿನಾಂಕ 31.12.2015 ರಲ್ಲಿ ಸಂಘದ ಖಾಯಂ ಸಿಬ್ಬಂದಿಗಳಿಗೆ ನೂತನ ಪಿಂಚಣಿ ಯೋಜನೆಯನ್ನು ಅಳವಡಿಸಿಕೊಳ್ಳಲು ಅನುಮೋದಿಸಿದೆ. ಸರ್ಕಾರದ ಆದೇಶದಂತೆ ವೃಂದ ಮತ್ತು ನೇಮಕಾತಿ ನಿಯಮದಲ್ಲಿ ಈಗಾಗಲೇ ಅಳವಡಿಸಿಕೊಳ್ಳಲಾದ ಪಿಂಚಣಿ ಯೋಜನೆಯ ಬದಲಾಗಿ, ನೂತನ ಪಿಂಚಣಿ ಯೋಜನೆಯನ್ನು ಅಳವಡಿಸಿಕೊಳ್ಳಲು ಆದೇಶಿಸಲಾಗಿದೆ. ಸರ್ಕಾರದ ಆದೇಶದ ಹಿನ್ನೆಲೆಯಲ್ಲಿ ಕರ್ನಾಟಕ ವೃಂದ ಮತ್ತು ನೇಮಕಾತಿ ನಿಯಮಕ್ಕೆ ಸೂಕ್ತ ತಿದ್ದುಪಡಿ ತರಬೇಕಾಗಿದೆ.

ವಿಷಯವನ್ನು ಆಡಳಿತ ಮಂಡಳಿಯ ಮುಂದೆ ಮಂಡಿಸಿ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವೃಂದ ಮತ್ತು ನೇಮಕಾತಿ ನಿಯಮ 2011 ಕ್ಕೆ ಸೂಕ್ತ ತಿದ್ದುಪಡಿ ಮಾಡಿಕೊಳ್ಳುವ ಬಗ್ಗೆ ತೀರ್ಮಾನ ಕೋರಿದೆ. ಆಡಳಿತ ಮಂಡಳಿಯ ತೀರ್ಮಾನದಂತೆ ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆ ಸಲ್ಲಿಸಿ, ತಿದ್ದುಪಡಿ ಆದೇಶ ಪಡೆಯಲು ಕ್ರಮವಹಿಸಲಾಗುವುದು.

ತೀರ್ಮಾನ:

**ಸಂಘದ ಖಾಯಂ ನೌಕರರಿಗೆ ನೂತನ ಪಿಂಚಣಿ ಯೋಜನೆಯನ್ನು ಅಳವಡಿಸಿಕೊಳ್ಳಲು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವೃಂದ ಮತ್ತು ನೇಮಕಾತಿ ವಿನಿಯಮ 2011 ಕ್ಕೆ ಸೂಕ್ತ ತಿದ್ದುಪಡಿ ಮಾಡಿಕೊಳ್ಳಲು ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆ ಸಲ್ಲಿಸಿ, ತಿದ್ದುಪಡಿ ಅಧಿಸೂಚನೆ ಪಡೆದು ಸಂಘದ ಬೈಲಾದಲ್ಲಿ ಅಳವಡಿಸಿಕೊಂಡು ಮುಂದಿನ ಕ್ರಮವಹಿಸಲು ತೀರ್ಮಾನಿಸಲಾಯಿತು.**

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

<u>ವಿಷಯ ಸಂಖ್ಯೆ: 7</u>

**ಮಾನ್ಯ ಕರ್ನಾಟಕ ಉಚ್ಛನ್ಯಾಯಾಲಯದ ಆದೇಶದಂತೆ 2011-12ನೇ ಸಾಲಿನಲ್ಲಿ ಬೋಧಕ ಸಿಬ್ಬಂದಿಗಳ ನೇರ ನೇಮಕಾತಿ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾದ ಹೊರಸಂಪನ್ಮೂಲ ಸಿಬ್ಬಂದಿಗಳಿಗೆ ಸೇವಾ ಕೃಪಾಂಕ ನೀಡಿ, ನೇಮಕಾತಿ ಆದೇಶ ಹೊರಡಿಸುವ ಬಗ್ಗೆ:**

ದಿನಾಂಕ:03-11-2015 ರಂದು ನಡೆದ ಸಂಘದ 64ನೇ ಆಡಳಿತ ಮಂಡಳಿ ಸಭೆಯಲ್ಲಿ 409 ಹೊರಸಂಪನ್ಮೂಲ ಅಭ್ಯರ್ಥಿಗಳಿಗೆ ಮಾನ್ಯ ಕರ್ನಾಟಕ ಉಚ್ಛನ್ಯಾಯಾಲದ ಆದೇಶದಂತೆ ಸೇವಾ ಕೃಪಾಂಕಕ್ಕೆ ಅರ್ಹರಾಗಿರುವುದನ್ನು ತಿಳಿಸಿ, ನೇಮಕಾತಿ ಆದೇಶ ನೀಡುವ ಬಗ್ಗೆ ಮಂಡಿಸಲಾಗಿತ್ತು. ಈ ಬಗ್ಗೆ ಆಡಳಿತ ಮಂಡಳಿಯು ಜಾತಿ ಸಿಂಧುತ್ವ ಪ್ರಮಾಣಪತ್ರ, ಪೋಲೀಸ್ ಪರಿಶೀಲನಾ ದೃಢೀಕರಣ ಮತ್ತು ವ್ಯದ್ಯಕೀಯ ಪ್ರಮಾಣ ಪತ್ರಗಳನ್ನು ಮಾನ್ಯ ಅಧ್ಯಕ್ಷರ ಅನುಮೋದನೆ ಪಡೆದು ನೇಮಕಾತಿ ಆದೇಶ ನೀಡಲು ತೀರ್ಮಾನಿಸಲಾಗಿದೆ. ತತ್ಸಂಬಂಧವಾಗಿ ಸಂಘವು ಕ್ರಮವಹಿಸಿದೆ.

ಸದರಿ ಆಡಳಿತ ಮಂಡಳಿ ಸಭೆಯಲ್ಲಿ 2011-12ನೇ ಸಾಲಿನ ನೇರ ನೇಮಕಾತಿ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾದ ಹೊರಸಂಪನ್ಮೂಲ ಬೋಧಕ ಸಿಬ್ಬಂದಿಗಳ ಪೈಕಿ 260 ಬೋಧಕ ಸಿಬ್ಬಂದಿಗಳು ಜೂನ್/ಜುಲೈ ಮಾಹೆಯಿಂದ ಮಾರ್ಚ್/ಏಪ್ರಿಲ್ ಮಾಹೆಯವರೆಗೆ ಸಲ್ಲಿಸಿದ ಸೇವೆಯನ್ನು ಪೂರ್ಣ ವರ್ಷದ ಸೇವೆಯೆಂದು ಪರಿಗಣಿಸಿ, ಪರಿಶೀಲನಾ ಪ್ರಕ್ರಿಯೆ ಪ್ರಗತಿಯಲ್ಲಿರುವುದಾಗಿ ತಿಳಿಸಲಾಗಿತ್ತು. ಪರಿಶೀಲಿಸಿದ ನಂತರ ಈ ಅಭ್ಯರ್ಥಿಗಳ ಪೈಕಿ 164 ಅಭ್ಯರ್ಥಿಗಳು ಸೇವಾ ಕೃಪಾಂಕಕ್ಕೆ ಅರ್ಹರಾಗಿರುತ್ತಾರೆ. ವಿಷಯವಾರು, ವರ್ಗವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಮೇಲೆ ಹೇಳಲಾದ 260 ಅಭ್ಯರ್ಥಿಗಳ ಪೈಕಿ ಆಯ್ಕೆಗೆ ಅರ್ಹರಾದ 164 ಅಭ್ಯರ್ಥಿಗಳ ಪಟ್ಟಿಗೆ ಅನುಮೋದನೆ ಕೋರಿ, ವಿಷಯವನ್ನು ಆಡಳಿತ ಮಂಡಳಿ ಮುಂದೆ ಮಂಡಿಸಿ ತೀರ್ಮಾನ ಕೋರಿದೆ.

ಈ ಹಿಂದೆ ಪ್ರಕಟಿಸಲಾದ 519 ಹೊರಸಂಪನ್ಮೂಲ ಅಭ್ಯರ್ಥಿಗಳ ಪೈಕಿ ಆಯ್ಕೆಗೆ ಅರ್ಹರಾದ 409 ಜನ ಹೊರಸಂಪನ್ಮೂಲ ಅಭ್ಯರ್ಥಿಗಳನ್ನು ಹೊರತುಪಡಿಸಿ, ಉಳಿದ 110 ಅಭ್ಯರ್ಥಿಗಳು ಕೋರಿಕೆ ಸಲ್ಲಿಸಿ, ಪುನರ್ ಪರಿಶೀಲಿಸಲು ಅರಿಕೆ ಮಾಡಿಕೊಂಡಿದ್ದರಿಂದ ಅವುಗಳನ್ನು ಪುನರ್ ಪರಿಶೀಲಿಸಿ, 96 ಅಭ್ಯರ್ಥಿಗಳನ್ನು ಆಯ್ಕೆಗೆ ಅನರ್ಹರೆಂದು ನಿರ್ಧರಿಸಿ, 13 ಅಭ್ಯರ್ಥಿಗಳನ್ನು ಆಯ್ಕೆಗೆ ಅರ್ಹರೆಂದು ಪರಿಗಣಿಸಲಾಗಿದೆ. ಅದರ ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.

ಈ ಬಗ್ಗೆ ಪ್ರತ್ಯೇಕ ಕಡತವನ್ನು ಮಾನ್ಯ ಸಂಘದ ಅಧ್ಯಕ್ಷರಿಗೆ ಸಲ್ಲಿಸಿ, ಅನುಮೋದನೆ ಪಡೆಯಲಾಗಿದೆ.

ವಿಷಯವನ್ನು ಆಡಳಿತ ಮಂಡಳಿ ಸಭೆಯ ಅವಗಾಹನೆಗೆ ಮಂಡಿಸಿದೆ.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಬೆಂಗಳೂರು.
ಹೊರಸಂಪನ್ಮೂಲ ಬೋಧಕ ಸಿಬ್ಬಂದಿಗಳ ವಿಷಯವಾರು ಹಾಗೂ ವರ್ಗವಾರು ಅಂತಿಮ ಅರ್ಹ ಅಭ್ಯರ್ಥಿಗಳ ವಿವರ

| ಕ್ರ. ಸಂ. | ವಿಷಯಗಳು | ಆಯ್ಕೆಗೆ ಅರ್ಹರಾದ 260 ಅಭ್ಯರ್ಥಿಗಳ ಪೈಕಿ ಆಯ್ಕೆಗೆ ಅರ್ಹರಾದ ಅಭ್ಯರ್ಥಿಗಳ ಸಂಖ್ಯೆ | ಸಾಮಾನ್ಯ | ಪ.ಜಾತಿ | ಪ.ವರ್ಗ | ಪ್ರವರ್ಗ–1 | 2ಎ | 2ಬಿ | 3ಎ | 3ಬಿ | ಒಟ್ಟು |
|---|---|---|---|---|---|---|---|---|---|---|---|
| 1 | ಪ್ರಾಂಶುಪಾಲರು | 7 | 0 | 0 | 0 | 0 | 1 | 0 | 3 | 3 | **7** |
| 2 | ಕನ್ನಡ | 18 | 0 | 5 | 1 | 1 | 7 | 0 | 2 | 2 | **18** |
| 3 | ಇಂಗ್ಲೀಷ್ | 21 | 1 | 4 | 0 | 1 | 4 | 0 | 3 | 8 | **21** |
| 4 | ಹಿಂದಿ | 13 | 3 | 3 | 0 | 1 | 4 | 1 | 0 | 1 | **13** |
| 5 | ಗಣಿತ | 33 | 3 | 2 | 2 | 2 | 7 | 1 | 7 | 9 | **33** |
| 6 | ವಿಜ್ಞಾನ | 20 | 0 | 6 | 0 | 3 | 4 | 0 | 3 | 4 | **20** |
| 7 | ಸ.ವಿಜ್ಞಾನ (ಆಂಗ್ಲ ಮಾಧ್ಯಮ) | 1 | 1 | 0 | 0 | 0 | 0 | 0 | 0 | 0 | **1** |
| 8 | ಸ.ವಿಜ್ಞಾನ (ಕನ್ನಡ ಮಾಧ್ಯಮ) | 11 | 1 | 3 | 0 | 1 | 3 | 0 | 1 | 2 | **11** |
| 9 | ದೈಹಿಕ ಶಿಕ್ಷಣ | 38 | 1 | 11 | 2 | 3 | 12 | 0 | 2 | 7 | **38** |
| 10 | ಗಣಕಯಂತ್ರ | 2 | 0 | 0 | 0 | 0 | 1 | 0 | 1 | 0 | **2** |
| | ಒಟ್ಟು | **164** | **10** | **34** | **5** | **12** | **43** | **2** | **22** | **36** | **164** |

**ತೀರ್ಮಾನ:**

ಆಡಳಿತ ಮಂಡಳಿಯು ವಿಷಯವನ್ನು ಚರ್ಚಿಸಿತು. ಮಾನ್ಯ ಕರ್ನಾಟಕ ಉಚ್ಛನ್ಯಾಯಾಲಯದ ಆದೇಶವನ್ನು ತ್ವರಿತವಾಗಿ ಅನುಷ್ಟಾನಗೊಳಿಸಬೇಕಾಗಿರುವುದರಿಂದ 260 ಅಭ್ಯರ್ಥಿಗಳ ಪೈಕಿ ಆಯ್ಕೆಗೆ ಅರ್ಹರಾದ 164 ಅಭ್ಯರ್ಥಿಗಳ ಪಟ್ಟಿಯನ್ನು ಮಾನ್ಯ ಎಸ್‌ಸಿಪಿ ಮತ್ತು ಟಿಎಸ್‌ಪಿ ಸಲಹೆಗಾರರು ಪುನರ್ ಪರಿಶೀಲಿಸಬೇಕೆಂದು ಹಾಗೂ ಪರಿಶೀಲನೆಯ ತರುವಾಯ 164 ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಬೇಕೆಂದು ತೀರ್ಮಾನಿಸಲಾಯಿತು.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

**ವಿಷಯ ಸಂಖ್ಯೆ: 8**

**ವಸತಿ ಶಾಲೆ/ಕಾಲೇಜುಗಳಲ್ಲಿ ಆಕಸ್ಮಿಕ ಮರಣ ಹೊಂದಿದ ವಿದ್ಯಾರ್ಥಿಗಳ ಪೋಷಕರುಗಳಿಗೆ ಪರಿಹಾರ ಧನ ನೀಡುವ ಬಗ್ಗೆ.**

1) **ಹಿಂದುಳಿದ ವರ್ಗಗಳ ಮೊರಾರ್ಜಿ ದೇಸಾಯಿ ವಸತಿ ಶಾಲೆ,ವಗ್ಗ,ಬಂಟ್ವಾಳ ತಾಲ್ಲೂಕು ದಕ್ಷಿಣ ಕನ್ನಡ ಜಿಲ್ಲೆ. ಈ ಶಾಲೆಯ 10ನೇ ತರಗತಿ ವಿದ್ಯಾರ್ಥಿ ಕು.ದೀಶಾಕ್ ನಾಯಕ್ ಬಿನ್ನ ಶ್ರೀ ದೇವಣ್ಣ ನಾಯಕ್ ಇವರು ಆಕಸ್ಮಿಕ ಮರಣ ಹೊಂದಿರುವ ಬಗ್ಗೆ.**

ಹಿಂದುಳಿದ ವರ್ಗಗಳ ಮೊರಾರ್ಜಿ ದೇಸಾಯಿ ವಸತಿ ಶಾಲೆ,ವಗ್ಗ,ಬಂಟ್ವಾಳ ತಾಲ್ಲೂಕು ದಕ್ಷಿಣ ಕನ್ನಡ ಜಿಲ್ಲೆ. ಕು.ದೀಶಾಕ್ ನಾಯಕ್ ಬಿನ್ನ ಶ್ರೀ ದೇವಣ್ಣ ನಾಯಕ್ ಇವರು ದಿನಾಂಕ08.01.2016ರಂದು ಬೆಳ್ಳಿಗೆ 8.35ಗಂಟೆಗೆ ಬಾಲಕರ ವಸತಿ ನಿಲಯದ ಫ್ಯಾನಿಗೆ ನೇಣು ಬಿಗಿದುಕೊಂಡು ಮೃತ ಪಟ್ಟಿರುತ್ತಾನೆ ಎಂದು ಜಿಲ್ಲಾ ಅಧಿಕಾರಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರು ತಿಳಿಸಿರುತ್ತಾರೆ.

ಸದರಿ ಪತ್ರದಲ್ಲಿ ಮೃತನ ಆತ್ಮಹತ್ಯೆಗೆ ನೈಜ್ಯ ಕಾರಣ ತಿಳಿದು ಬಂದಿರುವುದಿಲ್ಲವೆಂದು ಈ ಪ್ರಕರಣವನ್ನು ಬಂಟ್ವಾಳ ಪೋಲೀಸ್ ಠಾಣೆಯಲ್ಲಿ ದಾಖಲಿಸಿರುವುದಾಗಿ ತಿಳಿಸಿರುತ್ತಾರೆ. ಈ ವಿದ್ಯಾರ್ಥಿಯ ತಂದೆ 9 ವರ್ಷಗಳ ಹಿಂದೆ ನೇಣು ಬಿಗಿದುಕೊಂಡು ಅತ್ಮಹತ್ಯೆ ಮಾಡಿಕೊಂಡಿರುವುದಾಗಿಯೂ ಹಾಗೂ ಇವರ ತಾಯಿ ಕಣ್ಣಿನ ದೃಷ್ಟಿಯನ್ನು ಕಳೆದುಕೊಂಡಿರುವುದಾಗಿ ತಿಳಿಸಿರುತ್ತಾರೆ. ಜಿಲ್ಲಾ ಅಧಿಕಾರಿಗಳ ಪತ್ರ ದಿನಾಂಕ 09.01.2016ನ್ನು ಈ ಪತ್ರಕ್ಕೆ ಲಗತ್ತಿಸಿದೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ 47ನೇ ಆಡಳಿತ ಮಂಡಳಿಯ ವಸತಿ ಶಾಲೆಯ ವಿದ್ಯಾರ್ಥಿಗಳು ಆಕಸ್ಮಿಕ ಸಾವು ಸಂಭವಿಸಿದಲ್ಲಿ ಮೃತ ವಿದ್ಯಾರ್ಥಿಗಳ ಪೋಷಕರಿಗೆ ರೂ 1.00 ಲಕ್ಷಗಳ ಪರಿಹಾರ ನೀಡುವ ಬಗ್ಗೆ .ವಿಷಯವನ್ನು ಆಡಳಿತ ಮಂಡಳಿಯ ಮುಂದೆ ಮಂಡಿಸಿ ಮೃತ ವಿದ್ಯಾರ್ಥಿಯಾದ ಕು.ದೀಶಾಕ್ ನಾಯಕ್ ಬಿನ್ನ ಶ್ರೀ ದೇವಣ್ಣ ನಾಯಕ್ ಇವನ ತಾಯಿ ಶ್ರೀಮತಿ ಶ್ಯಾಮನಾಯಕ್ ಇವರಿಗೆ ರೂ.ಒಂದು ಲಕ್ಷ ಪರಿಹಾರ ನೀಡುವ ಬಗ್ಗೆ ಆಡಳಿತ ಮಂಡಳಿಯ ತಿರ್ಮಾನ ಕೋರಿದೆ.

2) **ಕುಮಾರ ಸಚಿನ ವೆಂಕಪ್ಪ ಸಿಂಗರೆಡ್ಡಿ, 8ನೇ ತರಗತಿ ವಿದ್ಯಾರ್ಥಿ ಮೊರಾರ್ಜಿ ದೇಸಾಯಿ ವಸತಿ ಶಾಲೆ, ನಿಪ್ಪಾಣಿ (ಗವಾಣ) ಬೆಳಗಾಂ ಜಿಲ್ಲೆ ಈ ವಿದ್ಯಾರ್ಥಿಇಯು ಆಕಸ್ಮಿಕವಾಗಿ ಮೃತನಾಗಿದ್ದು, ಈ ಬಗ್ಗೆ ಅಪಘಾತ ಧನಸಹಾಯವನ್ನು ಮೃತವಿದ್ಯಾರ್ಥಿಯ ಪೋಷಕರಿಗೆ ಮಂಜೂರು ಮಾಡುವ ಬಗ್ಗೆ.**

ಮೊರಾರ್ಜಿ ದೇಸಾಯಿ ವಸತಿ ಶಾಲೆ, ನಿಪ್ಪಾಣಿ(ಗವಾಣ), ಬೆಳಗಾಂ ಜಿಲ್ಲೆ ಈ ಶಾಲೆಯಲ್ಲಿ ಪ್ರಸಕ್ತ ಸಾಲಿಗೆ 8ನೇ ತರಗತಿಯಲ್ಲಿ ಓದುತ್ತಿದ್ದು, ವಿದ್ಯಾರ್ಥಿ ಕುಮಾರ ಸಚಿನ ವೆಂಕಪ್ಪ ಸಿಂಗರೆಡ್ಡಿ ಎಂಬುವರು ದಿನಾಂಕ: 14-08-2011 ರಂದು ಬೆಳಗ್ಗೆ 7.30 ರ ಸುಮಾರಿಗೆ ಈ ಶಾಲೆಯ ಇಬ್ಬರೂ ವಿದ್ಯಾರ್ಥಿಗಳೊಂದಿಗೆ ಕಾವಲುಗಾರನ ಕಣ್ಣು ತಪ್ಪಿಸಿ ವಸತಿ ಶಾಲೆಯ ದೂರವಿರುವ ಹೊಂಡಕ್ಕೆ ಸ್ನಾನ ಮಾಡಲು ಹೋಗಿ ಆಕಸ್ಮಿಕವಾಗಿ ಕಾಲುಜಾರಿ ಮೃತನಾಗಿದ್ದು, ಈ ಬಗ್ಗೆ ದಿನಾಂಕ:16-08-2011 ರಲ್ಲಿ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳು, ಬೆಳಗಾಂ ಜಿಲ್ಲೆ ರವರು ವರದಿ ಮಾಡುತ್ತಾ, ವರದಿಯಲ್ಲಿ ಮೃತ ವಿದ್ಯಾರ್ಥಿಯ ಪೋಷಕರಿಗೆ ಸರ್ಕಾರದಿಂದ ಪರಿಹಾರ ಧನ ಮಂಜೂರು ಮಾಡಲು ವಿನಂತಿಸಿರುತ್ತಾರೆ.

**ಸದಸ್ಯ ಕಾರ್ಯದರ್ಶಿ** **ಅಧ್ಯಕ್ಷರು**

ಅದರಂತೆ ದಿವಂಗತ ಕುಮಾರ ಸಚಿನ ವೆಂಕಪ್ಪ ಸಿಂಗರೆಡ್ಡಿ ಇವರ ತಂದೆ ಶ್ರೀ ವೆಂಕಪ್ಪ ತಿಪ್ಪಣ್ಣ ಸಿಂಗರೆಡ್ಡಿ, ತಾಯಿ ಮಹಾದೇವಿ ಭಂಟನೂರು, ಮುಧೋಳ್ ತಾಲ್ಲೂಕು ಬಾಗಲಕೋಟೆ ಜಿಲ್ಲೆ ಇವರ ಹೆಸರಿಗೆ ಜಂಟಿಯಾಗಿ ರೂ.1.00 ಲಕ್ಷಗಳನ್ನು ಮಂಜೂರು ಮಾಡಲು ಪ್ರಸ್ತಾವನೆಯನ್ನು ಆಡಳಿತ ಮಂಡಳಿಯ ತೀರ್ಮಾನಕ್ಕಾಗಿ ಮಂಡಿಸಿದೆ.

3) ಮೊರಾರ್ಜಿ ದೇಸಾ ಪದವಿ ಪೂರ್ವ ವಿಜ್ಞಾನ ಕಾಲೇಜು, ಸಂತೆ ಕೆಸಲಗೆರೆ, ಮಂಡ್ಯ ತಾಲ್ಲೂಕು, ಇಲ್ಲಿನ ವಿದ್ಯಾರ್ಥಿ ಶೈಕ್ಷಣಿಕ ಪ್ರವಾಸ ಸಂದರ್ಭದಲ್ಲಿ ಆಕಸ್ಮಿಕವಾಗಿ ಮೃತನಾಗಿದ್ದು, ಈ ಬಗ್ಗೆ ಅಪಘಾತ ಧನಸಹಾಯವನ್ನು ಮೃತವಿದ್ಯಾರ್ಥಿಯ ಪೋಷಕರಿಗೆ ಮಂಜೂರು ಮಾಡುವ ಬಗ್ಗೆ.

ಮೊರಾರ್ಜಿ ದೇಸಾಯಿ ವಸತಿ ಪದವಿ ಪೂರ್ವ ವಿಜ್ಞಾನ ಕಾಲೇಜು ಸಂತೆಕೆಸಲಗೆರೆ, ಮಂಡ್ಯ ತಾ॥ ಮತ್ತು ಜಿಲ್ಲೆ ಇಲ್ಲಿಯ ಪಿ.ಯು.ಸಿ. ವಿದ್ಯಾರ್ಥಿಯಾದ ಹರ್ಷನ್ ಗೌಡ ಬಿ.ಜಿ. ಶೈಕ್ಷಣಿಕ ಪ್ರವಾಸ ಸಂದರ್ಭದಲ್ಲಿ ಮೃತ ಪಟ್ಟಿರುವ ಬಗ್ಗೆ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಮಂಡ್ಯ ಜಿಲ್ಲೆ. ರವರು ದಿನಾಂಕ:31.12.2015ರಂದು ವರದಿ ಮಾಡಿರುತ್ತಾರೆ.

ಶಾಲೆಯ ಪ್ರಾಂಶುಪಾಲರು ಪ್ರಾವಾಸಕ್ಕೆ ತೆರಳಿದ ಸಂದರ್ಭದಲ್ಲಿ ಸದರಿ ವಿದ್ಯಾರ್ಥಿಯು ಕೇರಳ ರಾಜ್ಯದ ಕ್ಯಾಲಿಕಟ್ ಪ್ರವಾಸಿ ತಾಣದಲ್ಲಿ ನೀರಿನ ಸೆಳೆತಕ್ಕೆ ಸಿಲುಕಿ ಮೃತಪಟ್ಟಿರುವುದಾಗಿ ಮೃತ ದೇಹವನ್ನು ಮರಣೋತ್ತರ ಪರೀಕ್ಷೆಯ ನಂತರ ಪೋಷಕರ ವಶಕ್ಕೆ ನೀಡಲು ಕ್ರಮ ವಹಿಸಿರುವುದಾಗಿ ತಿಳಿಸಿರುತ್ತಾರೆ.

ಮುಂದುವರೆದು, ಶಾಲಾ ಶೈಕ್ಷಣಿಕ ಪ್ರವಾಸಕ್ಕೆ ಕೇಂದ್ರ ಕಛೇರಿಯ ಅನುಮತಿ ಪಡೆಯದೇ ಪ್ರವಾಸ ಕಾರ್ಯಕ್ರಮ ಹಮ್ಮಿಕೊಂಡಿದ್ದು, ದುರ್ಘಟನೆಗೆ ಕಾರಣವಾಗಿರುತ್ತದೆ. ತತ್ಸಂಬಂಧವಾಗಿ ಸಂಘವು ಪ್ರಾಂಶುಪಾಲರು, ಮೊರಾರ್ಜಿ ದೇಸಾಯಿ ವಸತಿ ಪದವಿ ಪೂರ್ವ ವಿಜ್ಞಾನ ಕಾಲೇಜು ಸಂತೆಕೆಸಲಗೆರೆ, ಮಂಡ್ಯ ಜಿಲ್ಲೆ ರವರಿಗೆ ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಕ್ರಮವಹಿಸಿದೆ.

4) ಹಾಸನ ತಾಲ್ಲೂಕು, ಬೇಲೂರು ರಸ್ತೆ, ಗುಡ್ಡೇನಹಳ್ಳಿಯಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಪದವಿ ಪೂರ್ವ ವಿಜ್ಞಾನ ಕಾಲೇಜಿನಲ್ಲಿ ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿಯಾದ ನಟರಾಜ್ .ಡಿ.ಟಿ. ಆಕಸ್ಮಿಕವಾಗಿ ಮೃತನಾಗಿದ್ದು, ಈ ಬಗ್ಗೆ ಅಪಘಾತ ಧನಸಹಾಯವನ್ನು ಮೃತವಿದ್ಯಾರ್ಥಿಯ ಪೋಷಕರಿಗೆ ಮಂಜೂರು ಮಾಡುವ ಬಗ್ಗೆ.

ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ರವರು ಹಾಸನ ತಾಲ್ಲೂಕು, ಬೇಲೂರು ರಸ್ತೆ, ಗುಡ್ಡೇನಹಳ್ಳಿಯಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಪದವಿ ಪೂರ್ವ ವಿಜ್ಞಾನ ಕಾಲೇಜಿನಲ್ಲಿ ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿಯಾದ ನಟರಾಜ್.ಡಿ.ಟಿ. ಮರಣ ಹೊಂದಿರುವ ಬಗ್ಗೆ ದಿನಾಂಕ;04.12.2015 ರಂದು ವರದಿ ಮಾಡಿರುತ್ತಾರೆ.

ಈ ವಿದ್ಯಾರ್ಥಿಯು ದಿನಾಂಕ:01-12-2015 ರಿಂದ ವಸತಿ ಶಾಲೆಯಿಂದ ಕಾಣೆಯಾಗಿದ್ದು, ವಿದ್ಯಾರ್ಥಿಯು ತನ್ನ ಪೋಷಕರೊಂದಿಗೆ ಇಲ್ಲದೇ ಇರುವುದನ್ನು ಗಮನಿಸಿ, ದಿನಾಂಕ:03-12-2015

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ರಂದು ಪೋಲಿಸ್ ಠಾಣೆಗೆ ದೂರು ನೀಡಿದ್ದು, ವಿದ್ಯಾರ್ಥಿಯ ಶವವು ಕಾಲೇಜಿನ ಆವರಣದ ಪತ್ತೆಯಾಗಿರುತ್ತದೆ. ಪೋಲಿಸರು ಪ್ರಕರಣವನ್ನು ದಾಖಲಿಸಿಕೊಂಡಿರುತ್ತಾರೆ. ಈ ಬಗ್ಗೆ ದಿನಾಂಕ:04.12.2015 ರಂದು ವರದಿ ಮಾಡಿರುತ್ತಾರೆ. ಮೃತ ವಿದ್ಯಾರ್ಥಿಯ ಮರಣೋತ್ತರ ಪರೀಕ್ಷೆಯ ವೈದ್ಯರ ವರದಿ ಹಾಗೂ ಪ್ರಥಮ ಪೋಲೀಸ್ ವರದಿ ಬಂದ ಕೂಡಲೇ ನೀಡುವಂತೆ ಸೂಚಿಸಲಾಗಿದೆ.

ದಿವಂಗತ ನಟರಾಜ್ .ಡಿ.ಟಿ. ಇವರ ಪೋಷಕರ ಹೆಸರಿಗೆ ರೂ.1.00 ಲಕ್ಷಗಳನ್ನು ಮಂಜೂರು ಮಾಡಲು ಪ್ರಸ್ತಾವನೆಯನ್ನು ಆಡಳಿತ ಮಂಡಳಿಯ ತೀರ್ಮಾನಕ್ಕಾಗಿ ಮಂಡಿಸಿದೆ.

ಮೇಲ್ಕಂಡ 4 ಪ್ರಕರಣಗಳಲ್ಲಿ ವಿದ್ಯಾರ್ಥಿಗಳ ಪೋಷಕರಿಗೆ ದಿನಾಂಕ: 16-09-2009 ರಂದು ನಡೆದ ಸಂಘದ 47ನೇ ಆಡಳಿತ ಮಂಡಳಿಯ ತೀರ್ಮಾನದಂತೆ ತಲಾ ರೂ.1.00 ಲಕ್ಷಗಳಂತೆ ಒಟ್ಟು ರೂ.4.00 ಲಕ್ಷಗಳನ್ನು ಸಂಘದ ಕಾರ್ಪಸ್ ಫಂಡ್‌ನ ಬಡ್ಡಿ ಹಣದಲ್ಲಿ ಪಾವತಿಸುವ ಬಗ್ಗೆ ಅನುಮೋದನೆ ಕೋರಿದೆ.

ತೀರ್ಮಾನ:

**ಸಭೆಯು ವಿಷಯದ ಬಗ್ಗೆ ಚರ್ಚಿಸಿತು. ವಸತಿ ಶಾಲೆ/ಕಾಲೇಜುಗಳಲ್ಲಿ ಆಕಸ್ಮಿಕ ಮರಣ ಹೊಂದಿದ 4 ವಿದ್ಯಾರ್ಥಿಗಳ ಪೋಷಕರುಗಳಿಗೆ ಪ್ರತಿ ಪ್ರಕರಣಕ್ಕೆ ರೂ.1.00 ಲಕ್ಷದಂತೆ, ಪರಿಹಾರ ಧನವನ್ನು ನೀಡಲು ಈ ವೆಚ್ಚವನ್ನು ಸಂಘದ ಕಾರ್ಪಸ್ ಫಂಡ್ ನಿಂದ ಭರಿಸಲು ತೀರ್ಮಾನಿಸಲಾಯಿತು.**

ವಿಷಯ ಸಂಖ್ಯೆ: 9

2016-17 ನೇ ಸಾಲಿಗೆ ಸಂಘದ ಅಧೀನದ ವಸತಿ ಶಾಲೆಗಳಿಗೆ ಆಹಾರ ಪದಾರ್ಥಗಳ ಪೂರೈಕೆಗೆ ಟೆಂಡರ್ ಕರೆಯುವ ಬಗ್ಗೆ.

*******

ಸರ್ಕಾರದ ಆದೇಶ ಕ್ರಮ ಸಂಖ್ಯೆ : ಸಕಇ 52 ಮೊದೇಶಾ 2013 ದಿನಾಂಕ : 05-02-2013 ರಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ತಕ್ಷಣ ಕೆಡದ 49 ಆಹಾರ ಪದಾರ್ಥಗಳ ಸರಬರಾಜಿಗೆ 2012-13 ಮತ್ತು 2013-14 ನೇ ಸಾಲಿನಲ್ಲಿ ಜಿಲ್ಲಾವಾರು ಟೆಂಡರ್‌ಗಳನ್ನು ಕರೆದು, ವಿವಿಧ ದಿನಾಂಕಗಳಲ್ಲಿ ಕಾರ್ಯಾದೇಶ ನೀಡಲಾಗಿತ್ತು. (ನ್ಯಾಯಾಲಯದ ಆದೇಶದಿಂದಾಗಿ ಶಿವಮೊಗ್ಗ, ಕಲಬುರಗಿ ಜಿಲ್ಲೆಗಳನ್ನು ಹೊರತು ಪಡಿಸಿದೆ.) ಸಂಬಂಧಪಟ್ಟ ಇಲಾಖೆಗಳು ವಿದ್ಯಾರ್ಥಿನಿಲಯಗಳಿಗೆ ಹಾಗೂ ಆಶ್ರಮ ಶಾಲೆಗಳ ವಿದ್ಯಾರ್ಥಿಗಳಿಗೆ ಆಹಾರ ಸರಬರಾಜು ಮಾಡಲು ಕಾರ್ಯದೇಶ ನೀಡಿದ್ದವು. ಸಂಘವು ತನ್ನ ಅಧೀನದ ವಸತಿ ಶಾಲಾ/ಕಾಲೇಜುಗಳಿಗೆ ಕಾರ್ಯದೇಶ ನೀಡಿದೆ ಹಾಗೂ ಈ ಗುತ್ತಿಗೆದಾರರನ್ನು 2014-15 ನೇ ಸಾಲಿನವರೆಗೆ ಮುಂದುವರೆಸಿದೆ.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು 2015ರ ಜನವರಿ ಮಾಹೆಯಲ್ಲಿ ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಅನುಮೋದನೆಯಂತೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ವಸತಿ ಶಾಲೆಗಳಿಗೆ 49 ತಕ್ಷಣ ಕೆಡದ ಆಹಾರ ಪದಾರ್ಥಗಳ ಸರಬರಾಜಿಗೆ ಇ-ಪೋರ್ಟಲ್ ಮುಖಾಂತರ ವಿಭಾಗವಾರು ಟೆಂಡರ್ ಕರೆದಿದ್ದು, ಟೆಂಡರ್ ಅನುಮೋದನಾ ಸಮಿತಿ ಅನುಮೋದನೆಯ ಮೇರೆಗೆ ಮೂರು ವಿಭಾಗಗಳಿಗೆ ಕಾರ್ಯದೇಶ ನೀಡಿದೆ. ವಿವರಗಳು ಈ ಕೆಳಕಂಡಂತೆ ಇದೆ.

1. ಬೆಂಗಳೂರು ವಿಭಾಗ – (ನ್ಯಾಯಾಲಯದ ತಡೆಯಾಜ್ಞೆ ಇದ್ದುದರಿಂದ ಶಿವಮೊಗ್ಗ ಜಿಲ್ಲೆಯನ್ನು ಹೊರತುಪಡಿಸಿದೆ)
2. ಮೈಸೂರು ವಿಭಾಗ
3. ಬೆಳಗಾವಿ ವಿಭಾಗ

ಕಲಬುರಗಿ ಸಂಚಾರಿ ಪೀಠವು ತಡೆಯಾಜ್ಞೆ ನೀಡಿರುವುದರಿಂದ ಕಲಬುರಗಿ ವಿಭಾಗದ ಟೆಂಡರ್‌ಗಳನ್ನು ತೆರೆದು ಅಂತಿಮಗೊಳಿಸಲು ಸಾಧ್ಯವಾಗಿರುವುದಿಲ್ಲ. ಈ ನ್ಯಾಯಾಲಯವು ದಿನಾಂಕ 04-09-2015 ರಂದು ತಡೆಯಾಜ್ಞೆಯನ್ನು ತೆರವುಗೊಳಿಸಿದೆ (ಆದೇಶ ಪ್ರತಿ ಲಗತ್ತಿಸಿದೆ). ಟೆಂಡರ್ ನಿಯಮಾವಳಿಯಂತೆ ಟೆಂಡರ್‌ಗೆ ನಿಗಧಿಪಡಿಸಿದ ಅವಧಿಯು ಮುಕ್ತಾಯವಾಗಿರುವುದರಿಂದ ಟೆಂಡರ್‌ಗಳನ್ನು ರದ್ದುಪಡಿಸಿದೆ. ಈ ಜಿಲ್ಲೆಗಳಲ್ಲಿನ ವಸತಿ ಶಾಲಾ/ಕಾಲೇಜುಗಳಿಗೆ ಸಂಘದಿಂದ ನಿಗಧಿಪಡಿಸಿದ ಗುತ್ತಿಗೆದಾರರಿಂದ ಅನುಮೋದಿತ ದರದಲ್ಲಿ 49 ತಕ್ಷಣ ಕೆಡದ ಆಹಾರ ಪದಾರ್ಥಗಳನ್ನು ಸರಬರಾಜು ಪಡೆಯಲು ಸಂಘವು ದಿನಾಂಕ: 10-06-2015ರಂದು ನಿರ್ದೇಶಿಸಿದ್ದು, ಅದರಂತೆ ಕ್ರಮವಹಿಸಿರುತ್ತಾರೆ. ಶಿವಮೊಗ್ಗ ಹಾಗೂ ಕಲಬುರಗಿ ಜಿಲ್ಲೆಯ ವಸತಿ ಶಾಲೆಗಳಿಗೆ ಪ್ರತಿ ಮಾಹೆ ಪ್ರತಿ ವಿದ್ಯಾರ್ಥಿಗೆ ರೂ. 1200.00 ರಂತೆ ಬಿಡುಗಡೆ ಮಾಡಲಾಗುತ್ತಿದ್ದು, ಸ್ಥಳೀಯವಾಗಿ ಆಹಾರ ಪದಾರ್ಥಗಳನ್ನು ಸರಬರಾಜು ಮಾಡಿಕೊಳ್ಳಲಾಗುತ್ತಿದೆ.

ಶಿವಮೊಗ್ಗ ಜಿಲ್ಲೆಗೆ 2013-14 ನೇ ಸಾಲಿನಲ್ಲಿ ಆಹಾರ ಪದಾರ್ಥಗಳ ಸರಬರಾಜಿಗಾಗಿ ಕರೆದ ಟೆಂಡರ್ ವಿರುದ್ಧ ರಿಟ್ ಅರ್ಜಿಯನ್ನು ಉಚ್ಛನ್ಯಾಯಾಲಯದಲ್ಲಿ ಸಲ್ಲಿಸಿದ್ದು, ಉಚ್ಛನ್ಯಾಯಾಲಯವು ರಿಟ್ ಅರ್ಜಿಯ ಮೇಲೆ ದಿನಾಂಕ : 10-06-2015 ರಂದು ಈ ಕೆಳಕಂಡಂತೆ ಆದೇಶ ನೀಡಿದೆ.

"Learned counsel for the petitioner submits that in view of lapse of time, the prayer made in the petition does not survive for consideration. Accordingly, the petition is disposed of as infructuous.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

2015-16 ನೇ ಸಾಲಿನಲ್ಲಿ ಕರೆದ ಆಹಾರ ಪದಾರ್ಥಗಳ ಸರಬರಾಜಿಗಾಗಿ ಕರೆದ ಟೆಂಡರ್ ಷರತ್ತಿನಲ್ಲಿ, ಗುತ್ತಿಗೆದಾರರು ಸದರಿ ಸಾಲಿಗೆ ಆಹಾರ ಪದಾರ್ಥಗಳ ಸರಬರಾಜು ಮಾಡಲು ಒಂದು ವರ್ಷದ ಅವಧಿಯನ್ನು ನಿಗಧಿ ಪಡಿಸಿ ಆದೇಶ ನೀಡಲಾಗಿದೆ.

ಸಂಘವು 2015-16 ನೇ ಸಾಲಿಗೆ 49 ತಕ್ಷಣ ಕೆಡದ ಆಹಾರ ಪದಾರ್ಥಗಳ ಪೂರೈಕೆಗೆ ಟೆಂಡರ್ ಕರೆದು ಅಂತಿಮಗೊಳಿಸಿದ ನಂತರ ಸರ್ಕಾರವು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳಿಗೆ ಮತ್ತು ಸಂಘದ ವಸತಿ ಶಾಲೆಗಳಿಗೆ ಆಹಾರ ಪದಾರ್ಥಗಳ ಪೂರೈಕೆಗೆ ಟೆಂಡರ್ ಕರೆಯಲು ಸಮಿತಿಯನ್ನು ರಚಿಸಿ ಆದೇಶಿಸಿದೆ. ತದನಂತರ ಈ ಆದೇಶಕ್ಕೆ ತಿದ್ದುಪಡಿ ತಂದು ಸಂಘದ ಅಧೀನದ ವಸತಿ ಶಾಲೆಗಳನ್ನು ಕೈಬಿಡಲಾಗಿದೆ.

2016-17 ನೇ ಸಾಲಿಗೆ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಸತಿ ನಿಲಯಗಳಿಗೆ ಆಹಾರ ಪದಾರ್ಥಗಳ ಪೂರೈಕೆಗೆ ಈಗಾಗಲೇ ಸದರಿ ಇಲಾಖೆಗಳು ಅಳವಡಿಸಿಕೊಂಡ ಟೆಂಡರ್ ದಸ್ತಾವೇಜನ್ನು ಅಳವಡಿಸಿಕೊಂಡು ವಸತಿ ಶಾಲೆಗಳಿಗೆ ಟೆಂಡರ್ ಕರೆಯಲು ಸಂಘದ ಉಪಾಧ್ಯಕ್ಷರು ಹಾಗೂ ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಚಿವರು ಕಡತ ಸಂಖ್ಯೆ: ಕವಶಿಸಸ/ಶಿಕ್ಷಣ/ಸಿಆರ್-15/2015-16 ರಲ್ಲಿ ನಿರ್ದೇಶಿಸಿರುತ್ತಾರೆ. ಈ ಟೆಂಡರ್ ದಸ್ತಾವೇಜಿನಲ್ಲಿ ತರಕಾರಿಗಳು, ಬಾಳೆಹಣ್ಣು, ಮೊಟ್ಟೆ ಹಾಗೂ ಆಹಾರ ಪದಾರ್ಥಗಳನ್ನು ಸೇರಿಸಿಕೊಂಡು ಟೆಂಡರ್‌ಗಳನ್ನು ಕರೆಯಲಾಗಿದೆ.

ವಸತಿ ಶಾಲೆಗಳ ಜಿಲ್ಲಾ ಸಮನ್ವಯ ಅಧಿಕಾರಿಗಳು 02-01-2016 ರ ಮನವಿಯಲ್ಲಿ ಆಹಾರ ಪದಾರ್ಥಗಳ ಜೊತೆಗೆ ತರಕಾರಿ, ಗ್ಯಾಸ್, ಮೊಟ್ಟೆ, ಬಾಳೆಹಣ್ಣು ಇತ್ಯಾಧಿಗಳ ಸರಬರಾಜಿಗೆ ರಾಜ್ಯಮಟ್ಟದಲ್ಲಿ ಟೆಂಡರ್ ಕರೆಯುವ ಬಗ್ಗೆ ಮನವಿ ಸಲ್ಲಿಸಿರುತ್ತಾರೆ. ವಸತಿ ಶಾಲೆಗಳಿಗೆ ಅಡುಗೆ ಅನಿಲ, ಪಡಿತರ ಅಕ್ಕಿ ಮತ್ತು ಗೋಧಿಗಳನ್ನು ಸ್ಥಳೀಯವಾಗಿ ನಿಗಧಿತ ಏಜೆನ್ಸಿಗಳ ಮುಖಾಂತರ ಖರೀದಿಸ ಬೇಕಾಗಿರುತ್ತದೆ. ಈ ಪದಾರ್ಥಗಳನ್ನು ಹೊರತುಪಡಿಸಿ ರಾಜ್ಯಮಟ್ಟದಲ್ಲಿ ಟೆಂಡರ್ ಕರೆದು ನಿಗಧಿಪಡಿಸುವ ಗುತ್ತಿಗೆದಾರರಿಗೆ ಅಡುಗೆ ಅನಿಲ, ಪಡಿತರ ಅಕ್ಕಿ ಮತ್ತು ಗೋಧಿಗಳ ಮೊತ್ತವನ್ನು ಹೊರತುಪಡಿಸಿ ಸಂಘದ ಕೇಂದ್ರ ಕಛೇರಿಯಿಂದ ಪಾವತಿಸಬೇಕಾಗಿರುತ್ತದೆ.

ಮೇಲ್ಕಂಡ ಅಂಶವನ್ನು ಆಡಳಿತ ಮಂಡಳಿಯ ಮುಂದೆ ಮಂಡಿಸುತ್ತಾ, ಈ ಕೆಳಕಂಡ ಅಂಶಗಳ ಮೇಲೆ ಆಡಳಿತ ಮಂಡಳಿಯ ತೀರ್ಮಾನ ಕೋರಿದೆ.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

1. ಸಂಘವು 2016-17 ನೇ ಸಾಲಿಗೆ ಸಂಘದ ಅಧೀನದ ವಸತಿ ಶಾಲೆಗಳಿಗೆ ಮಾತ್ರ ಆಹಾರ ಪದಾರ್ಥಗಳ ಪೂರೈಕೆಗೆ ಅಥವಾ ವಸತಿ ಶಾಲೆಗಳು ಸೇರಿದಂತೆ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಸತಿ ನಿಲಯ ಹಾಗೂ ಆಶ್ರಮ ಶಾಲೆಗಳಿಗೆ ಆಹಾರ ಪದಾರ್ಥಗಳ ಪೂರೈಕೆಗೆ ಟೆಂಡರ್ ಕರೆಯುವ ಬಗ್ಗೆ.
2. ಸಂಘವು ಟೆಂಡರ್‌ನ್ನು ವಿಭಾಗವಾರು ಕರೆಯಬೇಕೆ ಅಥವಾ ಜಿಲ್ಲಾವಾರು ಕರೆಯಬೇಕೆ ಎಂಬುದರ ಬಗ್ಗೆ.
3. ಸಂಘವು 2016-17 ನೇ ಸಾಲಿಗೆ ಅಡುಗೆ ಅನಿಲ, ಪಡಿತರ ಅಕ್ಕಿ ಮತ್ತು ಗೋಧಿಯನ್ನು ಹೊರತು ಪಡಿಸಿ ಬಾಕಿ ಉಳಿದ ಆಹಾರ ಪದಾರ್ಥಗಳ ಜೊತೆಗೆ ತರಕಾರಿ, ಮೊಟ್ಟೆ, ಬಾಳೆಹಣ್ಣು ಸೇರಿಸಿದಂತೆ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ಜಿಲ್ಲಾವಾರು ಟೆಂಡರ್ ಕರೆಯಲು ಅಳವಡಿಸಿಕೊಂಡ ದಸ್ತಾವೇಜಿನಂತೆ ತಿಳಿಸಿರುವ ಎಲ್ಲಾ ಪದಾರ್ಥಗಳನ್ನು ಸೇರಿಸಿಕೊಂಡು ಟೆಂಡರ್ ಕರೆಯುವ ಬಗ್ಗೆ.
4. ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕ ನಿಯಮ 1999 ರ ಅಧಿನಿಯಮ 17 (ಬಿ) ರಡಿ ಟೆಂಡರ್‌ಗೆ ಇಡಲಾದ ಮೊತ್ತವು ರೂ. 2.00 ಕೋಟಿ ಗಿಂತ ಹೆಚ್ಚಾದಲ್ಲಿ, 60 ದಿನಗಳ ಕಾಲಾವಕಾಶವನ್ನು ಟೆಂಡರ್ ಕರೆದ ದಿನಾಂಕ ಮತ್ತು ಟೆಂಡರ್ ಸಲ್ಲಿಸಲು ನಿಗಧಿಪಡಿಸುವ ದಿನಾಂಕಗಳನ್ನು ಹೊರತು ಪಡಿಸಿ ಕಾಲಾವಕಾಶ ನೀಡಬೇಕಾಗಿದೆ. 2016-17 ನೇ ಸಾಲಿನ ಆಹಾರ ಪದಾರ್ಥಗಳ ಪೂರೈಕೆಯು 2016 ಮೇ ಅಂತ್ಯ ಅಥವಾ ಜೂನ್ ಮೊದಲನೇ ವಾರದಿಂದ ಪ್ರಾರಂಭವಾಗುವುದರಿಂದ 60 ದಿನಗಳ ಕಾಲಾವಕಾಶ ನಿಗಧಿಪಡಿಸಬಹುದಾಗಿದೆ. ಈ ಬಗ್ಗೆ ಆದೇಶ.
5. ವಿಭಾಗವಾರು ಟೆಂಡರ್ ಕರೆಯಲು ತೀರ್ಮಾನಿಸಿದಲ್ಲಿ ಅಂದಾಜು ಟೆಂಡರ್ ಮೊತ್ತವು ರೂ. 15.00 ಕೋಟಿಗಿಂತ ಹೆಚ್ಚಾಗುತ್ತಿದ್ದು, ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**<u>ತೀರ್ಮಾನ:</u>**

**ಆಡಳಿತ ಮಂಡಳಿಯು ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಿ, ಈ ಕೆಳಕಂಡಂತೆ ತೀರ್ಮಾನ ಕೈಗೊಳ್ಳಲಾಯಿತು.**

1. **2016-17ನೇ ಸಾಲಿಗೆ ಸಂಘದ ಅಧೀನದ ವಸತಿ ಶಾಲೆ/ಕಾಲೇಜುಗಳಿಗೆ ಮಾತ್ರ ಟೆಂಡರ್ ಕರೆಯಲು ಅನುಮೋದಿಸಲಾಯಿತು.**
2. **2016-17ನೇ ಸಾಲಿನಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ತಕ್ಷಣವೇ ಕೆಡದ 49 ಆಹಾರ ಪದಾರ್ಥಗಳ ಪೂರೈಕೆಗಾಗಿ ವಿಭಾಗವಾರು ಟೆಂಡರ್‌ಗಳನ್ನು ಕರೆದಿದ್ದು,**

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಆಹಾರ ಪದಾರ್ಥಗಳು ಸಮರ್ಪಕವಾಗಿ ಪೂರೈಕೆಯಾಗುತ್ತಿರುವುದನ್ನು ಸಭೆ ಗಮನಿಸಿತು. ಅಂತಿಮವಾಗಿ ಸಭೆಯು 2016-17ನೇ ಸಾಲಿಗೆ ವಿಭಾಗವಾರು, ವಸತಿ ಶಾಲೆ/ಕಾಲೇಜುಗಳಿಗೆ ಟೆಂಡರ್ ಕರೆಯಲು ತೀರ್ಮಾನಿಸಿತು.

3. ಸಭೆಯು ವಸತಿ ಶಾಲೆಗಳಿಗೆ ಅಡುಗೆ ಅನಿಲ, ಪಿಡಿಎಸ್ ಸಾಮಾಗ್ರಿಗಳನ್ನು ಹೊರತುಪಡಿಸಿ, ತರಕಾರಿ, ಹಾಲು, ಹಣ್ಣು, ಮೊಟ್ಟೆ, ಇತ್ಯಾಧಿ ಎಲ್ಲಾ ಪದಾರ್ಥಗಳನ್ನು ಸೇರಿಸಿಕೊಂಡು ಟೆಂಡರ್ ಕರೆಯಲು ಅನುಮೋದಿಸಿತು.

4. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 17(1)ರಲ್ಲಿ ತಿಳಿಸಿದ 60 ದಿನಗಳ ಅವಧಿಯನ್ನು 30 ದಿನಗಳಿಗೆ ಮಿತಿಗೊಳಿಸುವ ಬಗ್ಗೆ ಸರ್ಕಾರದ ಅನುಮೋದನೆ ಪಡೆದು ಟೆಂಡರ್ ಕರೆಯಲು ತೀರ್ಮಾನಿಸಲಾಯಿತು.

5. ಆಡಳಿತ ಮಂಡಳಿಯು ವಿಭಾಗವಾರು ಟೆಂಡರ್ ಕರೆದು ಅನುಮೋದಿಸಿದ್ದು, ಇದು ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ತ್ವರಿತವಾಗಿ ಆಹಾರ ಪೂರೈಸುವುದಕ್ಕೆ ಸಂಬಂಧಪಟ್ಟಿರುವುದರಿಂದ ವಿಳಂಬ ಮಾಡದೇ ವಿಭಾಗವಾರು, ಟೆಂಡರ್ ಕರೆಯಬೇಕೆಂದು ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ: 10**

**ಪರಿಶಿಷ್ಟ ವರ್ಗಗಳ ಏಕಲವ್ಯ ಮಾದರಿ ವಸತಿ ಶಾಲೆಗಳು ಹಾಗೂ ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳಲ್ಲಿ ಮೂಲನಿವಾಸಿಗಳಿಗೆ ದಾಖಲಾತಿಗೆ ಸೀಟುಗಳನ್ನು ಕಾಯ್ದಿರಿಸುವ ಬಗ್ಗೆ.**

ರಾಜ್ಯದಲ್ಲಿ ಪರಿಶಿಷ್ಟ ವರ್ಗದ ಗ್ರಾಮೀಣ ಭಾಗದ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ ರಾಜ್ಯಸರ್ಕಾರದ 68 ವಸತಿ ಶಾಲೆಗಳು ಹಾಗೂ ಕೇಂದ್ರ ಸರ್ಕಾರದ 6 ಏಕಲವ್ಯ ಮಾದರಿ ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ.

ಮೇಲೆ ಹೇಳಲಾದ 74 ವಸತಿ ಶಾಲೆಗಳಿಗೆ 6ನೇ ತರಗತಿಗೆ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಆಯ್ಕೆ ಪರೀಕ್ಷೆ ನಡೆಸಿ ಕೌನ್ಸಿಲಿಂಗ್ ಮುಖಾಂತರ ದಾಖಲು ಮಾಡಿಕೊಳ್ಳಲಾಗುತ್ತಿದೆ. ಈ ವಸತಿ ಶಾಲೆಗಳಲ್ಲಿ 6ನೇ ತರಗತಿಗೆ ನಿಗಧಿಪಡಿಸಿದ ದಾಖಲಾತಿ ಸಂಖ್ಯೆ ಹಾಗೂ ನಿಗಧಿಪಡಿಸಿದ ಮೀಸಲಾತಿ ಪ್ರಮಾಣವು ಈ ಕೆಳಕಂಡಂತೆ ಇದೆ.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

| ಕ್ರ. ಸಂ. | ವಸತಿ ಶಾಲೆಗಳ ವಿವರ | ಪ್ರತಿ ವಸತಿ ಶಾಲೆಗೆ 6ನೇ ತರಗತಿಗೆ ನಿಗಧಿಪಡಿಸಿದ ಸೀಟುಗಳ ಸಂಖ್ಯೆ | ಪರಿಶಿಷ್ಟ ವರ್ಗದವರಿಗೆ ನಿಗಧಿಪಡಿಸಿದ ಮೀಸಲಾತಿ ಪ್ರಮಾಣ | | ಇತರ ವರ್ಗದವರಿಗೆ ನಿಗಧಿಪಡಿಸಿದ ಮೀಸಲಾತಿ ಪ್ರಮಾಣ | |
|---|---|---|---|---|---|---|
| | | | ಪ್ರಮಾಣ | ಸೀಟುಗಳ ಸಂಖ್ಯೆ | ಪ್ರಮಾಣ | ಸೀಟುಗಳ ಸಂಖ್ಯೆ |
| 1 | ಮೊ.ದೇ.ವ.ಶಾಲೆಗಳು | 50 | 75% | 38 | 25% | 12 |
| 2 | ಕಿ.ರಾ.ಚೆ.ವ.ಶಾಲೆಗಳು | 50 | 60% | 20 | 40% | 20 |
| 3 | ಏಕಲವ್ಯ ಮಾದರಿ ವಸತಿ ಶಾಲೆಗಳು | 60 | 75% | 45 | 25% | 15 |

ಮೊರಾರ್ಜಿ ದೇಸಾಯಿ/ಏಕಲವ್ಯ ಮಾದರಿ ವಸತಿ ಶಾಲೆಗಳು ಸಹ ಶಿಕ್ಷಣ ವಾಗಿದ್ದು, ಶೇ.50 ರಷ್ಟು ಸೀಟುಗಳನ್ನು ಬಾಲಕಿಯರಿಗೆ ಕಾಯ್ದಿರಿಸಲಾಗಿದೆ. ಆದರೆ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳು ಸಂಪೂರ್ಣ ಬಾಲಕಿಯರ ವಸತಿ ಶಾಲೆಗಳಾಗಿದೆ. ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ಕೊಡಗು ಮತ್ತು ಮೈಸೂರು ಇವರು ಈ ವಸತಿ ಶಾಲೆಗಳಲ್ಲಿ ಬುಡಕಟ್ಟು ಜನಾಂಗದ ಮೂಲನಿವಾಸಿಗಳಿಗೆ (Primitive Tribe) 6 ನೇ ತರಗತಿಗೆ ಪ್ರತ್ಯೇಕ ಮೀಸಲಾತಿ ನಿಗಧಿಪಡಿಸುವಂತೆ ಪತ್ರ ಬರೆದಿರುತ್ತಾರೆ. ಮೈಸೂರು, ಚಾಮರಾಜನಗರ, ಕೊಡಗು, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಜೇನುಕುರುಬ, ಕಾಡುಕುರುಬ, ಎರವ, ಸೋಲಿಗ, ಕೊರಗ ಜನಾಂಗದವರು ವಾಸಿಸುತ್ತಿದ್ದಾರೆ. ಈ ಜಿಲ್ಲೆಗಳಲ್ಲಿನ ಪರಿಶಿಷ್ಟ ವರ್ಗದ ಮೊರಾರ್ಜಿ ದೇಸಾಯಿ/ ಕಿತ್ತೂರು ರಾಣಿ ಚೆನ್ನಮ್ಮ/ ಏಕಲವ್ಯ ಮಾದರಿ ವಸತಿ ಶಾಲೆಗಳಿಗೆ ಪ್ರತ್ಯೇಕ ಮೀಸಲಾತಿ ಕಲ್ಪಿಸುವುದು ಸೂಕ್ತವಾಗಿದೆ. ಒಂದು ವೇಳೆ ಬುಡಕಟ್ಟು ಜನಾಂಗದ ಮೂಲ ನಿವಾಸಿಗಳ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ, ಬೇರೆ ಬುಡಕಟ್ಟಿನ ಜನಾಂಗದ ವಿದ್ಯಾರ್ಥಿಗಳನ್ನು ಸೇರಿಸಲಾಗುವುದು.

ವಿಷಯವನ್ನು ಆಡಳಿತ ಮಂಡಳಿಯ ಮುಂದೆ ಮಂಡಿಸಿ, ಮೂಲ ನಿವಾಸಿಗಳಿಗೆ 6 ನೇ ತರಗತಿಯ ದಾಖಲಾತಿಗೆ ಸೂಕ್ತ ಮೀಸಲಾತಿ ಪ್ರಮಾಣವನ್ನು ನಿಗದಿಪಡಿಸುವ ಬಗ್ಗೆ ತೀರ್ಮಾನಕ್ಕೆ ಮಂಡಿಸಿದೆ. ತೀರ್ಮಾನದಂತೆ ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆ ಸಲ್ಲಿಸಿ ಆದೇಶ ಪಡೆಯಲು ಕ್ರಮವಹಿಸಲಾಗುವುದು.

ತೀರ್ಮಾನ:

**ಆಡಳಿತ ಮಂಡಳಿಯು ವಿಷಯವನ್ನು ಚರ್ಚಿಸಿತು. ಈ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ: ಸಕಇ 10 ಎಸ್‌ಎಲ್‌ಪಿ 2015, ದಿನಾಂಕ:12-01-2016ರಲ್ಲಿ ತಿಳಿಸಿರುವಂತೆ ಕ್ರಮ ಜರುಗಿಸತಕ್ಕದ್ದೆಂದು ಸಭೆಯು ತೀರ್ಮಾನಿಸಿತು.**

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

<u>ವಿಷಯ ಸಂಖ್ಯೆ: 11</u>

**<u>ಮೊರಾರ್ಜಿ ದೇಸಾಯಿ / ಕಿತ್ತೂರು ರಾಣಿ ಚೆನ್ನಮ್ಮ/ ಏಕಲವ್ಯ ವಸತಿ ಶಾಲೆಗಳಿಗೆ ನೇರ ನೇಮಕಾತಿ ಹೊಂದಿದ ಖಾಯಂ ಸ್ಟಾಫ್ ನರ್ಸ್ ವೇತನ ತಾರತಮ್ಮ ಸರಿಪಡಿಸುವ ಬಗ್ಗೆ.</u>**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಸ್ಟಾಫ್ ನರ್ಸ್‌ಗಳಿಗೆ ವೃಂದ ಮತ್ತು ನೇಮಕಾತಿ ವಿನಿಯಮಗಳು-2011ರಲ್ಲಿ ವೇತನ ಶ್ರೇಣಿ ರೂ. 16000-29600ನ್ನು (ಪರಿಷ್ಕೃತ ವೇತನ ಶ್ರೇಣಿ) ನಿಗಧಿಪಡಿಸಿದೆ. ಪ್ರಸ್ತುತ ಸಂಘದ ಅಧೀನದ ವಸತಿ ಶಾಲೆಗಳಲ್ಲಿ 216 ಖಾಯಂ ಸ್ಟಾಫ್ ನರ್ಸ್‌ಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಈ ಹಿಂದೆ ಇವರು ಸಂಘಕ್ಕೆ ಮನವಿ ಸಲ್ಲಿಸಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸ್ಟಾಫ್ ನರ್ಸ್‌ಗಳಿಗೆ ನಿಗದಿಪಡಿಸಿದ ವಿದ್ಯಾರ್ಹತೆಯನ್ನು ಸಂಘದ ಸ್ಟಾಫ್ ನರ್ಸ್‌ಗಳಿಗೂ ಸಹ ಅಳವಡಿಸಿಕೊಂಡು ಆಯ್ಕೆ ಮಾಡಿಕೊಳ್ಳಲಾಗಿದೆಯೆಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸ್ಟಾಫ್ ನರ್ಸ್‌ಗಳಿಗೆ ನಿಗಧಿಪಡಿಸಿದ ವೇತನ ಶ್ರೇಣಿ ವೇತನ ಶ್ರೇಣಿ ರೂ. 17650-32000ಗಳ ಬದಲಾಗೀ ರೂ.16000-29600ಗಳಿಗೆ ನಿಗಧಿಪಡಿಸಿ, ವೇತನ ಶ್ರೇಣಿಯಲ್ಲಿ ವ್ಯತ್ಯಾಸ ಇರುತ್ತದೆ. ಈ ಹಿನ್ನಲೆಯಲ್ಲಿ ಮೊರಾರ್ಜಿ ದೇಸಾಯಿ/ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ಟಾಫ್ ನರ್ಸ್‌ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸ್ಟಾಫ್ ನರ್ಸ್‌ಗಳಿಗೆ ನಿಗದಿಪಡಿಸಿದ ವೇತನ ಶ್ರೇಣಿ ಅಂದರೆ, ನಿಗದಿಪಡಿಸಲು ಕೋರಿರುತ್ತಾರೆ. ಈ ವಿಷಯವನ್ನು ದಿನಾಂಕ: 03-11-2015 ರಂದು ನಡೆದ 64ನೇ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಲಾಗಿ ಈ ಕೆಳಕಂಡಂತೆ ತೀರ್ಮಾನ ಕೈಗೊಂಡಿದೆ.

" ಆಡಳಿತ ಮಂಡಳಿ ಸಭೆಯ ವಿಷಯವನ್ನು ದೀರ್ಘವಾಗಿ ಚರ್ಚಿಸಿದ್ದು, ವಸತಿ ಶಾಲೆಗಳಲ್ಲಿ ಪ್ರಸ್ತುತ ಖಾಯಂ ಆಗಿ ಕಾರ್ಯನಿರ್ವಹಿಸುತ್ತಿರುವ ಸ್ಟಾಫ್ ನರ್ಸ್‌ಗಳಿಗೆ ವೇತನ ಶ್ರೇಣಿಯನ್ನು ಸಂಘದ ವೃಂದ ಮತ್ತು ನೇಮಕಾತಿ ವಿನಿಯಮಗಳಲ್ಲಿ ಹಾಲಿ ನಿಗಧಿಪಡಿಸಿರುವ ವೇತನ ಶ್ರೇಣಿ ರೂ.16000-29600ರ ಬದಲಾಗಿ ರೂ.17650-32000 ಗಳಿಗೆ ಪರಿಷ್ಕರಿಸಿದಲ್ಲಿ ಭರಿಸಬೇಕಾದ ವೆಚ್ಚದ ವಿವರಗಳು ಮತ್ತು ಅವರ ಕಾರ್ಯಭಾರದ ವಿವರಗಳೊಂದಿಗೆ ಮುಂದಿನ ಆಡಳಿತ ಮಂಡಳಿ ಸಭೆಗೆ ಮಂಡಿಸಲು ತೀರ್ಮಾನಿಸಿತು.".

ವಸತಿ ಶಾಲೆಗಳಲ್ಲಿ ಖಾಯಂ ಸ್ಟಾಫ್ ನರ್ಸ್‌ಗಳು ಮನವಿ ಸಲ್ಲಿಸಿ, ಅವರು ನಿರ್ವಹಿಸಬೇಕಾದ ಕರ್ತವ್ಯ ಮತ್ತು ಜವಾಬ್ದಾರಿಗಳ ಬಗ್ಗೆ ವಿವರಿಸಿ, ವೇತನ ಶ್ರೇಣಿ ತಾರತಮ್ಯವನ್ನು ಸರಿಪಡಿಸುವಂತೆ ಕೋರಿರುತ್ತಾರೆ. ಖಾಯಂ ಸ್ಟಾಫ್ ನರ್ಸ್‌ಗಳ ಕರ್ತವ್ಯಗಳ ವಿವರಗಳನ್ನು ಅನುಬಂಧದಲ್ಲಿ ತೋರಿಸಿದೆ.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಶುಶ್ರೂಷಕರ ಮನವಿಯನ್ನು ಪರಿಗಣಿಸಿದಲ್ಲಿ ವಾರ್ಷಿವಾಗಿ ಭರಿಸಬೇಕಾದ ಹಾಗೂ 2016-17ನೇ ಸಾಲಿನಲ್ಲಿ ಭರಿಸಬೇಕಾದ ಹೆಚ್ಚುವರಿ ವೆಚ್ಚದ ವಿವರಗಳು ಈ ಕೆಳಕಂಡಂತೆ ಇವೆ.

| ಕ್ರ. ಸಂ | ವೇತನ ಶ್ರೇಣಿಯ ವಿವರ | ವೇತನ ಶ್ರೇಣಿಯ ಕನಿಷ್ಟ ವೇತನ | ಪ್ರತಿ ಸಿಬ್ಬಂದಿಗೆ ಚಾಲ್ತಿಯಲ್ಲಿರುವ ಮನೆ ಬಾಡಿಗೆ ಭತ್ಯೆ ಮತ್ತು ತುಟ್ಟಿ ಭತ್ಯೆ @ ಶೇ. 42.5 ರಂತೆ | ಒಟ್ಟು |
|---|---|---|---|---|
| 1 | 17650-32000 | 17650 | 7501 | 25151 |
| 2 | 16000-29600 | 16000 | 6800 | 22800 |
| | ಪ್ರತಿ ಸಿಬ್ಬಂದಿಗೆ ಮಾಸಿಕ ವ್ಯತ್ಯಾಸ | 1650 | 701 | 2351 |
| | ಪ್ರತಿ ಸಿಬ್ಬಂದಿಗೆ ವಾರ್ಷಿಕ ವ್ಯತ್ಯಾಸ | 19800 | 8412 | 28212 |
| | 216 ಸಿಬ್ಬಂದಿಗಳಗೆ ವಾರ್ಷಿಕವಾಗಿ ಭರಿಸಬೇಕಾದ ವ್ಯತ್ಯಾಸದ ಮೊತ್ತ | - | - | 60,93,792/- |

ವಿಷಯವನ್ನು ಅಡಳಿತ ಮಂಡಳಿಯ ಮುಂದೆ ಮಂಡಿಸಿ, ಮೊರಾರ್ಜಿ ದೇಸಾಯಿ/ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳ ಖಾಯಂ ಸ್ಟಾಫ್ ನರ್ಸ್ ವೇತನ ಶ್ರೇಣಿಯನ್ನು ಸಂಘದ ವೃಂದ ಮತ್ತು ನೇಮಕಾತಿ ವಿನಿಯಮಗಳಲ್ಲಿ ಹಾಲಿ ನಿಗದಿಪಡಿಸಿರುವ ವೇತನ ಶ್ರೇಣಿ ರೂ. 16000-29600ರ ಬದಲಾಗಿ ರೂ.17650-32000ಗಳಿಗೆ ನಿಗದಿಪಡಿಸಲು ಅನುಮೋದನೆ ಕೋರಿದೆ. ಅನುಮೋದಿಸಿದಲ್ಲಿ ರೂ. 60.94 ಲಕ್ಷಗಳ ಹೆಚ್ಚುವರಿ ವೆಚ್ಚವನ್ನು ಭರಿಸಬೇಕಾಗುತ್ತದೆ.

ಆಡಳಿತ ಮಂಡಳಿಯು ಅನುಮೋದಿಸಿದಲ್ಲಿ, ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆ ಸಲ್ಲಿಸಿ, ಸಂಘದ ವೃಂದ ಮತ್ತು ನೇಮಕಾತಿ ವಿನಿಯಮಗಳಿಗೆ ತಿದ್ದುಪಡಿ ಅಧಿಸೂಚನೆ ಪಡೆಯಲು ಕ್ರಮವಹಿಸಲಾಗುವುದು.

ವಿಷಯವನ್ನು ಆಡಳಿತ ಮಂಡಳಿ ಮಂಡಿಸಿ, ಅನುಮೋದಿಸಿದಲ್ಲಿ, ಸಂಘದ ವೃಂದ ಮತ್ತು ನೇಮಕಾತಿ ವಿನಿಯಮಗಳು 2011ಕ್ಕೆ ಸರ್ಕಾರದಿಂದ ತಿದ್ದುಪಡಿ ಆದೇಶ ಹೊರಡಿಸುವ ಬಗ್ಗೆ ಪ್ರಸ್ತಾವನೆ ಸಲ್ಲಿಸಲಾಗುವುದು.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

## ಅನುಬಂಧ-1

## ಮೊರಾರ್ಜಿ ದೇಸಾಯಿ / ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳಲ್ಲಿ ಖಾಯಂ ನೇಮಕಾತಿಗೊಂಡು ಶುಶ್ರೂಷಕರು ನಿರ್ವಹಿಸುತ್ತಿರುವ ಕರ್ತವ್ಯಗಳು:

1. *ದೈನಂದಿನ ಕಾರ್ಯ ಚಟುವಟಿಕೆಗಳು.*
   - *ಪ್ರತಿ ಮುಂಜಾನೆ ಮತ್ತು ಸಂಜೆ ವಿದ್ಯಾರ್ಥಿ ನಿಲಯದ ಪರೀವೀಕ್ಷಣೆ.*
   - *ವಿದ್ಯಾರ್ಥಿಗಳ ವೈಯಕ್ತಿಕ ಶುಚಿತ್ವ.*
   - ವಸತಿನಿಲಯದ ಸ್ವಚ್ಛತೆ (ಹಾಸಿಗೆ, ಹೊದಿಕೆ, ಸೊಳ್ಳೆ ಪರದೆ, ಶೌಚಾಲಯ).
   - ಪರಿಸರ ಸ್ವಚ್ಛತೆ ಹಾಗೂ ತ್ಯಾಜ್ಯ ವಿಲೇವಾರಿಯ ಪರೀವಿಕ್ಷಣೆ.
   - ಅಡಿಗೆ ಕೋಣೆಯ ಹಾಗೂ ಪಾತ್ರೆಗಳ ಸ್ವಚ್ಛತೆ.
   - ಆಹಾರ ಗುಣಮಟ್ಟವನ್ನು ಪರೀಕ್ಷಿಸುವುದು.
   - ಅಡಿಗೆ ಸಿಬ್ಬಂದಿ ವೈಯಕ್ತಿಕ ಶುಚಿತ್ವದ ಬಗ್ಗೆ ಗಮನ ಹರಿಸುವುದು.
   - ಪ್ರಥಮ ಚಿಕಿತ್ಸೆ.
2. **ನಿರ್ವಹಿಸುತ್ತಿರುವ ವಹಿಗಳು:**
   - ದೈನಂದಿನ ಆರೋಗ್ಯ ಸಮಸ್ಯೆಗಳ ಮತ್ತು ಪರಿಹಾರ ವಿವರಗಳನ್ನೊಳಗೊಂಡ ವಹಿ.
   - ವೈಯಕ್ತಿಕ ವಿದ್ಯಾರ್ಥಿಗಳ ಆರೋಗ್ಯದ ವಿವರಗಳನ್ನೊಳಗೊಂಡ ವಹಿ.
   - ವರ್ಷಕ್ಕೆ ಮೂರು ಬಾರಿ ವಿದ್ಯಾಥಿಗಳ ವೈದ್ಯಕೀಯ ತಪಾಸಣೆ ಮಾಡಿಸಿದ ವಿವರಗಳ ವಹಿ.
   - ಋತುಚಕ್ರದ ವಿವರಗಳನ್ನೊಳಗೋಡ ವಹಿ.
   - ಹೈಜೀನ್ ಚಾರ್ಟ್ (Hygiene chart)
   - ಹೆಲ್ತ್ ಕಾರ್ಡ್ (Health card)
   - Monthly drug maintaining book
   - ವೈದ್ಯಕೀಯ ಸಾಮಾಗ್ರಿಗಳ ದಾಸ್ತಾನು ಹಾಗೂ ವಿತರಣಾ ವಹಿ.
3. **ಆರೋಗ್ಯ ಶಿಕ್ಷಣ**
   - ಪ್ರೌಢಾವಸ್ಥೆಯಲ್ಲಿರುವ ಬದಲಾವಣೆಗಳು ಮತ್ತು ಸಮಸ್ಯೆಗಳು
   - ಋತುಚಕ್ರದ ಅವಧಿಯಲ್ಲಿ ಅನುಸರಿಸಬೇಕಾದ ಸ್ವಚ್ಛತಾ ಕ್ರಮಗಳು
   - ಸಾಂಕ್ರಮಿಕ ರೋಗಗಳಾದ ಕಾಲರಾ, ಮಲೇರಿಯಾ, ಡೆಂಗ್ಯೂ, ಚಿಕನ್‌ಗುನ್ಯಾ ಇತ್ಯಾದಿಗಳ ಬಗ್ಗೆ ವಿದ್ಯಾರ್ಥಿಗಳಿಗೆ ತಿಳುವಳಿಕೆ ನೀಡುವುದು ಮತ್ತು ತಡೆಗಟ್ಟುವ ವಿಧಾನಗಳನ್ನು ತಿಳಸುವುದು.
   - ಮಾನಸಿಕ ಆರೋಗ್ಯದ ಬಗ್ಗೆ ತಿಳುವಳಿಕೆ.
   - ಪ್ರತಿ ವಿದ್ಯಾರ್ಥಿಗೆ ಪ್ರಥಮ ಚಿಕಿತ್ಸೆ ವಿಧಾನಗಳನ್ನು ಪರಿಚಯಿಸುವುದು.
   - ವೈಯಕ್ತಿಕ ಸಮಸ್ಯಗಳನ್ನು ಗಮನಿಸಿ ಆಪ್ತಸಮಾಲೋಚನೆ ನೀಡುವುದು.
4. **ಇತರೆ.**
   - ವಿದ್ಯಾರ್ಥಿಗಳಿಗೆ ಆರೋಗ್ಯ ರಕ್ಷಣೆ ಮಹತ್ವವನ್ನು ತಿಳಸಲು ಸ್ಥಳೀಯ ವೈದ್ಯರಿಂದ ಉಪನ್ಯಾಸ ಏರ್ಪಡಿಸುವುದು.
   - ಹೆಲ್ತ್ ಕ್ಲಬ್ ನಿರ್ವಹಣೆ.
   - ಪೋಷಕರಿಗೆ ವಿದ್ಯಾರ್ಥಿಗಳ ಮಾನಸಿಕ ಸ್ಥಿತಿಯ ಬಗ್ಗೆ ತಿಳಸುವುದು.
   - ಪೌಷ್ಟಿಕಾಂಶವುಳ್ಳ ಆಹಾರಳ ಮಹತ್ವವನ್ನು ತಿಳಸುವುದು.
   - ಸಾಂಕ್ರಾಮಿಕ ರೋಗಗಳನ್ನು ತಡೆಯಲು ನಿರ್ದಿಷ್ಟ ಕ್ರಮ.
   - ಕ್ರೀಡೆ ಮತ್ತು ಇನ್ನಿತರ ಚಟುವಟಿಕೆಗಳಿಗೆ ಸಹಕಾರ ಮತ್ತು ತುರ್ತು ಸಮಯದಲ್ಲಿ ಪ್ರಥಮ ಚಿಕಿತ್ಸೆ.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ತೀರ್ಮಾನ:

1. ಆಡಳಿತ ಮಂಡಳಿಯು ವಿಷಯವನ್ನು ಚರ್ಚಿಸಿ, ವಸತಿ ಶಾಲೆಗಳ ಸ್ಟಾಫ್ ನರ್ಸ್‌ಗಳ ಹುದ್ದೆಗಳಿಗೆ ನಿಗಧಿಯಾದ ವೇತನ ಶ್ರೇಣಿ ರೂ.16000-29600ರ ಬದಲಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸ್ಟಾಫ್ ನರ್ಸ್‌ಗಳಿಗೆ ನಿಗಧಿಯಾದ ವೇತನ ಶ್ರೇಣಿ ರೂ.17650-32000ಕ್ಕೆ ನಿಗಧಿಪಡಿಸಲು ಅನುಮೋದಿಸಿತು. ತತ್ಸಂಬಂಧವಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಸಂಘದ ವೃಂದ ಮತ್ತು ನೇಮಕಾತಿ ವಿನಿಯಮಗಳಿಗೆ ತಿದ್ದುಪಡಿ ತಂದು ಸಂಘದ ಬೈಲಾದಲ್ಲಿ ಅಳವಡಿಸಿಕೊಳ್ಳಲು ತೀರ್ಮಾನಿಸಿತು.
2. ವಸತಿ ಶಾಲಾ ಸ್ಟಾಫ್ ನರ್ಸ್‌ಗಳಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜವಾಹರ್ ನವೋದಯ ಮಾದರಿ ವಸತಿ ಶಾಲೆಗಳ ಕಾರ್ಯಭಾರವನ್ನು ಅವಲೋಕಿಸಿ, ಅವರಿಗೆ ನೀಡಲು ಉದ್ದೇಶಿಸಿದ ಹೆಚ್ಚಿನ ವೇತನಕ್ಕನುಗುಣವಾಗಿ ಸೂಕ್ತ ಜಾಬ್ ಚಾರ್ಟ್‌ನ್ನು ತಯಾರಿಸಿ ಅಳವಡಿಸಿಕೊಳ್ಳುವಂತೆ ತೀರ್ಮಾನಿಸಿತು.

ವಿಷಯ ಸಂಖ್ಯೆ: 12

ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಏಕಲವ್ಯ ವಸತಿ ಶಾಲೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದ ಪ್ರಾಂಶುಪಾಲರು ಮತ್ತು ಶಿಕ್ಷಕರುಗಳನ್ನು ವಿಲೀನಗೊಳಿಸುವ ಬಗ್ಗೆ ಹೊರಡಿಸಲಾದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಿಶೇಷ ವಿನಿಯಮಗಳು-2011ಕ್ಕೆ ತಿದ್ದುಪಡಿ ತರುವ ಬಗ್ಗೆ.

ಸರ್ಕಾರದ ಆದೇಶ ಸಂಖ್ಯೆ: ಸಕಇ 42 ಮೊದೇಶಾ 2006(ಪಿ), ದಿನಾಂಕ:07-05-2011 ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪ್ರಾಂಶುಪಾಲರು ಮತ್ತು ಶಿಕ್ಷಕರುಗಳ ಸೇವೆಯನ್ನು ವಿಲೀನಗೊಳಿಸಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಿಶೇಷ ವಿನಿಯಮಗಳು-2011ನ್ನು ಅನುಮೋದಿಸಿ, ಆದೇಶಿಸಿದೆ.

ಮೇಲ್ಕಂಡ ಆದೇಶದಲ್ಲಿ 2004-05ರ ಶೈಕ್ಷಣಿಕ ಪೂರ್ವಕ್ಕೆ ಅಂದರೆ who has been appointed prior to the academic year 2004-05 ಎಂದು ತಿಳಿಸಿದೆ. ಆದರೆ, 2004-05ರ ಶೈಕ್ಷಣಿಕ ಪೂರ್ವಕ್ಕೆ ಅಂದರೆ, ದಿನಾಂಕ01-06-2004ರ ಮೊದಲು ಗುತ್ತಿಗೆ ಆಧಾರದ

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಮೇಲೆ 49 ಪ್ರಾಂಶುಪಾಲರು ಹಾಗೂ 273 ಶಿಕ್ಷಕರುಗಳು ನೇಮಕವಾಗಿದ್ದು, ಉಳಿದಂತೆ ದಿನಾಂಕ:01-06-2004ರ ಶೈಕ್ಷಣಿಕ ವರ್ಷದ ಅಂತ್ಯಕ್ಕೆ 8 ಪ್ರಾಂಶುಪಾಲರು ಮತ್ತು 109 ಶಿಕ್ಷಕರುಗಳು ಗುತ್ತಿಗೆ ಆಧಾರದ ಮೇಲೆ ನೇಮಕವಾಗಿರುತ್ತಾರೆ. ಅಲ್ಲದೇ, ಈ ಎಲ್ಲಾ ಪ್ರಾಂಶುಪಾಲರು ಮತ್ತು ಶಿಕ್ಷಕರುಗಳನ್ನು ವಿಲೀನಗೊಳಿಸುವ ಬಗ್ಗೆ ಸಚಿವ ಸಂಪುಟದ ಅನುಮೋದನೆ ಇರುವುದರಿಂದ ಸರ್ಕಾರದ ಆದೇಶದನ್ವಯ ಸದರಿ ಸಿಬ್ಬಂದಿಗಳನ್ನು ವಿಲೀನಗೊಳಿಸಿದೆ ಆದ್ದರಿಂದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಿಶೇಷ ವಿನಿಯಮಗಳು-2011ರ ಕ್ರಮ ಸಂಖ್ಯೆ 2 (a)(iv)ಕ್ಕೆ 2004-05ರ ಶೈಕ್ಷಣಿಕ ವರ್ಷದ ಅಂತ್ಯಕ್ಕೆ ಎಂದು ತಿದ್ದುಪಡಿ ಮಾಡಿ ಸರ್ಕಾರದ ಆದೇಶ ಸಂಖ್ಯೆ: ಹಿಂವಕ 580 ಬಿಇಟಿ 2015, ದಿನಾಂಕ:15-12-2015 ರಲ್ಲಿ ತಿದ್ದುಪಡಿ ಅಧಿಸೂಚನೆ ಹೊರಡಿಸಿದೆ.

ಈ ವಿಷಯವನ್ನು ಮುಂದಿನ ವಿಶೇಷ ಸರ್ವ ಸಾಮಾನ್ಯ ಸದಸ್ಯರ ಮಹಾಸಭೆಗೆ ಮಂಡಿಸಿ ಅನುಮೋದನೆ ಪಡೆಯುವ ಬಗ್ಗೆ ಮಂಡಿಸಿದೆ.

**ತೀರ್ಮಾನ:**

**ವಿಷಯವನ್ನು ಮುಂದೂಡಲಾಯಿತು.**

**ವಿಷಯ ಸಂಖ್ಯೆ : 13**

**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿನ ವಸತಿ ಶಾಲೆಗಳಿಗೆ ಕಂಪ್ಯೂಟರ್ ವಿಷಯದ ಪಠ್ಯ ಪುಸ್ತಕಗಳನ್ನು ಮುದ್ರಿಸಿ, ಉಚಿತವಾಗಿ ವಿತರಿಸುವ ಬಗ್ಗೆ**

ಪ್ರಸ್ತುತ ರಾಜ್ಯದಲ್ಲಿ 479 ಮೊರಾರ್ಜಿ ದೇಸಾಯಿ/ ಕಿತ್ತೂರು ರಾಣಿ ಚೆನ್ನಮ್ಮ/ ಏಕಲವ್ಯ ಮಾದರಿ/ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳು ಗ್ರಾಮೀಣ ಭಾಗದಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗ/ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಕಾರ್ಯನಿರ್ವಹಿಸುತ್ತಿವೆ. ಗರಿಷ್ಟ ಮಟ್ಟದ ವಸತಿ ಶಾಲೆಗಳಲ್ಲಿ ಆಂಗ್ಲ ಮಾಧ್ಯಮದಲ್ಲಿ ಬೋಧಿಸಲಾಗುತ್ತಿದೆ.

ಈ ವಸತಿ ಶಾಲೆಗಳನ್ನು 6 ರಿಂದ 10 ನೇ ತರಗತಿಯವರೆಗೆ ನಡೆಸಲಾಗುತ್ತಿದ್ದು, ಗಣಕಯಂತ್ರ ಶಿಕ್ಷಣವನ್ನು ಅಳವಡಿಸಿಕೊಳ್ಳಲಾಗಿದೆ. ಈ ವಸತಿ ಶಾಲೆಗಳಲ್ಲಿ ಗಣಕಯಂತ್ರ ಶಿಕ್ಷಕರ ಹುದ್ದೆಗಳನ್ನು ಸೃಜಿಸಲಾಗಿದ್ದು, ಪ್ರಸ್ತುತ 396 ಖಾಯಂ ಗಣಕಯಂತ್ರ ಶಿಕ್ಷಕರುಗಳು ಕಾರ್ಯನಿರ್ವಹಿಸುತ್ತಿದ್ದಾರೆ.

ಗಣಕಯಂತ್ರ ಪಠ್ಯ ವಿಷಯದ ಬಗ್ಗೆ ವಸತಿ ಶಾಲೆಗಳಿಗೆ 6 ರಿಂದ 10ನೇ ತರಗತಿಯವರೆಗೆ ತರಗತಿವಾರು ಪ್ರತ್ಯೇಕ ಪಠ್ಯಪುಸ್ತಕಗಳು ಅಗತ್ಯವಾಗಿದೆ. ತತ್ಸಂಬಂಧವಾಗಿ ಈ ಕೆಳಕಂಡ ಸದಸ್ಯರುಗಳನ್ನು ಒಳಗೊಂಡ ಸಮಿತಿಯನ್ನು ರಚಿಸಿ, 6 ರಿಂದ 10ನೇ ತರಗತಿಯವರೆಗೆ ಪಠ್ಯಪುಸ್ತಕಗಳನ್ನು ತಯಾರಿಸಿದೆ.

1) ಡಾ। ಶರ್ಮಾ, ನಿವೃತ್ತ ಉಪಕುಲಪತಿಗಳು, ತುಮಕೂರು ವಿಶ್ವವಿದ್ಯಾನಿಲಯ
2) ಪ್ರೊ। ರಾಜಾರಾಮ್ ಶರ್ಮಾ, ಜಂಟಿ ನಿರ್ದೇಶಕರು, CIET, ಡಾ। ಎ.ಎನ್. ರಾಮಚಂದ್ರ, ಜಂಟಿ ಆಯುಕ್ತರು, ನವೋದಯ ವಿದ್ಯಾಲಯ ಸಮಿತಿ,
3) ಶ್ರೀ. ಜಯಕುಮರ್, ನಿರ್ದೇಶಕರು, ಡಿ.ಎಸ್.ಇ.ಆರ್.ಟಿ, ಬೆಂಗಳೂರು.

ಸಂಘದ ವಸತಿ ಶಾಲೆಗಳ ಗಣಕಯಂತ್ರ ಶಿಕ್ಷಕರುಗಳ ಸಹಯೋಗದೊಂದಿಗೆ 6 ರಿಂದ 10ನೇ ತರಗತಿಯವರೆಗೆ ಪಠ್ಯಪುಸ್ತಕಗಳನ್ನು ರಚಿಸಲಾಗಿದೆ. ಈ ಪುಸ್ತಕಗಳನ್ನು 2016-17 ನೇ ಸಾಲಿನಲ್ಲಿ ವಸತಿ ಶಾಲೆಗಳ 128500 ವಿದ್ಯಾರ್ಥಿಗಳಿಗೆ ಉಚಿತವಾಗಿ ಹಂಚಬೇಕಾಗಿದೆ. ಸಂಘವು ತತ್ಸಂಬಂಧವಾಗಿ ಸರ್ಕಾರಿ ಮುದ್ರಣಾಲಯದಿಂದ ಪಠ್ಯಪುಸ್ತಕಗಳನ್ನು ಮುದ್ರಿಸುವ ಬಗ್ಗೆ ವಿಚಾರಿಸಲಾಗಿದ್ದು, ಸರ್ಕಾರಿ ಮುದ್ರಣ ಇಲಾಖೆಯು 6 ರಿಂದ 10 ನೇ ತರಗತಿಯವರೆಗೆ ತರಗತಿವಾರು ಪಠ್ಯಪುಸ್ತಕಗಳನ್ನು ಮುದ್ರಿಸಲು ರೂ. 2547178.00 ವೆಚ್ಚ ಭರಿಸಲು ತಿಳಿಸಿರುತ್ತಾರೆ. ಸರ್ಕಾರಿ ಕೇಂದ್ರ ಮುದ್ರಣಾಲಯದ ಪತ್ರ ದಿನಾಂಕ 09.10.2015 ನ್ನು ಅನುಬಂಧದಲ್ಲಿ ತೋರಿಸಿದೆ.

ಮೇಲಿನ ಸಮಿತಿಯ ಅಧ್ಯಕ್ಷರುಗಳಿಗೆ ತಲಾ ರೂ.12000/- ದಂತೆ ರೂ 48000/- ವೆಚ್ಚ ಭರಿಸಬೇಕಾಗಿದ್ದು, ಒಟ್ಟಾರೆ ಈ ಬಾಬ್ತು ಭರಿಸಬೇಕಾದ ರೂ.2595178.00 ಆಗುತ್ತದೆ. ವಿಷಯವನ್ನು ಆಡಳಿತ ಮಂಡಳಿಯ ಮುಂದೆ ಮಂಡಿಸಿ, ಕಂಪ್ಯೂಟರ್ ಪಠ್ಯಪುಸ್ತಕಗಳನ್ನು ಸರ್ಕಾರಿ ಮುದ್ರಣಾಲಯದಿಂದ ಮುದ್ರಿಸಿ, ವಸತಿ ಶಾಲೆಯ ವಿದ್ಯಾರ್ಥಿಗಳಿಗೆ ಉಚಿತವಾಗಿ ವಿತರಿಸಲು ಈ

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಬಾಬ್ತು ರೂ. ರೂ.25.96ಲಕ್ಷಗಳ ವೆಚ್ಚವನ್ನು ವಸತಿ ಶಾಲೆಗಳ ನಿರ್ವಹಣಾ ಅನುದಾನದಲ್ಲಿ ಭರಿಸಲು ತೀರ್ಮಾನ

**ತೀರ್ಮಾನ:**

**ಆಡಳಿತ ಮಂಡಳಿಯು, ಮಾನ್ಯಸರ್ಕಾರದ ಕಾರ್ಯದರ್ಶಿಗಳು(ವೆಚ್ಚ) ರವರು ಕಂಪ್ಯೂಟರ್ ಶಿಕ್ಷಣದ ಬಗ್ಗೆ ಮಾರುಕಟ್ಟೆಯಲ್ಲಿ ವಿವಿಧ ಮಾದರಿಯ ಕಂಪ್ಯೂಟರ್ ಪುಸ್ತಕಗಳು ಲಭ್ಯವಿರುವುದನ್ನು ಗಮನಿಸಿತು. ಆದ್ಯಾಗ್ಯೂ ಸಂಘವು 6-10ನೇ ತರಗತಿಯ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರತಿ ತರಗತಿಗೆ ಪ್ರತ್ಯೇಕವಾದ ಪಠ್ಯಕ್ರಮವುಳ್ಳವಂತೆ ಕಂಪ್ಯೂಟರ್ ಪುಸ್ತಕಗಳನ್ನು ಮುದ್ರಿಸಲು ಟೆಂಡರ್ ಕರೆದು ಮುದ್ರಿಸಿ ವಿತರಿಸಲು ಅನುಮೋದಿಸಿತು ಹಾಗೂ ಕ್ರಮ ಜರುಗಿಸುವುದಕ್ಕಿಂತ ಪೂರ್ವದಲ್ಲಿ ಮಾರುಕಟ್ಟೆಯಲ್ಲಿ ಲಭ್ಯವಿರುವ ಅದೇ ಮಾದರಿಯ ಪುಸ್ತಕಗಳ ದರಗಳೊಂದಿಗೆ ಹೋಲಿಕೆ ಮಾಡಿ, ಮುದ್ರಿಸಿ ವಿತರಿಸಬೇಕೆಂದಿರುವ ಪುಸ್ತಕದ ದರವು ಹೆಚ್ಚಾಗಿಲ್ಲದಿರುವ ಬಗ್ಗೆ ದೃಢಪಡಿಸಿಕೊಳ್ಳಬೇಕೆಂದು ತೀರ್ಮಾನಿಸಲಾಯಿತು.**

**ವಿಷಯ ಸಂಖ್ಯೆ : 14**

**ವಸತಿ ಶಾಲೆಗಳ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳಿಗೆ ಆನ್‌ಲೈನ್ ಬಯೋಮೆಟ್ರಿಕ್ ಹಾಜರಾತಿ ಅಳವಡಿಸುವ ಕುರಿತು.**

ಸಂಘದ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ 505 ವಸತಿ ಶಾಲೆ/ಕಾಲೇಜುಗಳಿಗೆ ಎನ್.ಐ.ಸಿ. ಯಿಂದ ಅಭಿವೃದ್ಧಿಪಡಿಸಿದ ಬಯೋಮೆಟ್ರಿಕ್ ಹಾಜರಾತಿಯನ್ನು ವಸತಿ ಶಾಲೆ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳ ಹಾಜರಾತಿಯನ್ನು ಆನ್‌ಲೈನ್ ಮುಖಾಂತರ ಪಡೆಯಲು ಕ್ರಮವಹಿಸಲಾಗುತ್ತಿದೆ.

ಬಯೋಮೆಟ್ರಿಕ್ ಅಳವಡಿಸಲು ಬೇಕಾದ ಪರಿಕರಗಳಾದ Webcam ಮತ್ತು Biometric thumb reader ಗಳನ್ನು ಶಾಲಾ ಹಂತದಲ್ಲಿಯೇ ಖರೀದಿಸಲು; ಪ್ರತಿ ವಸತಿ ಶಾಲೆಗೆ ರೂ.9000/- ಗಳಂತೆ ರೂ. 45,36,000/- (ರೂ. ನಲವತ್ತೈದು ಲಕ್ಷ ಮೂವತ್ತಾರು ಸಾವಿರಗಳು ಮಾತ್ರ) ಬಿಡುಗಡೆ ಮಾಡಲಾಗಿದೆ. ಸದರಿ ತಂತ್ರಾಂಶವನ್ನು State Data Centre ನಲ್ಲಿ Host ಮಾಡಲಾಗಿದ್ದು, Dash board ಸಹಾಯದಿಂದ ಪ್ರತಿನಿತ್ಯದ ವಿದ್ಯಾರ್ಥಿಗಳ ಹಾಗೂ ಸಿಬ್ಬಂದಿಗಳ ಹಾಜರಾತಿಯನ್ನು ಪರಿಶೀಲಿಸಲಾಗುತ್ತಿದೆ. ಪ್ರತಿ ವಸತಿ ಶಾಲೆಯಲ್ಲಿನ ಪ್ರತಿನಿತ್ಯದ ಕರಾರುವಕ್ಕಾದ ಹಾಜರಾತಿಯಿಂದ

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ವಿದ್ಯಾರ್ಥಿಗಳ ಶೈಕ್ಷಣಿಕ ಹಾಗೂ ಊಟೋಪಚಾರದ ಖರ್ಚಿನ ವಿವರ ಲಭ್ಯವಾಗುತ್ತದೆ. ಸಿಬ್ಬಂದಿಗಳು ಕರ್ತವ್ಯಕ್ಕೆ ಸರಿಯಾದ ಸಮಯಕ್ಕೆ ಹಾಜರಾಗುವುದನ್ನು ಪರಿಶೀಲಿಸಬಹುದಾಗಿದೆ.

ಸದರಿ ಹಾಜರಾತಿಗನುಗುಣವಾಗಿ ಅನುದಾನ ಬಿಡುಗಡೆ ಮಾಡುವುದರಿಂದ ನಿರ್ವಹಣೆಯನ್ನು ಪಾರದರ್ಶಕವಾಗಿ ಮಾಡಬಹುದಾಗಿದೆ. ಈಗಾಗಲೇ 505 ವಸತಿ ಶಾಲೆಗಳ ಪೈಕಿ 176 ವಸತಿ ಶಾಲೆಗಳಲ್ಲಿ ಬಯೋಮೆಟ್ರಿಕ್ ಅಳವಡಿಸಲು ಕ್ರಮವಹಿಸಿರುತ್ತಾರೆ.

ಬಯೋಮೆಟ್ರಿಕ್ ದಿನನಿತ್ಯದ ವಿದ್ಯಾರ್ಥಿ/ಸಿಬ್ಬಂದಿಗಳ ಹಾಜರಾತಿಯನ್ನು ಯಾರಾದರೂ ಕೂಡಾ ಅಂತರ್ಜಾಲದ (http://164.100.133.164/kreishostel/) ಮುಖಾಂತರ ವೀಕ್ಷಿಸಬಹುದಾಗಿದೆ.

ಸಂಘವು ಈ ಬಗ್ಗೆ ಕೈಗೊಂಡ ಕ್ರಮವನ್ನು ಅನುಮೋದಿಸಲು ಕೋರಿದೆ.

**ತೀರ್ಮಾನ:**

**ಸಭೆಯು ವಿಷಯದ ಬಗ್ಗೆ ಚರ್ಚಿಸಿತು. ಸಂಘದ ಕ್ರಮವನ್ನು ಅವಲೋಕಿಸಿ, ಅನುಮೋದಿಸಿತು.**

ವಿಷಯ ಸಂಖ್ಯೆ:15

2015-16ನೇ ಸಾಲಿನಲ್ಲಿ ಸಂಘದ ವಸತಿ ಶಾಲೆಗಳ ಪೈಕಿ ಸುಮಾರು ಸಂತ ಕಟ್ಟಡ ಹೊಂದಿರುವ 300 ವಸತಿ ಶಾಲೆಗಳಲ್ಲಿ ಭಾರತ್ ಸ್ಕೌಟ್ ಮತ್ತು ಗೈಡ್ಸ್ ಘಟಕಗಳನ್ನು ಪ್ರಾರಂಭಿಸುವ ಬಗ್ಗೆ.

ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಏಕಲವ್ಯ /ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳಲ್ಲಿ ಭಾರತ್ ಸ್ಕೌಟ್ ಮತ್ತು ಗೈಡ್ಸ್ ಘಟಕಗಳನ್ನು ಸ್ಥಾಪಿಸಲು ದಿನಾಂಕ:08.05.2015 ರಂದು ಸನ್ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿ ಸಭೆ ನಡೆದಿದ್ದು, ಈ ಬಗ್ಗೆ ಘಟಕಗಳನ್ನು ಸ್ಥಾಪಿಸಲು ವಸತಿ ಶಾಲೆಗಳ ಸಂಖ್ಯೆ, ತರಬೇತಿಗೆ ನಿಯೋಜಿಸಬೇಕಾದ ಸ್ಕೌಟ್ ಮಾಸ್ಟರ್ ಮತ್ತು ಗೈಡ್ಸ್ ಕ್ಯಾಪ್ಟನ್ ಗಳ ವಿವರಗಳು, ತರಬೇತಿ ನೊಂದಣಿ ಮತ್ತು ಸಮವಸ್ತ್ರ ಸರಬರಾಜು ಮಾಡುವ ಬಗ್ಗೆ ತಗಲುವ ಖರ್ಚು ವೆಚ್ಚಗಳ ಲೆಕ್ಕಾರ ಮಾಡಿ ಸಮಗ್ರ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ತೀರ್ಮಾನಿಸಲಾಗಿರುತ್ತದೆ.

ಸ್ವಂತ ಕಟ್ಟಡ ಹೊಂದಿರುವ 300 ವಸತಿ ಶಾಲೆಗಳಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕಗಳನ್ನು ಸ್ಥಾಪಿಸಲು ವಸತಿ ಶಾಲೆಗಳ ಪ್ರಾಂಶುಪಾಲರುಗಳಿಂದ ಮಾಹಿತಿಯನ್ನು ಪಡೆಯಲಾಗಿದ್ದು,

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

92 ವಸತಿ ಶಾಲೆಗಳ ಪ್ರಾಂಶುಪಾಲರುಗಳಿಂದ ಸಮ್ಮತಿ ಬಂದಿದ್ದು, ಈ ಪೈಕಿ 71 ಸ್ಕೌಟ್ಸ್ ಮತ್ತು ೮೩ ಗೈಡ್ಸ್ ಘಟಕಗಳು ಒಟ್ಟು 154 ಘಟಕಗಳನ್ನು ಮೊದಲ ಹಂತದಲ್ಲಿ ಸ್ಥಾಪಿಸಲು ಕ್ರಮವಹಿಸಬಹುದಾಗಿದ್ದು, ಈ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲು ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ, ಬೆಂಗಳೂರು ರವರಿಗೆ ತಿಳಿಸಬಹುದಾಗಿದೆ. ಅಲ್ಲದೇ, ಸದರಿ ಘಟಕಗಳನ್ನು ಸಮ್ಮತಿಸಿದ ವಸತಿ ಶಾಲೆಗಳಲ್ಲಿ ಸ್ಥಾಪಿಸುವ ಬಗ್ಗೆ ಸಮವಸ್ತ್ರ, ಘಟಕಗಳ ನೊಂದಣಿ ಶುಲ್ಕ ಇತ್ಯಾದಿಗಳ ಬಗ್ಗೆ ಭರಿಸಬೇಕಾದ ವೆಚ್ಚದ ವಿವರ ಕೆಳಕಂಡಂತೆ ಇದೆ.

| | | |
|---|---|---|
| | ರಚನೆ: | |
| 1. | ಮೊದಲ ಹಂತದಲ್ಲಿ ಸ್ಕೌಟ್/ಗೈಡ್ ಘಟಕಗಳನ್ನು ಪ್ರಾರಂಭ ಮಾಡಲು ವಸತಿ ಶಾಲೆಗಳ ಪ್ರಾಂಶುಪಾಲರುಗಳು ಸಮ್ಮತಿಸಿರುವ ವಸತಿ ಶಾಲೆಗಳ ಸಂಖ್ಯೆ( ಬೆಂಗಳೂರು ವಿಭಾಗ-23, ಮೈಸೂರು-30, ಬೆಳಗಾಂ ವಿಭಾಗ-25, ಗುಲ್ಬರ್ಗಾ ವಿಭಾಗ-14. | 92 |
| 2. | ಮೊದಲಹಂತದಲ್ಲಿ 92 ಶಾಲೆಗಳಲ್ಲಿ ಪ್ರಾರಂಭವಾಗಲಿರುವ ಸ್ಕೌಟ್ ಘಟಕಗಳು-71, ಗೈಡ್ಸ್ ಘಟಕಗಳು-83, ಒಟ್ಟು 154 | 154 |
| 3. | ಪ್ರತಿ ಸ್ಕೌಟ್/ಗೈಡ್ ಘಟಕಗಳಲ್ಲಿ 32 ವಿದ್ಯಾರ್ಥಿಗಳಂತೆ ಒಟ್ಟು ವಿದ್ಯಾರ್ಥಿ/ವಿದ್ಯಾರ್ಥಿನಿಯರು ತೊಡಗುವಿಕೆ (154X32=4928) | 4928 |
| | ತಗಲುವ ವೆಚ್ಚ: | ರೂ.ಗಳಲ್ಲಿ |
| 4 | ಸ್ಕೌಟ್/ಗೈಡ್ ಘಟಕಗಳನ್ನು ನೊಂದಾಯಿಸಲು ಪ್ರತಿ ಘಟಕಕ್ಕೆ ರೂ.242/- ರಂತೆ ನೊಂದಣಿ ಶುಲ್ಕ (154X ರೂ.242= ರೂ.37,268/-) | 37,268/- |
| 5 | ಸ್ಕೌಟ್/ಗೈಡ್ ನಾಯಕ ಶಿಕ್ಷಕ/ಶಿಕ್ಷಕಿಯರಿಗೆ ಸಮವಸ್ತ್ರದ ವೆಚ್ಚ 154 ಘಟಕಗಳ 154 ನಾಯಕರಿಗೆ ತಲಾ ರೂ.2000/- ಗಳಂತೆ (154X ರೂ.2000/-=308000/-) | 30,8000/- |
| 6. | ಸ್ಕೌಟ್/ಗೈಡ್ ವಿದ್ಯಾರ್ಥಿ/ವಿದ್ಯಾರ್ಥಿನಿಯರುಗಳಿಗೆ ಸಮವಸ್ತ್ರದ ವೆಚ್ಚ 154 ಘಟಕಗಳ 4928 ವಿದ್ಯಾರ್ಥಿಗಳಿಗೆ ತಲಾ ರೂ.700/- ಗಳಂತೆ (4928X ರೂ.700/- = ರೂ.3449600/-) | 34,49,600/- |
| 7 | 154 ಘಟಕಗಳ 154 ನಾಯಕ ಶಿಕ್ಷಕ/ಶಿಕ್ಷಕಿಯರುಗಳಿಗೆ 7 ದಿವಸಗಳ ರಾಜ್ಯ ಮಟ್ಟದ ಸ್ಕೌಟ್/ಗೈಡ್ ತರಬೇತಿಗೆ ಒಬ್ಬರಿಗೆ ಪ್ರತಿ ದಿನಕ್ಕೆ ರೂ.100/- ಗಳಂತೆ (154X ರೂ.700/-=107800/-) | 1,07,800/- |
| 8 | 154 ಘಟಕಗಳ 154 ನಾಯಕ ಶಿಕ್ಷಕ/ಶಿಕ್ಷಕಿಯರುಗಳಿಗೆ 7 ದಿವಸಗಳ ರಾಜ್ಯ ಮಟ್ಟದ ಸ್ಕೌಟ್/ಗೈಡ್ ತರಬೇತಿಗೆ ಹೋಗಲು ಒಬ್ಬರಿಗೆ ತಗಲುವ ವೆಚ್ಚ ಅಂದಾಜು (ಬಸ್ ಚಾರ್ಜ್/ರೈಲ್ ಚಾರ್ಜ್,) ರೂ.700/- ಗಳಂತೆ (154X ರೂ.700/-=107800/-) ಇದರಲ್ಲಿ ವಾಸ್ತವಿಕ ವಾಗಿ ತಗಲು ವೆಚ್ಚವನ್ನು ನೀಡಲಾಗುವುದು | 1,07,800/- |
| ಒಟ್ಟಾರೆಯಾಗಿ ರಾಜ್ಯಾದ್ಯಂತ 4 ವಿಭಾಗಳ 154 ಸ್ಕೌಟ್/ಗೈಡ್ ಘಟಕಗಳನ್ನು ಸುಸಜ್ಜಿತವಾಗಿ 92 ವಸತಿ ಶಾಲೆಗಳಲ್ಲಿ ಪ್ರಾರಂಭಿಸಲು ನೊಂದಣಿ ಶುಲ್ಕ, ಸಮವಸ್ತ್ರದ ವೆಚ್ಚ, ತರಬೇತಿಯ TA/DA ಇತ್ಯಾದಿ ಸೇರಿ ಅಂದಾಜು ತಗಲುವ ಒಟ್ಟಾರೆ ವೆಚ್ಚ (ನಲ್ವತ್ತು ಲಕ್ಷ, ಇಪ್ಪತ್ತಾರು ಸಾವಿದ, ಎರಡುನೂರಾ ಹತ್ತು ರೂಪಾಯಿಗಳು ಮಾತ್ರ) | | 40,10,668/- |

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಮೇಲ್ಕಂಡ ಅಂಶಗಳನ್ನು ಆಡಳಿತ ಮಂಡಳಿಯ ಮುಂದೆ ತರುತ್ತಾ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳನ್ನು ಅನುಷ್ಠಾನಕ್ಕೆ ತರಲು ಮೊದಲ ಹಂತದಲ್ಲಿ ಸ್ವಂತ ಕಟ್ಟಡಗಳ 92 ವಸತಿ ಶಾಲೆಗಳಲ್ಲಿ 71 ಸ್ಕೌಟ್ಸ್ ಮತ್ತು 83 ಗೈಡ್ಸ್ ಘಟಕಗಳನ್ನು ಒಟ್ಟು 154 ಘಟಕಗಳನ್ನು ಸ್ಥಾಪಿಸಿ, ಸ್ಕೌಟ್ಸ್/ಗೈಡ್ಸ್/ಶಿಕ್ಷಕ/ಶಿಕ್ಷಕಿಯರುಗಳಿಗೆ ಮತ್ತು ವಿದ್ಯಾರ್ಥಿಗಳಿಗೆ ಸಮವಸ್ತ್ರ, ಘಟಕಗಳ ನೊಂದಣಿ ಶುಲ್ಕ ಇತ್ಯಾದಿಗಳು ಸೇರಿದಂತೆ ಒಟ್ಟು ರೂ. 40,10,668/- ಗಳ ವೆಚ್ಚವನ್ನು ಸಂಘದಿಂದ ಭರಿಸುವ ಬಗ್ಗೆ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಆಡಳಿತ ಮಂಡಳಿಯ ತೀರ್ಮಾನಕ್ಕಾಗಿ ಮಂಡಿಸಿದೆ.

**ತೀರ್ಮಾನ:**

**ಸಭೆಯು ವಿಷಯವನ್ನು ಚರ್ಚಿಸಿತು. ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳನ್ನು ಅನುಷ್ಠಾನಕ್ಕೆ ತರಲು ಮೊದಲ ಹಂತದಲ್ಲಿ ಸ್ವಂತ ಕಟ್ಟಡಗಳ 92 ವಸತಿ ಶಾಲೆಗಳಲ್ಲಿ 71 ಸ್ಕೌಟ್ಸ್ ಮತ್ತು 83 ಗೈಡ್ಸ್ ಘಟಕಗಳನ್ನು ಒಟ್ಟು 154 ಘಟಕಗಳನ್ನು ಸ್ಥಾಪಿಸಿ, ಸ್ಕೌಟ್ಸ್/ಗೈಡ್ಸ್/ಶಿಕ್ಷಕ/ಶಿಕ್ಷಕಿಯರುಗಳಿಗೆ ಮತ್ತು ವಿದ್ಯಾರ್ಥಿಗಳಿಗೆ ಸಮವಸ್ತ್ರ, ಘಟಕಗಳ ನೊಂದಣಿ ಶುಲ್ಕ ಇತ್ಯಾದಿಗಳು ಸೇರಿದಂತೆ ಒಟ್ಟು ರೂ. 40,10,668/- ಗಳ ವೆಚ್ಚವನ್ನು ಅನುಮೋದಿಸಿತು.**

ವಿಷಯ ಸಂಖ್ಯೆ: 16

**ಪೀಠೋಪಕರಣಗಳ ಖರೀದಿಗೆ ಟೆಂಡರ್ ಕರೆದಿರುವ ಬಗ್ಗೆ.**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಸತಿ ಶಾಲೆ/ ಕಾಲೇಜುಗಳ ವಿದ್ಯಾರ್ಥಿಗಳಿಗೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಸರ್ಕಾರದ ಪತ್ರ ಕ್ರಮ ಸಂಖ್ಯೆ ಬಿಸಿಡಬ್ಲ್ಯೂ 655 ಬಿಸಿಎಂ 2015 ದಿನಾಂಕ: 15.07.2015 ರಂತೆ ಪೀಠೋಪಕರಣಗಳ ಖರೀದಿ ಹಾಗೂ ಸರಬರಾಜಿಗಾಗಿ ದಿ: 27.11.20145 ರಂದು e-portal ನಲ್ಲಿ ರೂ 68.70 ಕೋಟಿಗಳ ಮೌಲ್ಯಕ್ಕೆ ಸಂಘವು ಟೆಂಡರ್ ಟೆಂಡರ್ ಕರೆದಿದ್ದು, ವಿವರಗಳು ಈ ಕೆಳಕಂಡಂತಿವೆ.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

| Sl. No. | Particulars | Quantity |
|---|---|---|
| 1 | SUPPLY & FIXING OF TWO TIER COT | 22977 |
| 2 | SUPPLY & FIXING OF STAFF TABLE | 4861 |
| 3 | SUPPLY & FIXING OF STEEL ALMIRAH DOOR | 3342 |
| 4 | SUPPLY & FIXING OF STEEL ALMIRAH WITH GLASS DOOR | 2380 |
| 5 | SUPPLY OF "S" TYPE CHAIR | 10884 |
| 6 | SUPPLY & FIXING OF DESK CUM BENCH | 2894 |
| 7 | SUPPLY & FIXING OF STAINLESS STEEL DINING TABLE WITH STOOL | 5196 |
| 8 | SUPPLY & FIXING OF COMPUTER TABLES, | 4653 |
| 9 | SUPPLY & FIXING OF ERGONOMIC REVOLVING COMPUTER CHAIRS WITH ADJUSTABLE HEIGHT AND ADJUSTABLE ARM REST | 4653 |

ಸದರಿ ಟೆಂಡರ್‌ನಲ್ಲಿ ಇಬ್ಬರು ಬಿಡ್ದಾರರು ಭಾಗವಹಿಸಿದ್ದು, ಅವರುಗಳ ತಾಂತ್ರಿಕ ಲಕೋಟೆಗಳನ್ನು ದಿ: 01.01.2016 ರಂದು e-portal, ತೆರೆಯಲಾಯಿತು. ಹಾಗೂ ದಿ: 08.01.2016 ರಲ್ಲಿ ಟೆಂಡರ್ ಪರಿಶೀಲನಾ ಸಮಿತಿಯ ಮುಂದೆ ಮಂಡಿಸಿ, ಬಿಡ್‌ದಾರರು ತಾಂತ್ರಿಕ ಷರತ್ತುಗಳನ್ನು ಪೂರೈಸಿರುವುದನ್ನು ಮನಗಂಡು ಆರ್ಥಿಕ ಬಿಡ್‌ಗಳನ್ನು ತೆರೆಯಲು ಅನುಮೋದಿಸಲಾಯಿತು. ತಾಂತ್ರಿಕ ಪರಿಶೀಲನಾ ಶಿಫಾರಸ್ಸಿನಂತೆ ದಿ: 14.01.2016 ರಂದು ಇಬ್ಬರು ಬಿಡ್‌ದಾರರ ಆರ್ಥಿಕ ಲೋಟೆಗಳನ್ನು ತೆರೆದು ಟೆಂಡರ್ ಅನುಮೋದನಾ ಸಮಿತಿಯ ಮುಂದೆ ದಿನಾಂಕ: 14.01.2016 ರಂದು ಮಂಡಿಸಲಾಯಿತು. ವಿವರಗಳು ಈ ಕೆಳಕಂಡಂತಿವೆ.

| ಕ್ರ ಸಂ | ಸಂಸ್ಥೆಯ ಹೆಸರು | ಸದರಿ ಸಂಸ್ಥೆಗಳ ಬಿಡ್ ದರ | ಷರಾ |
|---|---|---|---|
| 01 | Godrej and Boyce Mfg Co. Ltd, Bangalore | 62,93,79,681.00 | (L1) |
| 02 | The National Small Industrial Corporation Ltd, Bangalore (NSIC) | 68,20,95,002.00 | (L2) |

ಮೇಲ್ಕಂಡಂತೆ ಎರಡು ಸಂಸ್ಥೆಗಳು ನಮೂದಿಸಿದ ದರಗಳನ್ನು ದರಗಳ ಪೈಕಿ Godrej and Boyce Mfg Co. Ltd, Bangalore ಸಂಸ್ಥೆಯ ದರಗಳು ಕಡಿಮೆ ಇರುತ್ತದೆ. ಆದರೆ ಓಖುಅ ಸಂಸ್ಥೆಯ (ಐ2) ಆಗಿದ್ದರೂ ಸಹ ಅವರು ದಿ:11.01.2016 ರಂದು ಒಂದು ಪತ್ರ ನೀಡಿ ಹೊಸ ಕೈಗಾರಿಕಾ ನೀತಿಯಲ್ಲಿ ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳಿಗೆ ನೀಡಿದ **Price Preference** ನ್ನು ನೀಡಬೇಕೆಂದು ಕೋರಿ ಕೊಂಡಿದ್ದು ಅದರ ವಿವರ ಈ ಕೆಳಗಿನಂತಿದೆ.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

**"As per the New Industrials policy 2014-2019 issued by the Govt of Karnataka vide clause :5.6.4.8 Prices preference has been extended towards goods manufactured by Micro & small Enterprises located in the state to the extent of 15% against the large and medium industries of the state and industries of other states during Govt dept purchases."**

ದಿ: 14.01.2016 ನಡೆದ ಟೆಂಡರ್ ಅನುಮೋದನಾ ಸಮಿತಿಯಲ್ಲಿ ಮೆ॥ ಗಿ3 ಇಟಿಯಿಜಟಿ ಸಂಸ್ಥೆಯು ನೀಡಿದ ( work done ) ಅನುಭವ ಪ್ರಮಾಣ ಪತ್ರದಲ್ಲಿ ಮಾಹಿತಿ ಸ್ಥಳ ಪರಿಶೀಲನೆ ನಡೆಸಲು ಹಾಗೂ ಈ ಸಂಸ್ಥೆಗೆ ಭೇಟಿ ನೀಡಿ ಸಂಘವು ಟೆಂಡರ್‌ಗೆ ಎಲ್ಲಾ ಸಾಮಗ್ರಿಗಳ ಗುಣಮಟ್ಟ, ಉತ್ಪಾದಾನಾ ಸಾಮರ್ಥ್ಯ ಸಣ್ಣ ಕೈಗಾರಿಕಾ ವ್ಯಾಪ್ತಿಗೆ ಒಳಪಟ್ಟಿರುವ ಬಗ್ಗೆ ಇತರೆ ಮಾಹಿತಿಯನ್ನು ಪರಿಶೀಲನೆಯನ್ನು ಪರೀಶೀಲಿಸಿ ಸೂಕ್ತ ದಾಖಲೆಗಳೊಂದಿಗೆ ಮಂಡಿಸುವಂತೆ ತೀರ್ಮಾನಿಸಲಾಗಿದೆ.

ಎಲ್ 1 ಬಿಡ್ ದಾರರಾದ ಮೆ॥ Godrej and Boyce Mfg Co. Ltd, Bangalore ಸಂಸ್ಥೆಗೆ ದಿನಾಂಕ: 18.01.2016 ರಂದು ಹೊಸಕೋಟೆ ತಾ॥ ಕೊಂಡ್ರಹಳ್ಳಿ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯಲ್ಲಿ ಟೆಂಡರ್‌ನ ಎಲ್ಲಾ ಸಾಮಗ್ರಿಗಳ Sample ಗಳನ್ನು ತಂದಿರಿಸಲು ಸೂಚನೆ ನೀಡಲು ತೀರ್ಮಾನಿಸಿದನ್ವಯ ಅವರಿಗೆ ಪತ್ರ ಬರೆಯಲಾಗಿದೆ.

ಟೆಂಡರ್ ಅನುಮೋದನಾ ಸಮಿತಿಯಲ್ಲಿ ವಸತಿ ಶಾಲೆಗಳಲ್ಲಿ ಪ್ರಸ್ತುತ ಲಭ್ಯವಿರುವ ಪೀಠೋಪಕರಣಗಳ ವಿವರ ಹಾಗೂ ಪೂರೈಕೆಯಾಗಬೇಕಾದ ಪೀಠೋಪಕರಣಗಳ ವಿವರ ಮತ್ತು ಐ1 ಗುತ್ತಿಗೆದಾರರು ನಮೂದಿಸಿದ ದರದನ್ವಯ ಭರಿಸಬೇಕಾದ ವೆಚ್ಚದ ವಿವರಗಳನ್ನು ನೀಡಲು ತೀರ್ಮಾನಿಸಿದೆ. ಈ ವಿವರಗಳನ್ನು ಅನುಬಂಧದಲ್ಲಿ ತೋರಿಸಿದೆ.

ವಿಷಯವನ್ನು ಆಡಳಿತ ಮಂಡಳಿಯ ಮುಂದೆ ಮಂಡಿಸಿ ಸಂಘದ ಕ್ರಮವನ್ನು ಅನುಮೋದಿಸಲು ಕೋರಿದೆ.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ತೀರ್ಮಾನ:

ಆಡಳಿತ ಮಂಡಳಿಯು ವಿಷಯವನ್ನು ಅವಗಾಹಿಸಿ, ಕೂಲಂಕುಷವಾಗಿ ಚರ್ಚಿಸಿತು. ಆರ್ಥಿಕ ಇಲಾಖೆಯ ಕಾರ್ಯದರ್ಶಿಗಳು(ವೆಚ್ಚ) ರವರು ರೂ. 5.00 ಕೋಟಿಗಳನ್ನು ಮೀರುವ ಖರೀದಿ (Pocurement of goods and services) ಅಥವಾ ಕಟ್ಟಡ ನಿರ್ಮಾಣದ ಕಾಮಗಾರಿಗಳ ಅಂದಾಜು ಪಟ್ಟಿಗೆ (Estimates of works) ಸಚಿವ ಸಂಪುಟದ ಆಡಳಿತಾತ್ಮಕ ಅನುಮೋದನೆಯ ಅಗತ್ಯವಿದ್ದು, ಈ ಪ್ರಕರಣದಲ್ಲಿ ಅನುಮೋದನೆ ಪಡೆಯಬೇಕಾಗಿತ್ತೆಂದು ಸಭೆಗೆ ತಿಳಿಸಿದರು. ಅಲ್ಲದೇ, ಸರ್ಕಾರವು ಇತ್ತೀಚೆಗೆ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿಗಳಿಗೆ ರೂ.10.00 ಕೋಟಿಗಳ ಕಾಮಗಾರಿಗಳ ಅಂದಾಜಿಗೆ ಮಾತ್ರ ಆಡಳಿತಾತ್ಮಕ ಅನುಮೋದನೆ ನೀಡುವ ಅಧಿಕಾರವನ್ನು ನೀಡಿದೆ. ಸಂಘವು ಸರಕುಗಳ ಖರೀದಿಗೆ ಸಂಬಂಧಿಸಿದಂತೆ, ರೂ.10.00 ಕೋಟಿಗೆ ಮೀರುವ ಹಾಗೂ ಆಗಿಂದಾಗ್ಗೆ ಟೆಂಡರ್ ಕರೆಯಬೇಕಾಗಿದ್ದಲ್ಲಿ ಪ್ರತಿ ಬಾರಿ ಸಚಿವ ಸಂಪುಟದ ಅನುಮೋದನೆ ಪಡೆಯುವ ಬದಲು ಒಂದೇ ಬಾರಿ ಸಚಿವ ಸಂಪುಟದ ಅನುಮೋದನೆ ಪಡೆಯುವ ಅವಕಾಶವಿದೆ ಎಂದು ತಿಳಿಸಿದರು. ಅದರಂತೆ, ಸಚಿವ ಸಂಪುಟದ ಅನುಮೋದನೆ ಪಡೆಯಲು ತೀರ್ಮಾನಿಸಲಾಯಿತು. ಮುಂದುವರೆದು, ಆರ್ಥಿಕ ಇಲಾಖೆಯ ಕಾರ್ಯದರ್ಶಿಗಳು ಟೆಂಡರ್‌ಗೆ ಇಡಲಾದ ಪ್ರತಿ ಸಾಮಾಗ್ರಿಯ ಮಾರುಕಟ್ಟೆಯ ದರವನ್ನು ಪಡೆದು ಟೆಂಡರ್‌ಗೆ ನಮೂದಿಸಿದ ದರಗಳಿಗೆ ಹೋಲಿಕೆ ಮಾಡುವುದು ಸೂಕ್ತವೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ಈ ಸೂಚನೆಗೆ ಸಭೆಯು ಸಮ್ಮತಿಸಿತು.

ವಿಷಯ ಸಂಖ್ಯೆ: 17

ಪಾಠೋಪಕರಣಗಳ ಖರೀದಿಗೆ ಟೆಂಡರ್ ಕರೆದಿರುವ ಬಗ್ಗೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿರುವ 504 ವಸತಿ ಶಾಲೆ / ಕಾಲೇಜುಗಳಿಗೆ ಪಾಠೋಪಕರಣಗಳಾದ ಚಾರ್ಟ್‌ಗಳು, ನಕಾಶೆಗಳು, ಮಾದರಿಗಳು ಇತ್ಯಾದಿಗಳನ್ನು

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಪೂರೈಸಲು ವಸತಿ ಶಾಲೆಗಳಿಂದ ಬೇಡಿಕೆ ಬಂದಿದ್ದು, ಸಂಘವು ಈ ಸಾಮಗ್ರಿಗಳ ಪೂರೈಕೆಗೆ ಮಾನ್ಯ ಸಂಘದ ಅಧ್ಯಕ್ಷಕರು ಹಾಗೂ ಉಪಾಧ್ಯಕ್ಷರ ಅನುಮೋದನ ಮೇರೆಗೆ ದಿನಾಂಕ: 17.011.2015 ರಂದು ಈ ಪೋರ್ಟಾಲ್ ಮುಖಾಂತರ ಟೆಂಡರ್ ಕರೆಯಲಾಗಿದೆ. ಈ ಟೆಂಡರ್ ನಲ್ಲಿ 3 ಬೊಡ್ ದಾರರು ಭಾಗವಹಿಸಿರುತ್ತಾರೆ. ಟೆಂಡರ್ ತಾಂತ್ರಿಕ ಲಕೋಟೆಯನನು ದಿನಾಂಕ; 14.12.2015 ರಂದು ತೆರೆದು ಟೆಂಡರ್ ತಾಂತ್ರಿಕ ಪರಿಶಿಲನಾ ಸಮಿತಿಯ ಮುಂದೆ ಮಂಡಿಸಲಾಯಿತು. ಬಿಡ್ ದಾರರ ವಿವರಗಳು ಕೆಳಕಂಡಂತಿವೆ.

1. M/s Allwin Scientifics, Bangalore
2. M/s Excel Sports , Branch Excel Scientific Bangalore
3. M/s Ninerich InfoTech Bangalore

ಟೆಂಡರ್ ಪರಿಶೀಲನಾ ಸಮಿತಿಯು M/s Excel Sports , Branch Excel Scientific Bangalore ನ ತಾಂತ್ರಿಕ ಷರತ್ತನ್ನು ಈ ಪೋರ್ಟಾಲ್ ನಲ್ಲಿ ಪೂರೈಸದೆ ಇದ್ದುದರಿಂದ ಇವರ ತಾಂತ್ರಿಕ ಲಕೋಟೆಯನ್ನು ತಿರಸ್ಕರಿಸಲಾಯಿತು. ಟೆಂಡರ್ ಅನುಮೋದನ ಸಮಿತಿಯ ತೀರ್ಮಾನದಂತೆ ಬಾಕಿ ಉಳಿದ ಇಬ್ಬರು ಬಿಡ್‌ದಾರರು ಆರ್ಥಿಕ ಲಕೋಟೆಗಳನ್ನು ತೆರೆಯಲಾಗಿದೆ. ಹಾಗೂ ಬಿಡ್ ನ್ನು ನಮೂದಿಸಿರುವ ದರಗಳನ್ನು ಟೆಂಡರ್ ಅನುಮೋದನಾ ಸಮಿತಿ ಮುಂದೆ ದಿನಾಂಕ; 14.01.2016 ರಂದು ಮಂಡಿಸಲಾಗಿದೆ. ಮೆ॥ ಆಲ್ವಿನ್ ಸೈಂಟಿಫಿಕ್ ಇವರು ಪಾಠೋಪಕರಣಗಳ ಸರಬರಾಜಿನಲ್ಲಿ ನಮೂದಿಸಿದ ಮೊತ್ತವು 1,29,95,540/- ಲಕ್ಷಗಳಾಗಿದ್ದು, ಈ ದರವು ಎಲ್ 2 ಬಿಡ್ ದಾರರಾದ ಮೆ॥ ನೈನಿರಿಚ್ ನಮೋದಿಸಿದ ದರಕ್ಕಿಂತ ಕಡಿಮೆ ಇದೆ ವಿವರಗಳು ಕೆಳಗಿನಂತಿವೆ.

| l. No | Name of the firm | Total of End Price of all items Rs. Ps. | Remarks |
|---|---|---|---|
| 1 | M/s Allwin Scientifics | **1,29,95,540.00** | **L1** |
| 2 | M/s. Ninerich Infotech | **2,50,58,847.50** | **L2** |

ದಿನಾಂಕ: 14.01.2016 ರಂದು ನಡೆದ ಟೆಂಡರ್ ಅನುಮೋದನಾ ಸಮಿತಿಯು ಕೆಳಕಂಡ ನಿಬಂಧನೆಗಳನ್ನು ವಿಧಿಸಿ ಎಲ್ 1 ಬಿಡ್ ದಾರರನ್ನು ಮೆ॥ ಆಲ್ವಿನ್ ಸೈಂಟಿಫಿಕ್ ಆಗಿ ತೀರ್ಮಾನಿಸಿದೆ.

i. ಶೀಘ್ರದಲ್ಲೆ ನಿರ್ಮಾಣ ಪೂರ್ಣವಾಗಿ ಕಾರ್ಯಾರಂಭ ಮಾಡಲಿರುವ ಹೊಸ ವಸತಿಶಾಲೆ/ಕಾಲೇಜು ಗಳಿಗೆ ಬೇಕಾದ ಪಾಠೋಪಕರಣಗಳ ಪ್ರಮಾಣಗಳನ್ನು ಪರಿಶೀಲಿಸಿ, ಹೆಚ್ಚಿನ ಅಗತ್ಯ ಕಂಡುಬಂದಲ್ಲಿ ಪಾರದರ್ಶಕತೆ ಅಧಿನಿಯಮಗಳಲ್ಲಿ

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ನೀಡಿರುವ ನಿಯಮಗಳಡಿಯಲ್ಲಿ ಟೆಂಡರಿನಲ್ಲಿ ಕೋರಿರುವ ಪ್ರಮಾಣಗಳ ಶೇ. 25 ರಷ್ಟು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸುವುದು

ii. ಟೆಂಡರಿನಲ್ಲಿ ನಮೂದಿಸಿರುವ ಉತ್ತನ್ನಗಳ ಗುಣಮಟ್ಟದ ಪರೀಶೀಲನಗೆಗಾಗಿ ಎಲ್ಲಾ ಪಾಠೋಪಕರಣಗಳ ಒಂದೊಂದು ಮಾದರಿಗಳನ್ನು ಕೂಡಲೆ ಸರಬರಾಜು ಮಾಡಲು ಮೆ. ಆಲ್ವಿನ್ ಸೈಂಟಿಫಿಕ್ಸ್, ಬೆಂಗಳೂರು, ರವರನ್ನು ಕೋರುವುದು ಮತ್ತು ಅವುಗಳ ಗುಣಮಟ್ಟ ಮತ್ತು ತಾಂತ್ರಿಕ ವಿವರಗಳನ್ನು ಟೆಂಡರಿನಲ್ಲಿ ನಮೂದಿಸಿರುವ ವಿವರಗಳಿಗೆ ಅನುಗುಣವಾಗಿ ಇರುವುದನ್ನು ಖಚಿತಡಿಸಿಕೊಳ್ಳುವುದು. ಒಂದುವೇಳೆ ಸದರಿ ಸರಬರಾಜುದಾರರು ಗುಣಮಟ್ಟದ ಮಾದರಿಗಳನ್ನು ಸರಬರಾಜು ಮಾಡಲು ವಿಫಲಾದಲ್ಲಿ, ಐ2 ಬಿಡ್‌ದಾರರಿಂದ ಮಾದರಿಗಳನ್ನು ಪಡೆದು ಪರಿಶೀಲಿಸಿ ಅನುಮೋದನಾ ಸಮಿತಿಯ ಮುಂದೆ ವಿಷಯವನ್ನು ಮಂಡಿಸುವುದು.

iii. ಮೇಲ್ಕಂಡ ಎಲ್ಲಾ ವಿವರಗಳನ್ನು/ವರದಿಗಳನ್ನು ದಿನಾಂಕ 19/01/2016 ರಂದು ನಡೆಯುವ ಆಡಳಿತ ಮಂಡಳಿ ಸಭೆಯಲ್ಲಿ ಅವಗಾಹನೆ ಮತ್ತು ಅನುಮೋದನೆಗಾಗಿ ಮಂಡಿಸುವುದು.

---

ವಿಷಯವನ್ನು ಆಡಳಿತ ಮಂಡಳಿಯ ಮುಂದೆ ಮಂಡಿಸಿ ಸಂಘದ ಕ್ರಮವನ್ನು ಅನುಮೋದಿಸಲು ಕೋರಿದೆ.

**ತೀರ್ಮಾನ:**

**ಆಡಳಿತ ಮಂಡಳಿಯು, ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ಪಾಠೋಪಕರಣಗಳ ಖರೀದಿಗೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ನಿಯಮಾನುಸಾರ ಟೆಂಡರ್ ಕರೆದು, ಅಂತಿಮಗೊಳಿಸಿರುವ ಕ್ರಮವನ್ನು ಅವಗಾಹಿಸಿತು.**

ವಿಷಯ ಸಂಖ್ಯೆ: 18

**ಕ್ರೀಡಾಸಾಮಾಗ್ರಿಗಳ ಖರೀದಿಗೆ ಟೆಂಡರ್ ಕರೆದಿರುವ ಬಗ್ಗೆ.**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿರುವ 504 ವಸತಿ ಶಾಲೆ / ಕಾಲೇಜುಗಳಿಗೆ ಕ್ರೀಡಾ ಉಪಕರಣಗಳನ್ನು ಪೂರೈಸಲು ವಸತಿ ಶಾಲೆಗಳಿಂದ ಬೇಡಿಕೆ ಬಂದಿದ್ದು, ಸಂಘವು ಈ ಸಾಮಗ್ರಿಗಳ ಪೂರೈಕೆಗೆ ಮಾನ್ಯ ಸಂಘದ ಅದ್ಯಕ್ಷಕರು ಹಾಗೂ ಉಪಾದ್ಯಕ್ಷರ ಅನುಮೋದನ ಮೇರೆಗೆ ದಿನಾಂಕ: 17.011.2015 ರಂದು ಈ ಪೋರ್ಟಾಲ್ ಮುಖಾಂತರ ಟೆಂಡರ್ ಕರೆಯಲಾಗಿದೆ. ಈ ಟೆಂಡರ್ ನಲ್ಲಿ 3 ಬಿಡ್‌ದಾರರು ಬಾಗವಹಿಸಿರುತ್ತಾರೆ. ಟೆಂಡರ್ ತಾಂತ್ರಿಕ

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಲಕೋಟೆಯನ್ನು ದಿನಾಂಕ; 14.12.2015 ರಂದು ತೆರೆದು ಟೆಂಡರ್ ತಾಂತ್ರಿಕ ಪರಿಶಿಲನಾ ಸಮಿತಿಯ ಮುಂದೆ ಮಂಡಿಸಲಾಯಿತು. ಬಿಡ್ ದಾರರ ವಿವರಗಳು ಕೆಳಕಂಡಂತಿವೆ.

1. M/s Olympic Sporting Co. Bangalore
2. M/s Excel Sports , Bangalore
3. M/s Surya Sports, Bangalore

ಟೆಂಡರ್ ಪರಿಶೀಲನಾ ಸಮಿತಿಯು M/s Excel Sports , Bangalore ನ ತಾಂತ್ರಿಕ ಷರತ್ತನ್ನು ಈ ಪೋರ್ಟಾಲ್‌ನಲ್ಲಿ ಪೂರೈಸದೆ ಇದ್ದುದರಿಂದ ಇವರ ತಾಂತ್ರಿಕ ಲಕೋಟೆಯನ್ನು ತಿರಸ್ಕರಿಸಲಾಯಿತು. ಟೆಂಡರ್ ಅನುಮೋದನ ಸಮಿತಿಯ ತೀರ್ಮಾನದಂತೆ ಬಾಕಿ ಉಳಿದ ಇಬ್ಬರು ಬಿಡ್ ದಾರರು ಆರ್ಥಿಕ ಲಕೋಟೆಗಳನ್ನು ತೆರೆಯಲಾಗಿದೆ. ಹಾಗೂ ಬಿಡ್‌ನ್ನು ನಮೂದಿಸಿರುವ ದರಗಳನ್ನು ಟೆಂಡರ್ ಅನುಮೋದನಾ ಸಮಿತಿ ಮುಂದೆ ದಿನಾಂಕ; 14.01.2016 ರಂದು ಮಂಡಿಸಲಾಗಿದೆ. ಮೆ॥ ಸೂರ್ಯ ಸ್ಪೋರ್ಟ್ ಬೆಂಗಳೂರು ಇವರು ಕ್ರೀಡಾ ಉಪಕರಣ ಸರಬರಾಜಿನಲ್ಲಿ ನಮೂದಿಸಿದ ಮೊತ್ತವು 2,03,48,444.38/- ಲಕ್ಷಗಳಾಗಿದ್ದು, ಈ ದರವು ಎಲ್ 2 ಬಿಡ್‌ದಾರರಾದ ಮೆ॥ ಒಪಂಪಿಕ್ ಸ್ಪೋರ್ಟಿಂಗ್ ಕಂ. ಬೆಂಗಳೂರು ನಮೋದಿಸಿದ ದರಕ್ಕಿಂತ ಕಡಿಮೆ ಇದೆ ವಿವರಗಳು ಕೆಳಗಿನಂತಿವೆ.

| Sl. No | Name of the firm | Total of End Price of all items Rs. Ps. | Remarks |
|---|---|---|---|
| 1 | M/s. Surya Sports, Bangalore | 2,03,48,444.00 | L1 |
| 2 | M/s. Olympic Sporting Co, Bangalore | 2,41,19,515.00 | L2 |

ದಿನಾಂಕ: 14.01.2016 ರಂದು ನಡೆದ ಟೆಂಡರ್ ಅನುಮೋದನಾ ಸಮಿತಿಯು ಕೆಳಕಂಡ ನಿಬಂಧನೆಗಳನ್ನು ವಿಧಿಸಿ ಎಲ್ 1 ಬಿಡ್ ದಾರರನ್ನು ಮೆ॥ ಆಲ್ವಿನ್ ಸೈಂಟಿಫಿಕ್ ಆಗಿ ತೀರ್ಮಾನಿಸಿದೆ.

i. ಶೀಘ್ರದಲ್ಲೆ ನಿರ್ಮಾಣ ಪೂರ್ಣವಾಗಿ ಕಾರ್ಯಾರಂಭ ಮಾಡಲಿರುವ ಹೊಸ ವಸತಿಶಾಲೆ/ಕಾಲೇಜು ಗಳಿಗೆ ಬೇಕಾದ ಕ್ರೀಡಾ ಉಪಕರಣಗಳ ಪ್ರಮಾಣಗಳನ್ನು ಪರೀಶೀಲಿಸಿ, ಹೆಚ್ಚಿನ ಅಗತ್ಯ ಕಂಡುಬಂದಲ್ಲಿ ಪಾರದರ್ಶಕತೆ ಅಧಿನಿಯಮಗಳಲ್ಲಿ ನೀಡಿರುವ ನಿಯಮಗಳಡಿಯುಲ್ಲಿ ಟೆಂಡರಿನಲ್ಲಿ ಕೋರಿರುವ ಪ್ರಮಾಣಗಳ ಶೇ. 25 ರಷ್ಟು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸುವುದು

ii. ಟೆಂಡರಿನಲ್ಲಿ ನಮೂದಿಸಿರುವ ಉತ್ತನ್ನಗಳ ಗುಣಮಟ್ಟದ ಪರೀಶೀಲನಗೆಗಾಗಿ ಎಲ್ಲಾ ಕ್ರೀಡಾ ಉಪಕರಣಗಳ ಒಂದೊಂದು ಮಾದರಿಗಳನ್ನು ಕೂಡಲೆ ಸರಬರಾಜು ಮಾಡಲು

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಮೆ. ಸೂರ್ಯ ಸ್ಪೋರ್ಟ್ಸ್, ಬೆಂಗಳೂರು, ರವರನ್ನು ಕೋರುವುದು ಮತ್ತು ಅವುಗಳ ಗುಣಮಟ್ಟ ಮತ್ತು ತಾಂತ್ರಿಕ ವಿವರಗಳನ್ನು ಟೆಂಡರಿನಲ್ಲಿ ನಮೂದಿಸಿರುವ ವಿವರಗಳಿಗೆ ಅನುಗುಣವಾಗಿ ಇರುವುದನ್ನು ಖಚಿತಡಿಸಿಕೊಳ್ಳುವುದು.

iii. ಮೇಲ್ಕಂಡ ಎಲ್ಲಾ ವಿವರಗಳನ್ನು/ವರದಿಗಳನ್ನು ದಿನಾಂಕ 19/01/2016 ರಂದು ನಡೆಯುವ ಆಡಳಿತ ಮಂಡಳ ಸಭೆಯಲ್ಲಿ ಅವಗಾಹನೆ ಮತ್ತು ಅನುಮೋದನೆಗಾಗಿ ಮಂಡಿಸುವುದು.

ವಿಷಯವನ್ನು ಆಡಳಿತ ಮಂಡಳಿಯ ಮುಂದೆ ಮಂಡಿಸಿ ಸಂಘದ ಕ್ರಮವನ್ನು ಅನುಮೋದಿಸಲು

**ತೀರ್ಮಾನ:**

**ಆಡಳಿತ ಮಂಡಳಿಯು, ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ಕ್ರೀಡಾಸಾಮಾಗ್ರಿಗಳ ಖರೀದಿಗೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ನಿಯಮಾನುಸಾರ ಟೆಂಡರ್ ಕರೆದು, ಅಂತಿಮಗೊಳಸಿರುವ ಕ್ರಮವನ್ನು ಅವಗಾಹಿಸಿತು.**

**ವಿಷಯ ಸಂಖ್ಯೆ: 19**

**ಪ್ರಯೋಗಾಲಯ ಸಾಮಾಗ್ರಿಗಳ ಖರೀದಿಗೆ ಟೆಂಡರ್ ಕರೆದಿರುವ ಬಗ್ಗೆ.**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿರುವ 504 ವಸತಿ ಶಾಲೆ / ಕಾಲೇಜುಗಳಿಗೆ ಪ್ರಯೋಗಾಲಯ ಸಾಮಗ್ರಿ ಮತ್ತು ಉಪಕರಣಗಳನ್ನು ಪೂರೈಸಲು ವಸತಿ ಶಾಲೆಗಳಿಂದ ಬೇಡಿಕೆ ಬಂದಿದ್ದು, ಸಂಘವು ಈ ಸಾಮಗ್ರಿಗಳ ಪೂರೈಕೆಗೆ ಮಾನ್ಯ ಸಂಘದ ಅಧ್ಯಕ್ಷಕರು ಹಾಗೂ ಉಪಾದ್ಯಕ್ಷರ ಅನುಮೋದನ ಮೇರೆಗೆ ದಿನಾಂಕ: 17.011.2015 ರಂದು ಈ ಪೋರ್ಟಾಲ್ ಮುಖಾಂತರ , ಟೆಂಡರ್ ಕರೆಯಲಾಗಿದೆ. ಈ ಟೆಂಡರ್ ನಲ್ಲಿ 4 ಬಿಡ್‌ದಾರರು ಬಾಗವಹಿಸಿರುತ್ತಾರೆ. ಟೆಂಡರ್ ತಾಂತ್ರಿಕ ಲಕೋಟೆಯನ್ನು ದಿನಾಂಕ; 14.12.2015 ರಂದು ತೆರೆದು ಟೆಂಡರ್ ತಾಂತ್ರಿಕ ಪರಿಶಿಲನಾ ಸಮಿತಿಯ ಮುಂದೆ ಮಂಡಿಸಲಾಯಿತು. ಬಿಡ್ ದಾರರ ವಿವರಗಳು ಕೆಳಕಂಡಂತಿವೆ.

1. M/s Allwin Scientifics
2. M/s Excel Sports , Bangalore
3. M/s. Ninerich Infotech
4. M/s Surya Sports, Bangalore

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಟೆಂಡರ್ ಪರಿಶೀಲನಾ ಸಮಿತಿಯು M/s Excel Sports , Bangalore ಮತ್ತು M/s Surya Sports, Bangalore ನ ತಾಂತ್ರಿಕ ಷರತ್ತನ್ನು ಈ ಪೋರ್ಟಾಲ್‌ನಲ್ಲಿ ಪೂರೈಸದೆ ಇದ್ದುದರಿಂದ ಇವರ ತಾಂತ್ರಿಕ ಲಕೋಟೆಯನ್ನು ತಿರಸ್ಕರಿಸಲಾಯಿತು. ಟೆಂಡರ್ ಅನುಮೋದನ ಸಮಿತಿಯ ತೀರ್ಮಾನದಂತೆ ಬಾಕಿ ಉಳಿದ ಇಬ್ಬರು ಬಿಡ್ ದಾರರು ಆರ್ಥಿಕ ಲಕೋಟೆಗಳನ್ನು ತೆರೆಯಲಾಗಿದೆ. ಹಾಗೂ ಬಿಡ್‌ನ್ನು ನಮೂದಿಸಿರುವ ದರಗಳನ್ನು ಟೆಂಡರ್ ಅನುಮೋದನಾ ಸಮಿತಿ ಮುಂದೆ ದಿನಾಂಕ; 14.01.2016 ರಂದು ಮಂಡಿಸಲಾಗಿದೆ. ಮೆ॥ ಆಲ್ವಿನ್ ಸೈಂಟಿಫಿಕ್ ಬೆಂಗಳೂರು ಇವರು ಪ್ರಯೋಗಾಲಯ ಉಪಕರಣ ಸರಬರಾಜಿನಲ್ಲಿ ನಮೂದಿಸಿದ ಮೊತ್ತವು 95,24,325.00/- ಲಕ್ಷಗಳಾಗಿದ್ದು, ಈ ದರವು ಎಲ್ 2 ಬಿಡ್ ದಾರರಾದ ಮೆ॥ ನೈನ್ ರಿಚ್ ಇನ್ಫೋಟೆಕ್ ಬೆಂಗಳೂರು ನಮೋದಿಸಿದ ದರಕ್ಕಿಂತ ಕಡಿಮೆ ಇದೆ ವಿವರಗಳು ಕೆಳಗಿನಂತಿವೆ.

| Sl. No | Name of the firm | Total of End Price of all items Rs. Ps. | Remarks |
|---|---|---|---|
| 1 | M/s Allwin Scientifics | 95,24,325.00 | L1 |
| 2 | M/s. Ninerich Infotech | 1,26,82,800.00 | L2 |

ದಿನಾಂಕ: 14.01.2016 ರಂದು ನಡೆದ ಟೆಂಡರ್ ಅನುಮೋದನಾ ಸಮಿತಿಯು ಕೆಳಕಂಡ ನಿಬಂಧನೆಗಳನ್ನು ವಿಧಿಸಿ ಎಲ್ 1 ಬಿಡ್ ದಾರರನ್ನು ಮೆ॥ ಆಲ್ವಿನ್ ಸೈಂಟಿಫಿಕ್ ಆಗಿ ತೀರ್ಮಾನಿಸಿದೆ.

i. ಶೀಘ್ರದಲ್ಲೆ ನಿರ್ಮಾಣ ಪೂರ್ಣವಾಗಿ ಕಾರ್ಯಾರಂಭ ಮಾಡಲಿರುವ ಹೊಸ ವಸತಿಶಾಲೆ/ಕಾಲೇಜು ಗಳಿಗೆ ಬೇಕಾದ ಪ್ರಯೋಗಾಲಯ ಸಾಮಗ್ರಿಗಳು ಮತ್ತು ಉಪಕರಣಗಳ ಪ್ರಮಾಣಗಳನ್ನು ಪರೀಶೀಲಿಸಿ, ಹೆಚ್ಚಿನ ಅಗತ್ಯ ಕಂಡುಬಂದಲ್ಲಿ ಪಾರದರ್ಶಕತೆ ಅಧಿನಿಯಮಗಳಲ್ಲಿ ನೀಡಿರುವ ನಿಯಮಗಳಡಿಯುಲ್ಲಿ ಟೆಂಡರಿನಲ್ಲಿ ಕೋರಿರುವ ಪ್ರಮಾಣಗಳ ಶೇ. 25 ರಷ್ಟು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸುವುದು.

ii. ಟೆಂಡರಿನಲ್ಲಿ ನಮೂದಿಸಿರುವ ಉತ್ತನ್ನಗಳ ಗುಣಮಟ್ಟದ ಪರೀಶೀಲನಗೆಗಾಗಿ ಎಲ್ಲಾ ಪ್ರಯೋಗಾಲಯ ಸಾಮಗ್ರಿಗಳು ಮತ್ತು ಉಪಕರಣಗಳ ಒಂದೊಂದು ಮಾದರಿಗಳನ್ನು ಕೂಡಲೆ ಸರಬರಾಜು ಮಾಡಲು ಮೆ. ಆಲ್ವಿನ್ ಸೈಂಟಿಫಿಕ್ಸ್, ಬೆಂಗಳೂರು, ರವರನ್ನು ಕೋರುವುದು ಮತ್ತು ಅವುಗಳ ಗುಣಮಟ್ಟ ಮತ್ತು ತಾಂತ್ರಿಕ ವಿವರಗಳನ್ನು ಟೆಂಡರಿನಲ್ಲಿ ನಮೂದಿಸಿರುವ ವಿವರಗಳಿಗೆ ಅನುಗುಣವಾಗಿ ಇರುವುದನ್ನು ಖಚಿತಡಿಸಿಕೊಳ್ಳುವುದು. ಒಂದು ವೇಳೆ ಸದರಿ ಸರಬರಾಜುದಾರರು ಗುಣಮಟ್ಟದ ಮಾದರಿಗಳನ್ನು ಸರಬರಾಜು ಮಾಡಲು ವಿಫಲಾದಲ್ಲಿ, ಐ2 ಬಿಡ್‌ದಾರರಿಂದ ಮಾದರಿಗಳನ್ನು ಪಡೆದು ಪರಿಶೀಲಿಸಿ ಅನುಮೋದನಾ ಸಮಿತಿಯ ಮುಂದೆ ವಿಷಯವನ್ನು ಮಂಡಿಸುವುದು.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

iii. ಮೇಲ್ಕಂಡ ಎಲ್ಲಾ ವಿವರಗಳನ್ನು/ವರದಿಗಳನ್ನು ದಿನಾಂಕ 19/01/2016 ರಂದು ನಡೆಯುವ ಆಡಳಿತ ಮಂಡಳಿ ಸಭೆಯಲ್ಲಿ ಅವಗಾಹನೆ ಮತ್ತು ಅನುಮೋದನೆಗಾಗಿ ಮಂಡಿಸುವುದು.

ವಿಷಯವನ್ನು ಆಡಳಿತ ಮಂಡಳಿಯ ಮುಂದೆ ಮಂಡಿಸಿ ಸಂಘದ ಕ್ರಮವನ್ನು ಅನುಮೋದಿಸಲು ಕೋರಿದೆ.

ತೀರ್ಮಾನ:

**ಆಡಳಿತ ಮಂಡಳಿಯು, ವಸತಿ ಶಾಲೆ/ಕಾಲೇಜುಗಳಿಗೆ ಪ್ರಯೋಗಾಲಯ ಸಾಮಾಗ್ರಿಗಳ ಖರೀದಿಗೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ನಿಯಮಾನುಸಾರ ಟೆಂಡರ್ ಕರೆದು, ಅಂತಿಮಗೊಳಿಸಿರುವ ಕ್ರಮವನ್ನು ಅವಗಾಹಿಸಿತು.**

ವಿಷಯ ಸಂಖ್ಯೆ: 20

ಪಾತ್ರೆ ಪರಿಕರಗಳನ್ನು ಖರೀದಿಸುವ ಬಗ್ಗೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿರುವ 504 ವಸತಿ ಶಾಲೆ / ಕಾಲೇಜುಗಳಿಗೆ ಪಾತ್ರೆ ಪರಿಕರಗಳನ್ನು ಪೂರೈಸಲು ವಸತಿ ಶಾಲೆಗಳಿಂದ ಬೇಡಿಕೆ ಬಂದಿದ್ದು, ಸಂಘವು ಈ ಸಾಮಗ್ರಿಗಳ ಪೂರೈಕೆಗೆ ಮಾನ್ಯ ಸಂಘದ ಅಧ್ಯಕ್ಷಕರು ಹಾಗೂ ಉಪಾಧ್ಯಕ್ಷರ ಅನುಮೋದನ ಮೇರೆಗೆ ದಿನಾಂಕ: 17.011.2015 ರಂದು ಈ ಪೋರ್ಟಾಲ್ ಮುಖಾಂತರ ಟೆಂಡರ್ ಕರೆಯಲಾಗಿದೆ. ಈ ಟೆಂಡರ್ ನಲ್ಲಿ ಇಬ್ಬರು ಬಿಡ್‌ದಾರರು ಬಾಗವಹಿಸಿರುತ್ತಾರೆ. ಟೆಂಡರ್ ತಾಂತ್ರಿಕ ಲಕೋಟೆಯನ್ನು ದಿನಾಂಕ; 14.12.2015 ರಂದು ತೆರೆದು ಟೆಂಡರ್ ತಾಂತ್ರಿಕ ಪರಿಶಿಲನಾ ಸಮಿತಿಯ ಮುಂದೆ ಮಂಡಿಸಲಾಯಿತು. ಬಿಡ್ ದಾರರ ವಿವರಗಳು ಕೆಳಕಂಡಂತಿವೆ.

1. M/s Distict Supply and Marketing Co-oprative Socity Ltd Bangalore **(DSMS)**
2. M/s K Sohanraj Davangere

ಟೆಂಡರ್ ಪರಿಶೀಲನಾ ಸಮಿತಿಯು ಎರಡೂ ಸಂಸ್ಥೆಗಳು ತಾಂತ್ರಿಕ ಷರತ್ತನ್ನು ಈ ಪೋರ್ಟಾಲ್‌ನಲ್ಲಿ ಪೂರೈಸಿದ್ದುದರಿಂದ ಇದ್ದುದರಿಂದ ಇವರ ತಾಂತ್ರಿಕ ಲಕೋಟೆಯನ್ನು ಅನುಮೋದಿಸಲಾಯಿತು. ಟೆಂಡರ್ ಅನುಮೋದನ ಸಮಿತಿಯ ತೀರ್ಮಾನದಂತೆ ಇಬ್ಬರೂ ಬಿಡ್ ದಾರರು ಆರ್ಥಿಕ ಲಕೋಟೆಗಳನ್ನು ತೆರೆಯಲಾಗಿದೆ. ಹಾಗೂ ಬಿಡ್‌ನ್ನು ನಮೂದಿಸಿರುವ ದರಗಳನ್ನು ಟೆಂಡರ್

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಅನುಮೋದನಾ ಸಮಿತಿ ಮುಂದೆ ದಿನಾಂಕ: 14.01.2016 ರಂದು ಮಂಡಿಸಲಾಗಿದೆ. M/s K Sohanraj Davangere ಇವರು **ಪಾತ್ರೆ ಪರಿಕರಗಳು** ಸರಬರಾಜಿನಲ್ಲಿ ನಮೂದಿಸಿದ ಮೊತ್ತವು 6,93,50,140.00/- ಲಕ್ಷಗಳಾಗಿದ್ದು, ಈ ದರವು ಎಲ್ 2 ಬಿಡ್ ದಾರರಾದ ಮೆ M/s Distict supply and marketing co-oprative socity Ltd Bangalore **(DSMS)** ನಮೋದಿಸಿದ ದರಕ್ಕಿಂತ ಕಡಿಮೆ ಇದೆ ವಿವರಗಳು ಕೆಳಗಿನಂತಿವೆ.

| Sl. No | Name of the firm | Total of End Price of all items Rs. Ps. | Remarks |
|---|---|---|---|
| 1 | M/s K Sohanraj Davangere | 6,93,50,140.00 | L1 |
| 2 | M/s Distict supply and marketing co-oprative socity Ltd Bangalore (DSMS) | 8,16,05,645.00 | L2 |

ದಿನಾಂಕ: 14.01.2016 ರಂದು ನಡೆದ ಟೆಂಡರ್ ಅನುಮೋದನಾ ಸಮಿತಿಯು ಕೆಳಕಂಡ ನಿಬಂಧನೆಗಳನ್ನು ವಿಧಿಸಿ ಎಲ್ 1 ಬಿಡ್ ದಾರರನ್ನು M/s K Sohanraj Davangere ಆಗಿ ತೀರ್ಮಾನಿಸಿದೆ.

1. ಶೀಘ್ರದಲ್ಲೆ ನಿರ್ಮಾಣ ಪೂರ್ಣವಾಗಿ ಕಾರ್ಯಾರಂಭ ಮಾಡಲಿರುವ ಹೊಸ ವಸತಿಶಾಲೆ/ಕಾಲೇಜು ಗಳಿಗೆ ಬೇಕಾದ ಅಡುಗೆ ಪಾತ್ರೆ ಸಾಮಾನುಗಳ ಸರಬರಾಜು ಮತ್ತು ಸ್ಟೀಮ್ ಕುಕಿಂಗ್ ರೇಂಜ್‌ಗಳ ಪ್ರಮಾಣಗಳನ್ನು ಪರಿಶೀಲಿಸಿ, ಹೆಚ್ಚಿನ ಅಗತ್ಯ ಕಂಡುಬಂದಲ್ಲಿ ಪಾರದರ್ಶಕತೆ ಅಧಿ ನಿಯಮಗಳಲ್ಲಿ ನೀಡಿರುವ ನಿಯಮಗಳಡಿಯುಲ್ಲಿ ಟೆಂಡರಿನಲ್ಲಿ ಕೋರಿರುವ ಪ್ರಮಾಣಗಳ ಶೇ. 25 ರಷ್ಟು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸುವುದು.

2. ಮುಕ್ತ ಮಾರುಕಟ್ಟೆಯಲ್ಲಿ ಪ್ರಮು ಅಡುಗೆ ಪಾತ್ರೆ ಸಾಮಾನುಗಳ ಸರಬರಾಜುದಾರರಿಂದ ದರಪಟ್ಟಿಯನ್ನು ಪಡೆದು ಟೆಂಡರಿನಲ್ಲಿ ದೊರೆತ ಎಲ್ 1 ದರಗಳು, ಮಾರುಕಟ್ಟೆಯಲ್ಲಿ ದೊರೆಯುವ ಅದೇ ಮಾದರಿಯ ಅಡುಗೆ ಪಾತ್ರೆ ಸಾಮಾನುಗಳ ದರಗಳಿಗಿಂಗ ಹೆಚ್ಚು ಇರುವುದಿಲ್ಲವೆಂಬುದನ್ನು ಖಚಿತ ಪಡಿಸಿಕೊಳ್ಳುವುದು.

3. ಟೆಂಡರ್‌ನಲ್ಲಿ ನಮೂದಿಸಿರುವ ಉತ್ಪನ್ನಗಳ ಗುಣಮಟ್ಟದ ಪರಿಶೀಲನೆಗಾಗಿ ಎಲ್ಲಾ ಅಡುಗೆ ಪಾತ್ರೆ ಸಾಮಾನುಗಳ ಒಂದೊಂದು ಮಾದರಿಗಳನ್ನು ಕೂಡಲೇ ಸರಬರಾಜು ಮಾಡುವಂತೆ ಮೆ॥ ಸೋಹನರಾಜ್, ದಾವಣಗೆರೆ ಅವರನ್ನು ಕೋರುವುದು ಮತ್ತು ಅವುಗಳ ಗುಣಮಟ್ಟ ಮತ್ತು ತಾಂತ್ರಿಕ ವಿವರಗಳು ಟೆಂಡರಿನಲ್ಲಿ ಕೋರಿರುವ ವಿರಗಳಿಗೆ ಅನುಗುಣವಾಗಿ ಇರುವುದನ್ನು ಖಚಿತಪಡಿಸಿಕೊಳ್ಳುವುದು.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

4. ಸ್ಟೀಮ್ ಕುಕಿಂಗ್ ರೇಂಜ್ನ ಒಂದು ಪ್ಲಾಂಟ್ ಅನ್ನು ಸೂಕ್ತವೆನಿಸುವ ಒಂದು ವಸತಿ ಶಾಲೆಯಲ್ಲಿ ಅಳವಡಿಸುವಂತೆ ಮೆ|| ಸೋಹನರಾಜ್, ದಾವಣಗೆರೆ ಅವರನ್ನು ಕೋರುವುದು ಮತು ಅದರ ಗುಣಮಟ್ಟ ಹಾಗೂ ಕಾರ್ಯನಿರ್ವಹಣೆಯನ್ನು ಪರಿಶೀಲಿಸುವುದು.
5. ಈಗಾಗಲೇ ಸ್ಟೀಮ್ ಕುಕಿಂಗ್ ರೇಂಜ್ ಉಪಕರಣವನ್ನು ಸಂಘದ ವಸತಿ ಶಾಲೆಗಳಲ್ಲಿ ಅಥವಾ ಇತರೆ ಇಲಾಖೆಗಳಲ್ಲಿ ಖರೀದಿಸಿ ಉಪಯೋಗಿಸುತ್ತಿದ್ದಲ್ಲಿ ಅವುಗಳ ವಿವರಗಳನ್ನು ಪರಿಶೀಲಿಸಿ ವರದಿ ತಯಾರಿಸುವುದು.
6. ಮೇಲ್ಕಂಡ ಎಲ್ಲಾ ವಿವರಗಳನ್ನು /ವರದಿಗಳನ್ನು ದಿನಾಂಕ:19.01.2016ರಂದು ನಡೆಯುವ ಆಡಳಿತ ಮಂಡಳಿ ಸಭೆಯಲ್ಲಿ ಅವಗಾಹನೆ ಮತ್ತು ಅನುಮೋದನೆಗಾಗಿ ಮಂಡಿಸುವುದು.

ವಿಷಯವನ್ನು ಆಡಳಿತ ಮಂಡಳಿಯ ಮುಂದೆ ಮಂಡಿಸಿ ಸಂಘದ ಕ್ರಮವನ್ನು ಅನುಮೋದಿಸಲು ಕೋರಿದೆ.

ತೀರ್ಮಾನ:

**ಆಡಳಿತ ಮಂಡಳಿಯು, ವಸತಿ ಶಾಲೆಗಳಿಗೆ ಪಾತ್ರೆ ಪರಿಕರಗಳ ಖರೀದಿಗೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ನಿಯಮಾನುಸಾರ ಟೆಂಡರ್ ಕರೆದು, ಅಂತಿಮಗೊಳಿಸಿರುವ ಕ್ರಮವನ್ನು ಅವಗಾಹಿಸಿತು.**

ವಿಷಯ ಸಂಖ್ಯೆ: 21

ಸಂಘದವತಿಯಿಂದ ಇತರೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಸಂಬಂಧ ಟೆಂಡರ್ ಕರೆದಿರುವ ವಿವರಗಳನ್ನು ಸಲ್ಲಿಸುವ ಬಗ್ಗೆ.

1. Solar roof top plant ಅಳವಡಿಸಲು ಟೆಂಡರ್ ಕರೆದಿರುವ ಬಗ್ಗೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಹಾಗೂ ಪ್ರಸ್ತುತ ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿರುವ ವಸತಿ ಶಾಲೆ ಹಾಗೂ ಕಾಲೇಜುಗಳಲ್ಲಿ Solar roof top plant ಅಳವಡಿಸಲು ದಿ: 02.01.2016 ರಲ್ಲಿ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ 03.02.2016 ಆಗಿರುತ್ತದೆ.

2. 25 ಕೆ ವಿ ಡೀಸೆಲ್ ಜನರೇಟರ್ ಖರೀದಿಸಲು ಟೆಂಡರ್ ಕರೆದಿರುವ ಬಗ್ಗೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ 300 ವಸತಿ ಶಾಲೆ/ಕಾಲೇಜುಗಳಿಗೆ ರೂ 23.00 ಮೌಲ್ಯದ ಮೊತ್ತಕ್ಕೆ ದಿ:30.12.2015 ರಂದು 25

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಕೆ ವಿ ಡಿಸೇಲ್ ಜನರೇಟರ್ ಖರೀದಿಸಲು ಟೆಂಡರ್ ಕರೆಯಲಾಗಿದೆ. ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 01.02.2016.

3. **ಸಿಸಿ ಕ್ಯಾಮರ ಖರೀದಿಸಲು ಅಳವಡಿಸಲು ಟೆಂಡರ್ ಕರೆದಿರುವ ಬಗ್ಗೆ.**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಯೋಜನೇ ಲೆಕ್ಕಶೀರ್ಷಿಕೆಯಡಿ ಬರುವ 230 ಸ್ವಂತ ಕಟ್ಟಡದಲ್ಲಿರುವ ವಸತಿ ಶಾಲೆ/ಕಾಲೇಜುಗಳು ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ **ಸಿಸಿ ಕ್ಯಾಮರ ಖರೀದಿಸಲು ಅಳವಡಿಸಲು** ರೂ 3.90 ಕೋಟಿ ಮೌಲ್ಯದ ಮೊತ್ತಕ್ಕೆ ದಿ:26.11.2015 ರಂದು ಟೆಂಡರ್ ಕರೆಯಲಾಗಿದೆ. ಟೆಂಡರ್ ಸ್ವೀಕರಿಸಲು ಕೋನೆಯ ದಿನಾಂಕ: 05.01.2016 ಆಗಿದ್ದು, ದಿನಾಂಕ:07.01.2016 ರಂದು ಟೆಂಡರ್ ತಾಂತ್ರಿಕ ಲಕೋಟೆಯನ್ನು ತೆರೆಯಲಾಗಿದ್ದು, ಟೆಂಡರ್ ಪರಿಶೀಲನಾ ಸಮಿತಿಯ ಮುಂದೆ ಮಂಡಿಸಬೇಕಿದೆ.ಅಲ್ಲದೇ ಸಿಸಿ ಕ್ಯಾಮರ ತಯಾರಿಕಾ/ಸರಬರಾಜುದಾರರು (Demo) ಪ್ರದರ್ಶಿಸಬೇಕಿರುತ್ತದೆ.

4. **Thin client with Server, Computer, Monochrome Multi Function Device, Projector, UPS 2 KVA 24 port unmanaged switch** ಗಳಿಗೆ ಟೆಂಡರ್ ಕರೆದಿರುವ ಬಗ್ಗೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ವಸತಿ ಶಾಲೆ/ಕಾಲೇಜುಗಳಿಗೆ **Thin client with Server, Computer, Monochrome Multi Function Device, Projector, UPS 2 KVA 24 port unmanaged switch** ಖರೀದಿಸಲು ರೂ 19.81 ಕೋಟಿ ಮೌಲ್ಯದ ಮೊತ್ತಕ್ಕೆ ದಿ: 31.12.2015 ರಂದು ಟೆಂಡರ್ ಕರೆಯಲಾಗಿದೆ. ಟೆಂಡರ್ ಸ್ವೀಕರಿಸಲು ಕೋನೆಯ ದಿನಾಂಕ: 01.02.2016 ಆಗಿರುತ್ತದೆ.

5. **Incinerator ಗಳಿಗೆ ಟೆಂಡರ್ ಕರೆದಿರುವ ಬಗ್ಗೆ.**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ವಸತಿ ಶಾಲೆ/ಕಾಲೇಜುಗಳಲ್ಲಿರುವ ಬಾಲಕಿಯ ಅನುಕೂಲಕ್ಕಾಗಿ Incinerator ಗಳನ್ನು ಖರೀದಿಸಲು ರೂ 5.48 ಕೋಟಿ ಮೌಲ್ಯದ ಮೊತ್ತಕ್ಕೆ ದಿ: 30.12.2015 ರಂದು

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಟೆಂಡರ್ ಕರೆಯಲಾಗಿದೆ. ಟೆಂಡರ್ ಸ್ವೀಕರಿಸಲು ಕೋನೆಯ ದಿನಾಂಕ: 01.02.2016 ಆಗಿರುತ್ತದೆ.

ಮೇಲಿನ ಅಂಶಗಳನ್ನು ಆಡಳಿತ ಮಂಡಳಿಯ ಅವಗಾಹನೆಗೆ ತರುತ್ತಾ ಸಂಘದ ಕ್ರಮವನ್ನು ಅನುಮೋದಿಸಲು ಕೋರಿದೆ.

**ತೀರ್ಮಾನ:**

**ಸ್ವಂತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳಿಗೆ ಅಗತ್ಯ ಮೂಲಭೂತ ಸಾಮಾಗ್ರಿಗಳ ಖರೀದಿಗೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ಟೆಂಡರ್ ಕರೆದಿರುವುದನ್ನು ಕಾರ್ಯನಿರ್ವಾಹಕ ನಿರ್ದೇಶಕರು ಸಭೆಗೆ ವಿವರಿಸಿದರು. ಈ ಎಲ್ಲಾ ಟೆಂಡರ್‌ಗಳ ಬಗ್ಗೆ ಸಚಿವ ಸಂಪುಟ ಸಭೆಯ ಅನುಮೋದನೆ ಪಡೆಯುವ ಬಗ್ಗೆ ಕ್ರಮವಹಿಸಬೇಕೆಂದು ತೀರ್ಮಾನಿಸಲಾಯಿತು.**

**ವಿಷಯ ಸಂಖ್ಯೆ: 22**

**ವಸತಿ ಶಾಲೆಗಳಲ್ಲಿನ ವಿದ್ಯಾರ್ಥಿಗಳಿಗೆ ದೂರವಾಣಿ ಸಂಪರ್ಕ ಒದಗಿಸುವ ಬಗ್ಗೆ.**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ/ ಕಿತ್ತೂರು ರಾಣಿ ಚೆನ್ನಮ್ಮ/ ಅಟಲ್ ಬಿಹಾರಿ ವಾಜಪೇಯಿ/ ಏಕಲವ್ಯ ಮಾದರಿ ವಸತಿ ಶಾಲೆಗಳಲ್ಲಿ 6 ರಿಂದ 10 ನೇ ತರಗತಿವರೆಗಿನ ವಿದ್ಯಾರ್ಥಿಗಳು ವ್ಯಾಂಸಗ ಮಾಡುತ್ತಿರುತ್ತಾರೆ. ಈ ವಿದ್ಯಾರ್ಥಿಗಳು ಮೋಷಕರೊಂದಿಗೆ ಸಂಪರ್ಕಿಸಲು ದೂರವಾಣಿ ಸೌಲಭ್ಯವನ್ನು ಒದಗಿಸುವಂತೆ ಹಲವಾರು ಮೋಷಕರು ಒತ್ತಾಯಿಸುತ್ತಿರುತ್ತಾರೆ. ಈ ಬಗ್ಗೆ ವಸತಿ ಶಾಲೆಗಳ ಪ್ರಾಂಶುಪಾಲರುಗಳ ಸಭೆಯಲ್ಲಿ ಚರ್ಚಿಸಲಾಗಿದ್ದು, ವಸತಿ ಶಾಲೆಗಳಲ್ಲಿ ವಿದ್ಯಾರ್ಥಿಗಳು ಪೋಷಕರೊಂದಿಗೆ ಮಾತಾನಾಡುವ ಅತ್ಯಾವಶ್ಯಕ ಸಂದರ್ಭಗಳಲ್ಲಿ ವಸತಿ ಶಾಲೆಯ ಸಿಬ್ಬಂದಿಗಳ ಮೊಬೈಲ್ ದೂರವಾಣಿ ಮತ್ತು ಶಾಲೆಯ ಕಛೇರಿ ದೂರವಾಣಿಗಳನ್ನು ಉಪಯೋಗಿಸಲು ಒದಗಿಸಲಾಗುತ್ತಿದೆ. ವಿದ್ಯಾರ್ಥಿಗಳಿಗಾಗಿಯೇ ಪ್ರತ್ಯೇಕವಾಗಿ ದೂರವಾಣಿ ಸೌಲಭ್ಯ ಒದಗಿಸಿದಲ್ಲಿ, ವಿದ್ಯಾರ್ಥಿಗಳು ದೂರವಾಣಿಯಲ್ಲಿ ಸಂಬಾಷಣೆ ನಡೆಸುವಾಗ ಅದರ ಮೇಲ್ವಿಚಾರಣೆ ನಡೆಸುವುದು ಕಷ್ಟಸಾಧ್ಯವಾಗುತ್ತದೆ. ವಿದ್ಯಾರ್ಥಿಗಳಿಗಾಗಿ ಪ್ರತ್ಯೇಕ ದೂರವಾಣಿ ಸೌಲಭ್ಯ ಒದಗಿಸಿದಲ್ಲಿ ಅನುಕೂಲಕ್ಕಿಂತ ಅನಾನುಕೂಲವೇ ಹೆಚ್ಚಾಗುವ ಸಾಧ್ಯತೆಗಳಿರುತ್ತವೆಂದು ಪ್ರಾಂಶುಪಾಲರುಗಳು ತಿಳಿಸಿರುತ್ತಾರ. ಆದ್ದರಿಂದ ವಸತಿ ಶಾಲೆಗಳ

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ವಿದ್ಯಾರ್ಥಿಗಳಿಗೆ ಪ್ರತ್ಯೇಕ ದೂರವಾಣಿ ಸೌಲಭ್ಯ ಕಲ್ಪಿಸುವ ಬಗ್ಗೆ ಆಯಾ ವಸತಿ ಶಾಲೆಯ ಪ್ರಾಂಶುಪಾಲರುಗಳೇ ಸೂಕ್ತ ನಿರ್ಧಾರ ಕೈಗೊಳ್ಳಬಹುದಾಗಿರುತ್ತದೆ.

ವಿಷಯವನ್ನು ಸಭೆಯ ಅವಗಾಹನೆಗೆ ಮಂಡಿಸುತ್ತಾ, ಸೂಕ್ತ ತೀರ್ಮಾನ ಕೋರಿದೆ.

**ತೀರ್ಮಾನ:**

**ವಿಷಯವನ್ನು ಆಡಳಿತ ಮಂಡಳಿಯು ದೀರ್ಘವಾಗಿ ಚರ್ಚಿಸಿತು. ಜವಹಾರ್ ನವೋದಯ ವಸತಿ ಶಾಲೆಗಳಲ್ಲಿ ದೂರವಾಣಿ ಇಲಾಖೆಯು Coin Booth ಗಳನ್ನು ಅಳವಡಿಸಿಕೊಂಡಿದ್ದು, ಈ ಮಾದರಿಯನ್ನು ವಸತಿ ಶಾಲೆಗಳಲ್ಲಿ ವಿದ್ಯಾರ್ಥಿಗಳು ತುರ್ತು ಸಂದರ್ಭಗಳಲ್ಲಿ ಮಾತ್ರ ಉಪಯೋಗಿಸಿಕೊಳ್ಳುವ ಬಗ್ಗೆ ಸೂಚನೆ ನೀಡಿ ಅಳವಡಿಸಿಕೊಳ್ಳಲು ತೀರ್ಮಾನಿಸಿತು.**

ವಿಷಯ ಸಂಖ್ಯೆ: 23

**ವಸತಿ ಶಾಲೆಯ ಪೋಷಕರು ಮಕ್ಕಳನ್ನು ಭೇಟಿ ಮಾಡಲು ಬಂದಾಗ, ಮಕ್ಕಳೊಂದಿಗೆ ಕುಳಿತು ಮಾತನಾಡಲು ಸ್ಥಳಾವಕಾಶದ ಲಭ್ಯತೆಯನ್ನು ಆಧರಿಸಿ ಅವಕಾಶ ಮಾಡಿಕೊಡುವ ಕುರಿತು ಆಯಾ ಶಾಲೆಯ ಪ್ರಾಂಶುಪಾಲರು ತೀರ್ಮಾನ ತೆಗೆದುಕೊಳ್ಳುವ ಬಗ್ಗೆ.**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿ ಒಟ್ಟು 479 ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ ಅಟಲ್ ಬಿಹಾರಿ ವಾಜಪೇಯಿ/ ಏಕಲವ್ಯ ಮಾದರಿ ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಈ ವಸತಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಪೋಷಕರು ಹಾಗೂ ಶಿಕ್ಷಕರುಗಳ ಜೂಲೈ, ಸೆಪ್ಟಂಬರ್,ಜನವರಿ, ಸಭೆಯಲ್ಲಿ ವರ್ಷದಲ್ಲಿ 3 ಬಾರಿ ನಡೆಸಲಾಗುತ್ತಿದೆ. ಆದರೆ ಕೆಲವೊಂದು ಶಾಲೆಗಳಲ್ಲಿ 2 ಬಾರಿ ಪೋಷಕರ ಸಭೆ ನಡೆಸುತ್ತಿರುವುದಾಗಿ ಹಲವಾರು ಪ್ರಾಂಶುಪಾಲರು ಮತ್ತು ಪೋಷಕರು ತಿಳಿಸಿರುತ್ತಾರೆ. ಆದ್ದರಿಂದ ಎಲ್ಲಾ ವಸತಿ ಶಾಲೆಗಳಲ್ಲಿ ಏಕರೂಪದಲ್ಲಿ ಸಭೆಯ ದಿನವನ್ನು ನಿಗಧಿ ಪಡಿಸುವುದು ಸೂಕ್ತವಾಗಿರುತ್ತದೆ. ಅಲ್ಲದೇ, ವಸತಿ ಶಾಲೆಯ ವಿದ್ಯಾರ್ಥಿಗಳ ಪೋಷಕರು ವಿದ್ಯಾರ್ಥಿಗಳನ್ನು ನೋಡಲು ವಸತಿ ಶಾಲೆಗೆ ಬಂದಂತಹ ಸಂದರ್ಭದಲ್ಲಿ ಆ ವಿದ್ಯಾರ್ಥಿಯನ್ನು ಕುಳಿತು ಮಾತನಾಡಿಸಲು ನಿರ್ದಿಷ್ಠ ಸ್ಥಳವನ್ನು ನಿಗಧಿಪಡಿಸುವಂತೆ ಹಲವಾರು ಪೋಷಕರು ಒತ್ತಾಯಿಸುತ್ತಿರುತ್ತಾರೆ.ಈ ಉದ್ದೇಶಕ್ಕಾಗಿ ಪ್ರಸ್ತುತ ಯಾವುದೇ ಪ್ರತ್ಯೇಕ ಸ್ಥಳಾವಕಾಶ ಇರುವುದಿಲ್ಲ. ಆದ್ದರಿಂದ ಪೋಷಕರು ಮಕ್ಕಳನ್ನು ಭೇಟಿ ಮಾಡಲು ಬಂದಾಗ ಮಕ್ಕಳೊಂದಿಗೆ

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಕುಳಿತು ಮಾತನಾಡಲು ಸ್ಥಳಾವಕಾಶದ ಲಭ್ಯತೆಯನ್ನಾಧರಿಸಿ ಅವಕಾಶ ಮಾಡಿಕೊಡುವ ಬಗ್ಗೆ ಆಯಾ ಶಾಲೆಯ ಪ್ರಾಂಶುಪಾಲರು ತೀರ್ಮಾನ ತೆಗೆದುಕೊಳ್ಳುವಂತೆ ತಿಳಿಸಬಹುದಾಗಿದೆ. ಇನ್ನು ಮುಂದೆ ಕಟ್ಟಡ ನಿರ್ಮಾಣ ಮಾಡುವ ವಸತಿ ಶಾಲೆಗಳಲ್ಲಿ ಈ ಉದ್ದೇಶವಾಗಿಯೇ ಪೋಷಕಕರ ಭಾವಡಿಯನ್ನು ನಿರ್ಮಿಸುವ ಬಗ್ಗೆ ಯೋಜನೆ ರೂಪಿಸಬಹುದಾಗಿದೆ.

ಸದರಿ ವಿಷಯವನ್ನು ಆಡಳಿತ ಮಂಡಿಳಯ ತೀರ್ಮಾನಕ್ಕೆ ಮತ್ತು ಅನುಮೋದನೆಗಾಗಿ ಮಂಡಿಸಿದೆ.

<u>ತೀರ್ಮಾನ:</u>

1. **ಆಡಳಿತ ಮಂಡಳಿಯು ವಿಷಯವನ್ನು ಅವಲೋಕಿಸಿ, ಸ್ವಂತ ಕಟ್ಟಡಗಳಲ್ಲಿರುವ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳ ವಿದ್ಯಾರ್ಥಿಗಳನ್ನು ಪೋಷಕರು ಬೇಟಿ ಮಾಡಲು ಹಾಲಿ ಇರುವ ಕಟ್ಟಡಗಳಲ್ಲಿ ಪ್ರತ್ಯೇಕ ಸ್ಥಳವನ್ನು ನಿಗಧಿಪಡಿಸಲು ಅನುಮೋದಿಸಲಾಯಿತು.**
2. **ಬಾಡಿಗೆ ಕಟ್ಟಡಗಳಲ್ಲಿರುವ ವಸತಿ ಶಾಲೆಗಳ ವಿದ್ಯಾರ್ಥಿಗಳನ್ನು ಪೋಷಕರು ಬೇಟಿ ಮಾಡಲು ಇರುವ ಸ್ಥಳಾವಕಾಶದಲ್ಲಿಯೇ ವ್ಯವಸ್ಥೆ ಕಲ್ಪಿಸಲು ತೀರ್ಮಾನಿಸಲಾಯಿತು.**
3. **ವಿದ್ಯಾರ್ಥಿಗಳನ್ನು ಬೇಟಿ ಮಾಡಲು ಉದ್ದೇಶಿಸುವ ಪೋಷಕರುಗಳ ಬಗ್ಗೆ ಖಾತರಿಪಡಿಸಿಕೊಂಡು, ಮಕ್ಕಳ ಆರೋಗ್ಯಕ್ಕೆ ಸಂಬಂಧಿಸಿದ ಅತೀ ತುರ್ತಾದ ಸಮಯದಲ್ಲಿ ಮಾತ್ರ ರಜಾ ದಿನವಾದ ಭಾನುವಾರ ಅಥವಾ ಸೂಕ್ತ ಸಾರ್ವತ್ರಿಕ ರಜಾದಿನಗಳಂದು ಮಾತ್ರ ಬೇಟಿ ಮಾಡಲು ಅವಕಾಶ ಕಲ್ಪಿಸಬೇಕು. ಉಳಿದಂತೆ, Ist term ನಲ್ಲಿ & II term ನಲ್ಲಿ ಪೋಷಕರ ಸಭೆಯನ್ನು ನಿಗಧಿಪಡಿಸಿದ ಸಂದರ್ಭದಲ್ಲಿ ಮಾತ್ರ ಬೇಟಿಗೆ ಅವಕಾಶ ನೀಡಬೇಕೆಂದು ತೀರ್ಮಾನಿಸಲಾಯಿತು.**
4. **ವಿದ್ಯಾರ್ಥಿಗಳನ್ನು ಬೇಟಿ ಮಾಡುವ ಪೋಷಕರುಗಳು ಬೇಟಿಗಾಗಿ ನಿಗಧಿಪಡಿಸಿದ ಸ್ಥಳದಲ್ಲಿಯೇ ಮಾತ್ರ ಬೇಟಿ ಮಾಡಲು ಅವಕಾಶ ನೀಡಬೇಕು.**

ಸದಸ್ಯ ಕಾರ್ಯದರ್ಶಿ                                        ಅಧ್ಯಕ್ಷರು

<u>ವಿಷಯ ಸಂಖ್ಯೆ: 24</u>

**<u>ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಲ್ಲಿ ಮಾನವ ಸಂಪನ್ಮೂಲ ನೀತಿ (HR Policy) ರೂಪಿಸುವ ಬಗ್ಗೆ.</u>**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವನ್ನು ಸರ್ಕಾರದ ಆದೇಶ ಸಂಖ್ಯೆ: ಸ ಕ ಇ 532 ಎಸ್.ಡಬ್ಲ್ಯೂ.ಡಿ 99 ದಿನಾಂಕ 6.10.1999 ರಲ್ಲಿ ಮಂಜೂರು ಮಾಡಿದೆ. ಸಂಘವು ಕರ್ನಾಟಕ ಸಂಘಗಳ ನೊಂದಣಿ ಕಾಯ್ದೆಯಡಿ ನೊಂದಾಯಿಸಿಕೊಂಡು 2.2.2000 ರಿಂದ ತನ್ನ ಕಾರ್ಯಾರಂಭ ಮಾಡಿದೆ.

ಸರ್ಕಾರವನ್ನು ಸಂಘವನ್ನು ವಿವಿಧ ಇಲಾಖೆಗಳು ಮಂಜೂರು ಮಾಡಿದ ವಸತಿ ಶಾಲೆಗಳನ್ನು ಒಂದೇ ಸೂರಿನಡಿ ತರುವ ಉದ್ದೇಶದಿಂದ ಮಂಜೂರು ಮಾಡಿದೆ. ಸಂಘದ ಪ್ರಮುಖ ಧ್ಯೇಯೋದ್ದೇಶಗಳಾದ ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶ ಹೊಂದಿದ್ದು, ತತ್ಸಂಬಂಧವಾಗಿ ಶಿಕ್ಷಕರುಗಳಿಗೆ / ವಿದ್ಯಾರ್ಥಿಗಳಿಗೆ ಅಧ್ಯಯನ ಕೋರ್ಸುಗಳನ್ನು ಏರ್ಪಡಿಸುವುದು. ವಸತಿ ಶಾಲೆಗಳಿಗೆ ಶಾಲಾ ಸಂಕೀರ್ಣ ನಿರ್ಮಾಣ ಮಾಡಿ ನಿರ್ವಹಣೆ ಮಾಡುವುದು ಮತ್ತು ಸಂಘಕ್ಕೆ / ವಸತಿ ಶಾಲೆಗಳಿಗೆ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಹುದ್ದೆಗಳನ್ನು ಸೃಜಿಸಿ, ಭರ್ತಿ ಮಾಡುವುದು ಇತ್ಯಾದಿ , ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕೇಂದ್ರ ಕಛೇರಿಗೆ ಒಟ್ಟು 84 ಹುದ್ದೆಗಳನ್ನು ಸೃಜಿಸಲಾಗಿದೆ. ಈ ಪೈಕಿ 40 ಆಡಳಿತಾತ್ಮಕ ಹುದ್ದೆಗಳು ಹಾಗೂ 44 ತಾಂತ್ರಿಕ ಹುದ್ದೆಗಳಾಗಿವೆ.

ಪ್ರಸ್ತುತ ಈ ಹುದ್ದೆಗಳಲ್ಲಿ ನಿಯೋಜನೆ ಮೇರೆಗೆ ಸಮಾಜ ಕಲ್ಯಾಣ ಇಲಾಖೆ/ ಲೋಕೋಪಯೋಗಿ ಇಲಾಖೆ/ ಲೆಕ್ಕ ಪತ್ರ ಇಲಾಖೆ / ಸಹಕಾರ ಇಲಾಖೆಗಳಿಂದ ಅಧಿಕಾರಿಗಳು ನಿಯೋಜನೆ ಮೇಲೆ 22 ಅಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. 62 ಹುದ್ದೆಗಳು ಖಾಲಿ ಇವೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ 505 ವಸತಿ ಶಾಲೆ/ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಈ ವಸತಿ ಶಾಲೆ/ ಕಾಲೇಜುಗಳಲ್ಲಿ 3650 ಖಾಯಂ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿವೆ. ಈ ವಸತಿ ಶಾಲೆಗಳಲ್ಲಿ ಖಾಲಿ ಇರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳಿಗೆ ಹೊರಸಂಪನ್ಮೂಲ ಸಿಬ್ಬಂದಿಗಳು ಹಾಗೂ ನಿವೃತ್ತ ಶಿಕ್ಷಕರುಗಳು ಕಾರ್ಯನಿರ್ವಹಿಸುತ್ತಿದ್ದಾರೆ.

ಕೇಂದ್ರ ಕಛೇರಿಯಲ್ಲಿ ಮಂಜೂರಾದ ಹುದ್ದೆಗಳು ವಸತಿ ಶಾಲೆಗಳ ಸಮರ್ಪಕ ನಿರ್ವಹಣೆಗೆ, ಕಟ್ಟಡಗಳ ನಿರ್ಮಾಣಗಳ ಉಸ್ತುವಾರಿಗೆ ಹಾಗೂ ವಸತಿ ಶಾಲೆಗಳ ಸಿಬ್ಬಂದಿಗಳ ಸೇವಾ ವಿಷಯಗಳ ನಿರ್ವಹಣೆಗೆ ಸಾಕಾಗುವುದಿಲ್ಲ. ಆದುದರಿಂದ ಸಂಘವು ಮಾನವ ಸಂಪನ್ಮೂಲವನ್ನು ಹೊರಸಂಪನ್ಮೂಲದ ಏಜೆನ್ಸಿಗಳ ಮುಖಾಂತರ ನಿವೃತ್ತ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳುವುದು ಅವಶ್ಯಕವಾಗಿದೆ. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ತನ್ನದೆ ಆದ ಮಾನವ ಸಂಪನ್ಮೂಲದ ನೀತಿಯನ್ನು ಬಂದಿರುವುದಿಲ್ಲ. ಸಂಘವು

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ವಿವಿಧ ಇಲಾಖೆಗಳಲ್ಲಿ ರೂಪಿಸಿಕೊಂಡ ಮಾನವ ಸಂಪನ್ಮೂಲದ ನೀತಿಯನ್ನು ಅಳವಡಿಸಿಕೊಂಡು ಸಂಘದ ಮಾನವ ಸಂಪನ್ಮೂಲ ಕರಡು ನೀತಿಯನ್ನು ರೂಪಿಸಿದೆ. ನೀತಿಯ ಪ್ರತಿಯನ್ನು ಲಗತ್ತಿಸಿದೆ.

ವಿಷಯವನ್ನು ಆಡಳಿತ ಮಂಡಳಿಯ ಮುಂದೆ ಮಂಡಿಸಿ, ಸಂಘವು ರೂಪಿಸಿದ ಮಾನವ ಸಂಪನ್ಮೂಲ ನೀತಿಯನ್ನು ಅನುಮೋದಿಸಲು ಕೋರಿದೆ.

ತೀರ್ಮಾನ:

**ಆಡಳಿತ ಮಂಡಳಿಯು ವಿಷಯವನ್ನು ಚರ್ಚಿಸಿತು. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ತನ್ನದೆ ಆದ ಮಾನವ ಸಂಪನ್ಮೂಲದ ನೀತಿಯನ್ನು ಅಳವಡಿಸಿಕೊಳ್ಳುವ ಬಗ್ಗೆ ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ(ವೆಚ್ಚ)ರವರು ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲು ಸಭೆಗೆ ಸಲಹೆ ನೀಡಿದ್ದು, ಅದರಂತೆ, ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸಲು ತೀರ್ಮಾನಿಸಿತು.**

ವಿಷಯ ಸಂಖ್ಯೆ:25

ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ ವಸತಿ/ ಅಟಲ್ ಬಿಹಾರಿ/ಏಕಲವ್ಯ ಮಾದರಿ ವಸತಿ ಶಾಲೆಗಳಿಗೆ ಗ್ರಂಥಾಲಯ ಪುಸ್ತಕಗಳನ್ನು ಖರೀದಿಸುವ ಬಗ್ಗೆ.

*******

ಸಂಘದ ಅಧೀನದಲ್ಲಿ 479 ವಿಷಯದಲ್ಲಿ ಹೇಳಲಾದ ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಈ ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ವಿವಿಧ ವಿಷಯಗಳಲ್ಲಿ ಜ್ಞಾನವನ್ನು ಉಂಟು ಮಾಡುವ ಸಂಬಂಧವಾಗಿ ಗ್ರಂಥಾಲಯಗಳಿಗೆ ವಿಜ್ಞಾನ, ನೀತಿ ಕಥೆ, ವೈಜ್ಞಾನಿಕ, ಭೌಗೋಳಿಕ ಹಾಗು ಭಾಷಾ ಜ್ಞಾನವನ್ನು ಹೆಚ್ಚಿಸಲು ಸರಳ ಪುಸ್ತಕಗಳನ್ನು ಖರೀದಿಸಲು ಉದ್ದೇಶಿಸಲಾಗಿದೆ. ತತ್ಸಂಬಂಧವಾಗಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕೇಂದ್ರ ಕಛೇರಿಯ ಯೋಜನಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಮೂರು ಜನ ಪ್ರಾಂಶುಪಾಲರ ಹಾಗೂ ಒಬ್ಬ ವಿಜ್ಞಾನ ಸಹ ಶಿಕ್ಷಕರ ಸದಸ್ಯತ್ವದ ಸಮಿತಿಯನ್ನು ರಚಿಸಲಾಗಿತ್ತು. ಈ ಸಮಿತಿಯು ದಿನಾಂಕ 7.1.2016 ರಂದು ಮೆ। ಸಪ್ನ ಬುಕ್ ಹೌಸ್, ಬೆಂಗಳೂರು ರವರು ನೀಡಿದ ಹಾಗೂ ಪ್ರದರ್ಶಿಸಿದ 81 ಪುಸ್ತಕಗಳನ್ನು ಪರಿಶೀಲಿಸಿ, ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವ 45 ಪುಸ್ತಕಗಳನ್ನು ಖರೀದಿಗೆ ಶಿಫಾರಸ್ಸು ಮಾಡಿದೆ. ವಿವರಗಳನ್ನು ಅನುಬಂಧದಲ್ಲಿ ಇರಿಸಿದೆ. ಈ 45 ಪುಸ್ತಕಗಳ ಒಟ್ಟಾರೆ ಬೆಲೆಯು ರೂ.8825/- ಆಗಿದೆ.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಪ್ರತಿ ವಸತಿ ಶಾಲೆಗೆ 45 ಪುಸ್ತಕಗಳ ಒಂದು ಸೆಟ್‌ನಂತೆ 479 ವಸತಿ ಶಾಲೆಗಳಿಗೆ ಸರಬರಾಜು ಮಾಡಲು ರೂ. 42.27 ಲಕ್ಷಗಳ ವೆಚ್ಚವನ್ನು ಭರಿಸಬೇಕಾಗುತ್ತದೆ.

ಈ 45 ಪುಸ್ತಕಗಳನ್ನು ವಿವಿಧ ಲೇಖಕರು ಬರೆದಿರುತ್ತಾರೆ. ಕರ್ನಾಟಕ ಪಾರದರ್ಶಕ ನಿಯಮ ಅಧ್ಯಾಯ -1 ರ ಕಂಡಿಕೆ (4) ಬಿ ರಲ್ಲಿ ಈ ಕೆಳಕಂಡಂತೆ ಉಲ್ಲೇಖಿಸಲಾಗಿದೆ.

"Where the goods or services are available from a single source or where a particular supplier or contractor has exclusive rights in respect of the goods or services or construction work and no reasonable alternative or substitutes exist;

Provided that for the purpose of this clause there shall be a committee of three experts consisting of one technical representative of the procuring entity one technical representative of the government organisation dealing with similar procurement and one representative from a reputed academic or research institution or non commercial institution having expertise in such a line to examine and declare that the goods or services are available from a single source".

ಮೇಲಿನ ನಿಯಮದಡಿ ತಿಳಿಸಿದಂತೆ ಗ್ರಂಥಾಲಯ ಪುಸ್ತಕಗಳ ಖರೀದಿಗೆ ಕಾರ್ಯನಿರ್ವಾಹಕ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಸದಸ್ಯರುಗಳನ್ನು ಒಳಗೊಂಡ ಸಮಿತಿಯನ್ನು ರಚಿಸಬಹುದಾಗಿದೆ.

1) ಕಾರ್ಯನಿರ್ವಾಹಕ ನಿರ್ದೇಶಕರು,
ಕವಶಿಸಸಂಘ - ಅಧ್ಯಕ್ಷರು
2) ಡಾ||ಎ.ಎನ್. ರಾಮಚಂದ್ರ, ಜಂಟಿ ಆಯುಕ್ತರು,
ನವೋದಯ ವಿದ್ಯಾಲಯ ಸಮಿತಿ,ಬೆಂಗಳೂರು - ಸದಸ್ಯರು
3) ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ
ಸಂಸ್ಥೆ, ಬೆಂಗಳೂರು - ಸದಸ್ಯರು
4) ನಿರ್ದೇಶಕರು, ಗ್ರಂಥಾಲಯ ಇಲಾಖೆರವರು
ನಾಮ ನಿರ್ದೇಶನ ಮಾಡುವ ಹಿರಿಯ ಅಧಿಕಾರಿರವರು - ಸದಸ್ಯರು
5) ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ,
ಬೆಂಗಳೂರು (ಉತ್ತರ ಜಿಲ್ಲೆ) - ಸದಸ್ಯರು
6) ಶಿಕ್ಷಣ ಸಲಹೆಗಾರರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, - ಸದಸ್ಯರು
7) ಯೋಜನಾಧಿಕಾರಿಗಳು,(ಶಿಕ್ಷಣ)
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, - ಸದಸ್ಯ ಕಾರ್ಯದರ್ಶಿಗಳು

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ವಿಷಯವನ್ನು ಆಡಳಿತ ಮಂಡಳಿಯ ಮುಂದೆ ಮಂಡಿಸಿ, ಮೇಲೆ ಹೇಳಲಾದ ತಜ್ಞರ ಸಮಿತಿಯನ್ನು ರಚಿಸಿ, ಉಪಸಮಿತಿಯು ಶಿಫಾರಸ್ಸು ಮಾಡಿದ ಪುಸ್ತಕಗಳನ್ನು ಪರಿಶೀಲಿಸಿ, ಶಿಫಾರಸ್ಸು ಮಾಡುವ ಪುಸ್ತಕಗಳನ್ನು ಖರೀದಿಸುವ ಬಗ್ಗೆ ತೀರ್ಮಾನ ಕೋರಿದೆ.

<u>ತೀರ್ಮಾನ:</u>

**ಆಡಳಿತ ಮಂಡಳಿಯು ವಸತಿ ಶಾಲೆಗಳ ಗ್ರಂಥಾಲಯದ ಪುಸ್ತಕಗಳ ಖರೀದಿಗೆ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000 ರಂತೆ ವಿಷಯದಲ್ಲಿ ಪ್ರಸ್ತಾಪಿಸಿದ ಸದಸ್ಯರನ್ನೊಳಗೊಂಡ ತಜ್ಞರ ಸಮಿತಿಯನ್ನು ರಚಿಸಲು ಅನುಮೋದಿಸಲಾಯಿತು. ಹಾಗೂ ಸಮಿತಿಯು ಶಿಫಾರಸ್ಸು ಮಾಡುವ ಗ್ರಂಥಾಲಯ ಪುಸ್ತಕಗಳನ್ನು ಟೆಂಡರ್ ಕರೆದು ನಿಯಮಾನುಸಾರ ಖರೀದಿಸಲು ತೀರ್ಮಾನಿಸಲಾಯಿತು.**

<u>ವಿಷಯ ಸಂಖ್ಯೆ: 26</u>

**<u>ಡಾ॥ ಚಿನ್ನಸ್ವಾಮಿ, ನಿವೃತ್ತ ನಿರ್ದೇಶಕರು (ಹಣಕಾಸು) ಹಾಗೂ ಆರ್ಥಿಕ ಸಲಹೆಗಾರರು, ಇವರಿಗೆ ಗೌರವಧನ ಹೆಚ್ಚಿಸುವ ಬಗ್ಗೆ</u>**

ಡಾ॥ ಬಿ.ಚಿನ್ನಸ್ವಾಮಿ, ನಿವೃತ್ತ ನಿರ್ದೇಶಕರು (ಹಣಕಾಸು) ಹಾಗೂ ಆರ್ಥಿಕ ಸಲಹೆಗಾರರು, **ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ,** ಇವರು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಲ್ಲಿ ಕಳೆದ 9 ತಿಂಗಳಿನಿಂದ ಆರ್ಥಿಕ ಸಲಹೆಗಾರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು ಸಂಘಕ್ಕೆ ಮನವಿ ಸಲ್ಲಿಸಿ, ವೇತನ ಹೆಚ್ಚಿಸಲು ಕೋರಿರುತ್ತಾರೆ. ಇವರ ಕರ್ತವ್ಯ ಅವಧಿಯಲ್ಲಿ ಆರ್ಥಿಕ ಶಾಖೆ ಸಕಲವಹಿವಾಟುಗಳನ್ನೊಳಗೊಂಡ ತತ್ರಾಂಶವನ್ನು ಅಭಿವೃದ್ಧಿಗೊಳಿಸಿ, ಅನುಷ್ಠಾನಗೊಳಿಸುವಲ್ಲಿ ಪಾತ್ರವಹಿಸಿರುತ್ತಾರೆ. Financial Manegment Software (FMS) ಅನ್ನು ಅಳವಡಿಸಿಕೊಳ್ಳಲಾಗಿದ್ದು, ಇದರಿಂದ ಸಿಬ್ಬಂದಿಗಳ ವೇತನ ನಿಗಧಿತ ಸಮಯದಲ್ಲಿ ಪಾವತಿಯಾಗುವಂತೆ, ಕ್ರಮವಹಿಸಲು ಸಾಧ್ಯವಾಗುತ್ತಿದೆ. ಅಲ್ಲದೇ ಈ ಆರ್ಥಿಕ ಸಲಹೆಗಾರರು, ಲೆಕ್ಕಶಾಖೆಯ ಬಿಲ್ಲುಗಳನ್ನು ಪಾಸು ಮಾಡಲು ವ್ಯವಸ್ಥೆಯನ್ನು ರೂಪಿಸಿರುತ್ತಾರೆ, ಸಂಘಧ ಇತರೆ ಆರ್ಥಿಕ ಚಟುವಟಿಕೆಗಳನ್ನು ಉತ್ತಮಪಡಿಸುವಲ್ಲಿ ಸಂಘಕ್ಕೆ ಉತ್ತಮ ಸಲಹೆಗಾರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಪ್ರಸ್ತುತ ಈ ಸಲಹೆಗಾರರಿಗೆ ಮಾಸಿಕ ರೂ.32,000/-ಗಳನ್ನು ಗೌರವಧನವನ್ನು ಪಾವತಿಸಲಾಗುತ್ತಿದೆ. ಇವರಿಗೆ ವಾಹನ ಸೌಲಭ್ಯವನ್ನು ನೀಡಲಾಗಿದೆ. ಇವರು ಗೌರವಧನವನ್ನು ಮಾಸಿಕ ರೂ.50,000/-ಗಳಿಗೆ ಹೆಚ್ಚಿಸಲು ಮೌಖಿಕವಾಗಿ ಕೋರಿದ್ದು, ವಿಷಯವನ್ನು ಆಡಳಿತ ಮಂಡಳಿ ಸಭೆಯ ಅನುಮೋದನೆಗೆ ಮಂಡಿಸಿದೆ.

**ತೀರ್ಮಾನ:**

**ಆಡಳಿತ ಮಂಡಳಿಯು ಡಾ|| ಬಿ.ಚಿನ್ನಸ್ವಾಮಿ, ನಿವೃತ್ತ ನಿರ್ದೇಶಕರು (ಹಣಕಾಸು) ಹಾಗೂ ಆರ್ಥಿಕ ಸಲಹೆಗಾರರು, ಇವರಿಗೆ ಮಾಸಿಕ ವೇತನ ರೂ.32000/- ಗಳಿಂದ ರೂ.50,000/-ಗಳಿಗೆ ಹೆಚ್ಚಳ ಮಾಡಲು ತೀರ್ಮಾನಿಸಲಾಯಿತು.**

**ವಿಷಯ ಸಂಖ್ಯೆ: 27**

**2015-16ನೇ ಪದವಿ ಪೂರ್ವ ವಸತಿ ವಿಜ್ಞಾನ ಕಾಲೇಜುಗಳ ದ್ವಿತೀಯ ಪಿ.ಯು.ಸಿ ವಿದ್ಯಾರ್ಥಿಗಳಿಗೆ ವಿಶೇಷ ಸಿಇಟಿ ತರಬೇತಿ ಆಯೋಜಿಸುವ ಬಗ್ಗೆ.**

*****

ಮೊರಾರ್ಜಿ ದೇಸಾಯಿ ವಸತಿ ವಿಜ್ಞಾನ ಪದವಿ ಪೂರ್ವ ಕಾಲೇಜುಗಳನ್ನು 2009-10ನೇ ಸಾಲಿನಲ್ಲಿ ರಾಜ್ಯಾದ್ಯಂತ ಪ್ರಾರಂಭಿಸಲಾಗಿದ್ದು ಪ್ರತಿ ಕಂದಾಯ ಜಿಲ್ಲೆಗೆ ಒಂದರಂತೆ ಇವುಗಳನ್ನು ಸ್ಥಾಪಿಸಲಾಗಿರುತ್ತದೆ. ಸದರಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ 2013-14ನೇ ಸಾಲಿನಲ್ಲಿ ದ್ವಿತೀಯ ಪಿ.ಯು.ಸಿ ವಿದ್ಯಾರ್ಥಿಗಳಿಗೆ ರಾಜ್ಯದ ನಾಲ್ಕು ವಿಭಾಗಗಳಲ್ಲಿ ರಾಜ್ಯ ಮಟ್ಟದ ಸಿ.ಇ.ಟಿ. ತರಬೇತಿಯನ್ನು ಆಯೋಜಿಸಿ ನಡೆಸಲಾಗಿತ್ತು. ಇದರ ಪರಿಣಾಮವಾಗಿ ಹಲವಾರು ಪ್ರತಿಭಾವಂತ ವಿದ್ಯಾರ್ಥಿಗಳು ರಾಜ್ಯದಲ್ಲಿಯ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಿಗೆ ಪ್ರವೇಶ ಪಡೆದಿರುತ್ತಾರೆ. ಅದೇ ರೀತಿ 2015-16ನೇ ಸಾಲಿನಲ್ಲಿಯೂ ಸಹ ರಾಜ್ಯದ 26 ಮೊರಾರ್ಜಿ ದೇಸಾಯಿ ವಸತಿ ವಿಜ್ಞಾನ ಪದವಿ ಪೂರ್ವ ಕಾಲೇಜುಗಳ ದ್ವಿತೀಯ ಪಿ.ಯು.ಸಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ರಾಜ್ಯ ಮಟ್ಟದ ವಿಶೇಷ ಸಿ.ಇ.ಟಿ. ತರಬೇತಿಯನ್ನು ಆಯೋಜಿಸುವುದು ಅತ್ಯಾವಶ್ಯಕವಾಗಿರುತ್ತದೆ. ಈ ತರಬೇತಿಯನ್ನು ರಾಜ್ಯದ ಈ ಕೆಳಗಿನ ಎರಡು ಕೇಂದ್ರಗಳಲ್ಲಿ ಆಯೋಜಿಸಲು ಉದ್ದೇಶಿಸಲಾಗಿದೆ.

| ಕ್ರ. ಸಂ. | ತರಬೇತಿ ನಡೆಯುವ ಸ್ಥಳ | ನಿಯೋಜಿಸಲಾಗುವ ವಿದ್ಯಾರ್ಥಿಗಳ ವಿವರ |
|---|---|---|
| 1 | ಬೆಂಗಳೂರು | ಬೆಂಗಳೂರು & ಮೈಸೂರು ವಿಭಾಗದ ವಸತಿ ಕಾಲೇಜುಗಳು |
| 2 | ಧಾರವಾಡ | ಬೆಳಗಾಂ & ಗುಲ್ಬರ್ಗ ವಿಭಾಗದ ವಸತಿ ಕಾಲೇಜುಗಳು |

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಸದರಿ ಸಿ.ಇ.ಟಿ. ತರಬೇತಿಗೆ ಪ್ರತಿ ಕಾಲೇಜಿನ ದ್ವಿತೀಯ ಪಿ.ಯು.ಸಿ.ಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳಲ್ಲಿ ಶೇ.25% ವಿದ್ಯಾರ್ಥಿಗಳಿಗೆ ಅವಕಾಶ ನೀಡಲಾಗುವುದು. ವಿದ್ಯಾರ್ಥಿಗಳ ಆಯ್ಕೆಯನ್ನು ಕಾಲೇಜಿನ ಮಧ್ಯವಾರ್ಷಿಕ, ಪೂರ್ವ ಸಿದ್ದತಾ ಪರೀಕ್ಷೆಗಳ ಪಿ.ಸಿ.ಎಂ.ಬಿ/ಪಿ.ಸಿ.ಎಂ.ಸಿ (ಕನ್ನಡ ಮತ್ತು ಇಂಗ್ಲೀಷ್ ವಿಷಯಗಳನ್ನು ಹೊರತುಪಡಿಸಿ) ವಿಷಯಗಳಲ್ಲಿ ವಿದ್ಯಾರ್ಥಿಗಳು ಗಳಿಸಿದ ಒಟ್ಟು ಅಂಕಗಳ ಸರಾಸರಿಯನ್ನು ತರಬೇತಿಗೆ ಮಾನದಂಡವಾಗಿ ಪರಿಗಣಿಸಿ ಒಟ್ಟು ಅಂಕಗಳಲ್ಲಿ ಪ್ರತಿ ಕಾಲೇಜಿನಿಂದ ವಿದ್ಯಾರ್ಥಿಗಳು ಪಡೆದ ರ್‍ಯಾಂಕಿಂಗ್‌ನ ಆಧಾರದ ಮೇಲೆ ಮೊದಲ 25 ವಿದ್ಯಾರ್ಥಿಗಳಿಗೆ ಅವಕಾಶ ನೀಡಲಾಗುವುದು. ಇದರಿಂದ ಪ್ರತಿ ತರಬೇತಿ ಕೇಂದ್ರಕ್ಕೆ 13 ಕಾಲೇಜುಗಳಿಂದ ಸುಮಾರು 200 ರಿಂದ 250 ವಿದ್ಯಾರ್ಥಿಗಳಾಗುವರು. ಪ್ರತಿ ತರಬೇತಿ ಕೇಂದ್ರದಲ್ಲಿ 100-120 ವಿದ್ಯಾರ್ಥಿಗಳ ಒಂದು ತಂಡದಂತೆ ಎರಡು ತಂಡಗಳಲ್ಲಿ ತರಬೇತಿ ನೀಡಲಾಗುವುದು.

ಸಿ.ಇ.ಟಿ. ತರಬೇತಿಯನ್ನು ಸಂಪನ್ಮೂಲ ಉಪನ್ಯಾಸಕರುಗಳಿಂದ ನಡೆಸಲಾಗುವುದು ಮತ್ತು ಈ ಅವಧಿಯಲ್ಲಿ ವಿದ್ಯಾರ್ಥಿಗಳ ಜೊತೆಗೆ ಪರೀಕ್ಷಾ ತಯಾರಿಯ ಬಗ್ಗೆ ಮೇಲ್ವಿಚಾರಣೆ ಮಾಡಲು ಆಯಾ ವಸತಿ ಕಾಲೇಜಿನ ಪ್ರಾಂಶುಪಾಲರು ಮತ್ತು ಇತರ ಸಿಬ್ಬಂದಿಯನ್ನು ನಿಯೋಜನೆಗೊಳಿಸಲಾಗುವುದು. ಈ ತರಬೇತಿಯನ್ನು ದಿನಾಂಕ:01-04-2016 ರಿಂದ 30-04-2016 ರವರೆಗೆ 30 ದಿನಗಳ ಕಾಲ ನಡೆಸಲಾಗುತ್ತದೆ. ಈ ತರಬೇತಿಗಾಗಿ ತಗಲುವ ವೆಚ್ಚದ ವಿವರ ಈ ಕೆಳಕಂಡಂತೆ ಇರುತ್ತದೆ.

| ಕ್ರ.ಸಂ | ವೆಚ್ಚಗಳು | ಹಣಕಾಸಿನ ಖರ್ಚು-ವೆಚ್ಚ ದ ಅಂದಾಜು ಪಟ್ಟಿ | | | ಷರಾ |
|---|---|---|---|---|---|
| | | ಅಂದಾಜು ವಿದ್ಯಾರ್ಥಿಗಳ ಸಂಖ್ಯೆ | ಪ್ರತಿ ವಿದ್ಯಾರ್ಥಿಗೆ ತಗಲುವ ವೆಚ್ಚ (ರೂಗಳಲ್ಲಿ ) | ಬೆಂಗಳೂರು ಸೆಂಟರ್ ಮತ್ತು ಧಾರವಾಡ ಸೆಂಟರ್‌ಗೆ ತಗಲುವ ಒಟ್ಟು ವೆಚ್ಚ | |
| 1 | ಆಹಾರ ವೆಚ್ಚ | 250 | 1200 | 600000 | |
| 2 | ಶುಚಿ ಕಿಟ್ ವೆಚ್ಚ | 250 | 100 | 50000 | |
| 3 | ಸ್ವಚ್ಚತಾ ಸಾಮಾಗ್ರಿ ವೆಚ್ಚ | 250 | 100 | 50000 | ಕಾಲೇಜಿಗೆ |
| 4 | ಮೆಡಿಸಿನ್ ವೆಚ್ಚ | 250 | 50 | 25000 | |
| 5 | ನೋಟ್ಸ್ ಜೆರಾಕ್ಸ್ ವೆಚ್ಚ | 250 | 800 | 400000 | |
| 6 | ಸಂಪನ್ಮೂಲ ಉಪನ್ಯಾಸಕರಿಗೆ | 250 | 2160 | 1080000 | ಕಾಲೇಜಿಗೆ |
| 7 | ವಿದ್ಯಾರ್ಥಿಗಳ ಪ್ರಯಾಣ ವೆಚ್ಚ | 250 | - | 240000 | ಒಂದು ಕಾಲೇಜಿಗೆ ರೂ.10000 ರಂತೆ 12 ಕಾಲೇಜುಗಳಿಂದ |
| 8 | ರೆಫೆರೆನ್ಸ್ ಬುಕ್ಸ್ ಗೆ | 250 | - | 400000 | 50 ಸೆಟ್ ಪಿ.ಸಿ.ಎಂ.ಬಿ |
| 9 | ಹೊರ ಸಂಪನ್ಮೂಲ ಸಿಬ್ಬಂದಿ ವೇತನಕ್ಕೆ( ಡಿ ಗ್ರೂಪ್ ಮತ್ತು ಅಡುಗೆ ಸಿಬ್ಬಂದಿಗಳಿಗೆ | - | - | 215194 | ಕಾಲೇಜಿಗೆ ಅಂದಾಜು ರೂ.107597/- ರಂದು |
| | **ಒಟ್ಟು ಅಂದಾಜು ವೆಚ್ಚ** | | | **3060194** | |

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಮೇಲ್ಕಂಡಂತೆ ಬೆಂಗಳೂರು ಸೆಂಟರ್ (ಬೆಂಗಳೂರು ಮತ್ತು ಮೈಸೂರು ವಿಭಾಗದ ವಸತಿ ಕಾಲೇಜುಗಳು) ಮತ್ತು ಧಾರವಾಡ ಸೆಂಟರ್ (ಬೆಳಗಾಂ ಮತ್ತು ಗಲ್ಬರ್ಗಾ ವಿಭಾಗದ ವಸತಿ ಕಾಲೇಜುಗಳು) ಗಳಲ್ಲಿ ಸಿ.ಇ.ಟಿ ಹೀಗೆ 2 ಸೆಂಟರ್ ಗಳಲ್ಲಿ ತರಬೇತಿಯನ್ನು ನಡೆಸಲು ತಗಲುವ ಒಟ್ಟು ವೆಚ್ಚ ರೂ.30,60,194/- ಗಳನ್ನು ವೆಚ್ಚ ಭರಿಸಬೇಕಾಗುತ್ತದೆ. ಹಾಗೂ ಈ ತರಬೇತಿ ಅವಧಿಯಲ್ಲಿ ಕಾರ್ಯನಿರ್ವಹಿಸುವ ಪ್ರಾಂಶುಪಾಲರುಗಳಿಗೆ ದಿನಕ್ಕೆ ರೂ.1000/-ರಂತೆ ವಿಶೇಷ ಭತ್ಯೆಯನ್ನು ನೀಡಬಹುದಾಗಿರುತ್ತದೆ.

ಮೇಲೆ ವಿವರಿಸಿದಂತೆ 2 ಸೆಂಟರ್ ಗಳಲ್ಲಿ ಸಿ.ಇ.ಟಿ ತರಬೇತಿಯನ್ನು ನಡೆಸಲು ಅನುಮತಿ ಹಾಗೂ ಈ ತರಬೇತಿಗೆ ತಗಲುವ ಒಟ್ಟು ವೆಚ್ಚ ರೂ.30,60,194/- ಗಳ ವೆಚ್ಚವನ್ನು ಹಾಗೂ ಈ ತರಬೇತಿ ಅವಧಿಯಲ್ಲಿ ಕಾರ್ಯನಿರ್ವಹಿಸುವ ಪ್ರಾಂಶುಪಾಲರುಗಳಿಗೆ ದಿನಕ್ಕೆ ರೂ.1000/-ರಂತೆ ವಿಶೇಷ ಭತ್ಯೆಯನ್ನು ಸಂಘದಿಂದ ಭರಿಸುವ ಬಗ್ಗೆ ವಿಷಯವನ್ನು ಸಂಘದ ಆಡಳಿತ ಮಂಡಳಿಯ ಅನುಮೋದನೆಗಾಗಿ ಮಂಡಿಸಿದೆ.

**ತೀರ್ಮಾನ:**

**ವಿಷಯವನ್ನು ಸಭೆಯು ಚರ್ಚಿಸಿತು. ಆಂದ್ರ ಪ್ರದೇಶದ ವಸತಿ ಶಾಲೆಗಳ ನಿರ್ವಹಣೆಗೆ ಸೃಜಿಸಿದ ಸಂಘವು ಈ ಬಗ್ಗೆ ಅಳವಡಿಸಿಕೊಂಡ ಮಾನದಂಡಗಳನ್ನು ಅಧ್ಯಯನ ಮಾಡಿ, ಸೂಕ್ತ ಪ್ರಸ್ತಾವನೆಯನ್ನು ಮಾನ್ಯ ಅಧ್ಯಕ್ಷರ ಅನುಮೋದನೆ ಪಡೆದು ಅನುಷ್ಠಾನಗೊಳಸಲು ತೀರ್ಮಾನಿಸಲಾಯಿತು.**

**ವಿಷಯ ಸಂಖ್ಯೆ: 28**

**ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ 6 ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೂ ಹಾಗೂ ವಸತಿ ಕಾಲೇಜುಗಳ ವಿದ್ಯಾರ್ಥಿಗಳಿಗೂ ಆಹಾರ ವೆಚ್ಚಕ್ಕಾಗಿ ರೂ.1200/- ಗಳನ್ನು ನಿಗಧಿಪಡಿಸಲಾಗಿದ್ದು, ಪದವಿ ಪೂರ್ವ ಕಾಲೇಜುಗಳ ವಿದ್ಯಾರ್ಥಿಗಳಿಗೆ ಮಾಸಿಕವಾಗಿ ನೀಡಲಾಗುತ್ತಿರುವ ಆಹಾರ ವೆಚ್ಚದ ಮೊತ್ತ ರೂ.1200/- ಗಳಿಗೆ ಬದಲಾಗಿ ರೂ.1500/- ಗಳಿಗೆ ಹೆಚ್ಚಳ ಮಾಡುವುದು.**

ಮೊರಾರ್ಜಿ ದೇಸಾಯಿ ವಸತಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರುಗಳ ಮನವಿ ಪತ್ರ ದಿನಾಂಕ:30.12.2015 ಮನವಿಯನ್ನು ಸಲ್ಲಿಸಿ. ಮನವಿಯಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ 6 ರಿಂದ 10ನೇ

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ತರಗತಿ ವಿದ್ಯಾರ್ಥಿಗಳಿಗೂ ಹಾಗೂ ವಸತಿ ಕಾಲೇಜುಗಳ ವಿದ್ಯಾರ್ಥಿಗಳಿಗೂ ಆಹಾರ ವೆಚ್ಚಕ್ಕಾಗಿ ರೂ.1200/- ಗಳನ್ನು ನಿಗಧಿಪಡಿಸಲಾಗಿದ್ದು, ಶಾಲೆ ಮತ್ತು ಕಾಲೇಜುಗಳ ವಿದ್ಯಾರ್ಥಿಗಳಿಗೆ ಒಂದೇ ರೀತಿಯಲ್ಲಿ ವೆಚ್ಚವನ್ನು ಭರಿಸಲಾಗುತ್ತಿವುದರಿಂದ ಕೇಂದ್ರ ಕಛೇರಿಯಿಂದ ಹೊರಡಿಸಿರಿವ ಮೆನುಚಾರ್ಟ್ ಅನುಸರಿಸಲು ಸಾಧ್ಯವಾಗುತ್ತಿಲ್ಲವೆಂದು ತಿಳಿಸಿರುತ್ತಾರೆ. ಮನವಿಯಲ್ಲಿ ಸಲ್ಲಿಸಿರುವ ಸಮಸ್ಯಗಳ ವಿವರಗಳು ಕೆಳಕಂಡಂತೆ ಇವೆ.

- ಕಾಲೇಜು ವಿದ್ಯಾರ್ಥಿಗಳು ಊಟ ಮಾಡುವ ಆಹಾರ ಪ್ರಮಾಣ ಹೆಚ್ಚಾಗಿ ಬೇಕಾಗಿರುವುದರಿಂದ ವಿವಿಧ ಬಗೆಯ ಆಹಾರ ಪದಾರ್ಥಗಳನ್ನು ನೀಡುವುದು ಕಷ್ಟವಾಗುತ್ತಿದೆ.
- ಕಾಲೇಜಿಗೆ ಪಡಿತರ ಅಕ್ಕಿ 160 ವಿದ್ಯಾರ್ಥಿಗಳಿಗೆ 6 ರಿಂದ 10 ಕ್ವಿಂಟಲ್ ಮಾತ್ರ ಬಿಡುಗಡೆಯಾಗುತ್ತಿದೆ. ಕಾರಣ ಪಡಿತರ ಅಕ್ಕಿ ಕೊರತೆ ಉಂಟಾಗುತ್ತಿದೆ. ಒಟ್ಟು 18 ಕ್ವಿಂಟಲ್ ಪಡಿತರ ಅಕ್ಕಿಯ ಅವಶ್ಯಕತೆ ಇದ್ದು, 8 ರಿಂದ 10 ಕ್ವಿಂಟಲ್ ಅಕ್ಕಿ ಮುಕ್ತ ಮಾರುಕಟ್ಟೆ ಅಕ್ಕಿ ಖರೀದಿಸಿರುವುದರಿಂದ ಮಾಸಿಕ ಆಹಾರ ಬೇಡಿಕೆ ಪಟ್ಟಿಯಲ್ಲಿ ಮೆನು ಚಾರ್ಟನ ಎಲ್ಲಾ ಪದಾರ್ಥಗಳನ್ನು ಸೇರಿಸಲು ಕಷ್ಟಕರವಾಗಿರುತ್ತದೆ.

ಮೇಲ್ಕಂಡ ಮನವಿಯಲ್ಲಿನ ಸಮಸ್ಯೆಗಳನ್ನು ಪರಿಶೀಲಿಸಿ, ಈ ಸಮಸ್ಯೆಗಳನ್ನು ಬಗೆಹರಿಸುವ ಉದ್ದೇಶದಿಂದ ಈ ಕೆಳಕಂಡ ಅಂಶಗಳನ್ನು ಅವಲೋಕಿಸಿ ಪರಿಷ್ಕರಿಸ ಬಹುದಾಗಿದೆ.

- ವಾರದಲ್ಲಿ ಎರಡು ಬಾರಿ ಮೊಟ್ಟೆಯ ಬದಲು ಒಂದು ಭಾರಿ ನೀಡುವುದು.
- ಮಾಸಿಕವಾಗಿ ನಾಲ್ಕು ಬಾರಿ ಕೋಳಿ ಮಾಂಸದ ಊಟದ ಬದಲು ಎರಡು ಭಾರಿ ನೀಡುವುದು.
- ಸಂಜೆಯ ಲಘು ಉಪಹಾರ ವಾರದಲ್ಲಿ ಏಳು ದಿನಗಳ ಬದಲಾಗಿ 4 ದಿನಗಳಲ್ಲಿ ನೀಡುವುದು.
- ವಸತಿ ಕಾಲೇಜುಗಳ ವಿದ್ಯಾರ್ಥಿಗಳಿಗೆ ಮಾಸಿಕವಾಗಿ ನೀಡಲಾಗುತ್ತಿರುವ ಆಹಾರ ವೆಚ್ಚದ ಮೊತ್ತ ರೂ.1200/- ಗಳಿಗೆ ಬದಲಾಗಿ ರೂ.1500/- ಗಳಿಗೆ ಹೆಚ್ಚಳ ಮಾಡುವುದು.

ಮೇಲ್ಕಂಡಂತೆ ಪರಿಷ್ಕರಿಸಬೇಕಾದ ಅಂಶಗಳ ಜೊತೆಗೆ, ಮೊರಾರ್ಜಿ ದೇಸಾಯಿ ವಸತಿ ಕಾಲೇಜುಗಳ ವಿದ್ಯಾರ್ಥಿಗಳಿಗೆ ಮಾಸಿಕವಾಗಿ ನೀಡಲಾಗುತ್ತಿರುವ ಆಹಾರ ವೆಚ್ಚದ ಮೊತ್ತ ರೂ.1200/-

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಗಳಿಗೆ ಬದಲಾಗಿ ರೂ.1500/- ಗಳಿಗೆ ಹೆಚ್ಚಳ ಮಾಡುವ ಬಗ್ಗೆ ವಿಷಯವನ್ನು ಸಂಘದ ಆಡಳಿತ ಮಂಡಳಿಯ ಅನುಮೋದನೆಗಾಗಿ ಮಂಡಿಸಿದೆ.

**ತೀರ್ಮಾನ:**

**ಆಡಳಿತ ಮಂಡಳಿಯು ವಿಷಯವನ್ನು ದೀರ್ಘವಾಗಿ ಚರ್ಚಿಸಿ, ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜುಗಳ ವಿದ್ಯಾರ್ಥಿಗಳಿಗೆ ಮಾಸಿಕವಾಗಿ ನೀಡಲಾಗುತ್ತಿರುವ ಮಾಸಿಕ ಆಹಾರ ವೆಚ್ಚದ ರೂ.1200/- ಗಳಿಂದ ರೂ.1500/- ಗಳಿಗೆ ಹೆಚ್ಚಳ ಮಾಡುವ ಬಗ್ಗೆ 2016-17ನೇ ಸಾಲಿನ ಆಯವ್ಯಯದಲ್ಲಿ ಪ್ರಸ್ತಾವನೆ ಮಂಡಿಸಲು ತೀರ್ಮಾನಿಸಲಾಯಿತು.**

**ವಿಷಯ ಸಂಖ್ಯೆ: 29**
**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿ ಇರುವ ವಸತಿ ಶಾಲೆ/ ಕಾಲೇಜುಗಳ ಶೈಕ್ಷಣಿಕ ತಪಾಸಣೆ ಮಾಡಲು ಪ್ರಾಂಶುಪಾಲರುಗಳ ತಂಡ ರಚಿಸುವ ಬಗ್ಗೆ.**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆ/ ಕಾಲೇಜುಗಳ ಶೈಕ್ಷಣಿಕ ತಪಾಸಣೆಯನ್ನು ನಡೆಸಲು ಇದುವರೆವಿಗೂ 30 ಜಿಲ್ಲೆಗಳಲ್ಲಿನ ವಸತಿ ಶಾಲೆಗಳಿಗೆ ಶಿಕ್ಷಣ ಇಲಾಖೆಯಲ್ಲಿ ಕಾರ್ಯನಿರ್ವಹಿಸಿ ನಿವೃತ್ತರಾದ ಅಧಿಕಾರಿಗಳನ್ನು ಶೈಕ್ಷಣಿಕ ಸುಗಮಕಾರರನ್ನಾಗಿ ನೇಮಿಸಿಕೊಂಡು ಇವರಿಂದ ನಡೆಸಲಾಗುತ್ತಿತ್ತು. ಈ ಸುಗಮಗಾರರಿಗೆ ಪ್ರತಿ ತಿಂಗಳಿಗೆ ಪ್ರತಿ ಸಂದರ್ಶನಕ್ಕೆ ರೂ.750/-ರಂತೆ ನಿಗಧಿ ಪಡಿಸಿ ಪಾತಿಸಲಾಗುತ್ತಿತ್ತು. ಪ್ರತಿ ಸುಗಮಗಾರರಿಗೆ 8 ವಸತಿ ಶಾಲೆಗಳಿಗೆ ತಿಂಗಳಿಗೆ 2 ಬಾರಿ ಸಂದರ್ಶನಕ್ಕೆ 12000 ರೂಗಳಂತೆ ಒಬ್ಬರಿಗೆ 10 ತಿಂಗಳಿಗೆ ರೂ.120000/- ವೆಚ್ಚ ಭರಿಸಬೇಕಾಗುತ್ತದೆ. ಇದರಿಂದ ಸಂಘಕ್ಕೆ ಆರ್ಥಿಕ ಹೊರೆಯಾಗುತ್ತಿದೆ.

ಜವಹಾರ್ ನವೋದಯ ಮಾದರಿ ವಸತಿ ಶಾಲೆಗಳಲ್ಲಿ ಶೈಕ್ಷಣಿಕ ಮೇಲುಸ್ತುವಾರಿ ಮತ್ತು ತಪಾಸಣೆಯನ್ನು ನವೋದಯ ಶಾಲೆಗಳಲ್ಲಿರುವ ಪ್ರಾಂಶುಪಾಲರುಗಳ ತಂಡದಿಂದಲೇ ಆಗಿಂದಾಗ್ಗೆ ನಡೆಸಲಾಗುತ್ತಿದೆ.

ಸಂಘದಿಂದ ವಸತಿ ಶಾಲೆಗಳಿಗೆ ಖಾಯಂ ಆಗಿ ಪ್ರಾಂಶುಪಾಲರು ಸೇರಿದಂತೆ ಬೋದಕ ಮತ್ತು ಬೋದಕೇತರ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲಾಗಿದೆ. 2015-16ನೇ ಸಾಲಿನಲ್ಲಿ ಶೈಕ್ಷಣಿಕ ಸುಗಮಕಾರರನ್ನು ನೇಮಿಸಿಕೊಳ್ಳುವ ಬದಲು ವಸತಿ ಶಾಲೆಗಳ ಪ್ರಾಂಶುಪಾಲರುಗಳಲ್ಲಿ ಶೈಕ್ಷಣಿಕವಾಗಿ ಅನುಭವವುಳ್ಳ ಪ್ರತಿಭಾವಂತ ಪ್ರಾಂಶುಪಾಲರುಗಳನ್ನು ಆಯ್ಕೆ ಮಾಡಿ, ಪ್ರಾಂಶುಪಾಲರುಗಳ

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ತಂಡವನ್ನು ರಚಿಸಿ, ಅವರುಗಳಿಂದ ವಿವಿಧ ವಸತಿ ಶಾಲೆ/ ಕಾಲೇಜುಗಳ ಶೈಕ್ಷಣಿಕ ತಪಾಸಣೆಯನ್ನು ನಡೆಸಿ, ವಸತಿ ಶಾಲೆ/ ಕಾಲೇಜುಗಳ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಯನ್ನು ಉತ್ತಮ ಪಡಿಸುವ ಬಗ್ಗೆ ಅವರಿಂದ ಸೂಕ್ತ ಸಲಹೆ-ಸೂಚನೆಗಳನ್ನು ಪಡೆದು ಶೈಕ್ಷಣಿಕ ಪ್ರಗತಿ ಸಾಧಿಸುವ ಬಗ್ಗೆ ಮುಂದಿನ ಅಗತ್ಯ ಕ್ರಮಕೈಗೊಳ್ಳುವುದು ಸೂಕ್ತವೆಂದು ಮನಗಂಡು ಪ್ರಾಂಶುಪಾಲರುಗಳ ತಪಾಸಣೆ ತಂಡವನ್ನು ರಚಿಸಿ ದಿಣಾಂಕ:08.12.2015 ರಂದು ಸಂಘದಿಂದ ಆದೇಶ ಹೊರಡಿಸಲಾಗಿದೆ.

ಮೇಲ್ಕಂಡಂತೆ ರಚಿಸಲಾಗಿರುವ ಶೈಕ್ಷಣಿಕ ತಪಾಸಣ ತಂಡವು ಮಾಡಬೇಕಾದ ಕರ್ತವ್ಯಗಳ ವಿವರ ಕೆಳಕಂಡಂತೆ ಇವೆ.

1. ನಿಯೋಜಿತ ಪ್ರಾಂಶುಪಾಲರ ತಂಡವು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆ/ ಕಾಲೇಜುಗಳಿಗೆ ತಿಂಗಳಿಗೆ ಕನಿಷ್ಟ 2 ಶಾಲೆಗಳಿಗೆ ಬೇಟಿ ನೀಡಿ ಕೇಂದ್ರ ಕಛೇರಿಯಿಂದ ಒದಗಿಸಿರುವ ನಮೂನೆಗಳನ್ವಯ ಪರಿಶೀಲನೆ ಮಾಡಿ ವರದಿ ಮಾಡತಕ್ಕದ್ದು.
2. ತಪಾಸಣೆ ಮಾಡಿದ ಶಾಲೆ/ಕಾಲೇಜಿನ ಬಗ್ಗೆ ವರದಿಯನ್ನ ಭೇಟಿ ಮಾಡಿದ ದಿನದಂದೇ ತಯಾರಿಸಿ ಕೇಂದ್ರ ಕಛೇರಿಗೆ ಸಲ್ಲಿಸುವುದು.
3. ವಸತಿ ಶಾಲೆಗಳಲ್ಲಿ ಶೈಕ್ಷಣಿಕ ಸುಧಾರಣೆಗಾಗಿ ಸೂಕ್ತ ಸಲಹೆ ಮತ್ತು ಸೂಚನೆಗಳನ್ನು ಕಾಲಕಾಲಕ್ಕೆ ತಿಳಿಸುವುದು.
4. ವಸತಿ ಶಾಲೆಗಳಲ್ಲಿ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಸುಧಾರಣೆಗಾಗಿ ಸೂಕ್ತ ಸಲಹೆ ಮತ್ತು ಸೂಚನೆಗಳನ್ನು ಕಾಲಕಾಲಕ್ಕೆ ತಿಳಿಸುವುದು.
5. ಪ್ರತಿ ತಿಂಗಳು ಭೇಟಿ ಮಾಡಬೇಕಾದ ಶಾಲೆ/ಕಾಲೇಜುಗಳ ಬಗ್ಗೆ ತಾತ್ಕಾಲಿಕ ಪ್ರವಾಸ ಪಟ್ಟಿಯನ್ನು ಸಿದ್ಧಪಡಿಸಿ ಮುಂಚಿತವಾಗಿಯೇ ಕೇಂದ್ರ ಕಛೇರಿಯಿಂದ ಅನುಮೋದನೆ ಪಡೆಯತಕ್ಕದ್ದು.
6. ಪ್ರಾಂಶುಪಾಲರ ಸಮಿತಿಯು ಸಲ್ಲಿಸುವ ವರದಿಗಳನ್ನು ಜಂಟಿ ನಿರ್ದೇಶಕರು (ಶಿಕ್ಷಣ) ರವರು ಪರಿಶೀಲಿಸಿ ತಿಂಗಳಿಗೆ ಒಂದು ಬಾರಿ ವಸತಿ ಶಾಲೆಗಳ ಪರಿವೀಕ್ಷಣೆ ನಡೆಸುವುದು.

ಸದರಿ ವಸತಿ ಶಾಲೆಗಳ ತಪಾಸಣೆ ಮಾಡಲು ರಚಿಸಲಾಗಿರುವ ಬಗ್ಗೆ ಆಡಳಿತ ಮಂಡಳಿಯ ಅವಗಾಹನೆಗೆ ಸಲ್ಲಿಸಿದೆ.

<u>ತೀರ್ಮಾನ:</u>

**ಆಡಳಿತ ಮಂಡಳಿಯು ವಸತಿ ಶಾಲೆಗಳ ಸಮರ್ಪಕ ನಿರ್ವಹಣೆಗೆ ಅನುಕೂಲವಾಗುವಂತೆ ತಪಾಸಣೆ ತಂಡ ರಚಿಸಿರುವ ಕ್ರಮವನ್ನು ಅನುಮೋದಿಸಿತು.**

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ವಿಷಯ ಸಂಖ್ಯೆ:30

ವಸತಿ ಶಾಲೆ/ಕಾಲೇಜುಗಳ ಬೋದಕ ಮತ್ತು ಬೋದಕೇತರ ಸಿಬ್ಬಂದಿಗಳಗೆ ಜಾಬ್ ಚಾರ್ಟ್ ನೀಡುವ ಬಗ್ಗೆ.

ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳ ಮತ್ತು ಕಾಲೇಜುಗಳಲ್ಲಿಕಾರ್ಯನಿರ್ವಹಿಸುತ್ತಿರುವ ಪ್ರಾಂಶುಪಾಲರುಗಳು, ಭಾಷಾ ಶಿಕ್ಷಕರು,ಕಂಪ್ಯೂಟರ್ ಶಿಕ್ಷಕರು, ದೈಹಿಕ ಶಿಕ್ಷಕರು, ಸಂಗೀತ ಶಿಕ್ಷಕರು, ಮತ್ತು ಬೋದಕೇತರ ಸಿಬ್ಬಂದಿಗಳಾದ ಪ್ರಥಮ ದರ್ಜೆ ಸಹಾಯಕರು, ನಿಲಯಪಾಲರು, ಸ್ಟಾಫ್ ನರ್ಸ್‌ಗಳು ನಿರ್ವಹಿಸಬೇಕಾದ ಕರ್ತವ್ಯಗಳು ಮತ್ತು ಜವಬ್ದಾರಿಗಳನ್ನು ನಿಗಧಿಪಡಿಸಿ ಸಂಘದಿಂದ ದಿನಾಂಕ:27.11.2015 ರಂದು ಅದೇಶ ಹೊರಡಿಸಲಾಗಿದೆ. ಆದೇಶದ ಪ್ರತಿಯನ್ನು ಪ್ರತ್ಯೇಕವಾಗಿ ನೀಡಲಾಗುವುದು.

ಸದರಿ ವಿಷಯವನ್ನು ಆಡಳಿತ ಮಂಡಳಿಯ ಮುಂದೆ ಅವಗಾಹನೆಗೆ ಮಂಡಿಸಿದೆ.

**ತೀರ್ಮಾನ:**

**ವಿಷಯವನ್ನು ಸಭೆಯು ಚರ್ಚಿಸಿತು. ವಸತಿ ಶಾಲೆಗಳ ಸಮರ್ಪಕ ನಿರ್ವಹಣೆಗೆ ಅನುಕೂಲವಾಗುವಂತೆ ಸಂಘವು ವಸತಿ ಶಾಲೆಗಳ ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ ಕಾರ್ಯಹಂಚಿಕೆ (JOB CHART) ನೀಡಿ ಆದೇಶಿಸಿರುವುದನ್ನು ಸಭೆಯು ಅನುಮೋದಿಸಿತು.**

ವಿಷಯ ಸಂಖ್ಯೆ: 31

ಟೆಂಡರ್ ಅನುಮೋದನಾ ಸಮಿತಿ ನಡವಳಿಗಳನ್ನು ಅವಗಾಹನೆಗೆ ಸಲ್ಲಿಸುವ ಬಗ್ಗೆ

ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಪದವಿ ಪೂರ್ವ ವಸತಿ ಕಾಲೇಜು ಹಾಗೂ ವಿದ್ಯಾರ್ಥಿನಿಲಯಗಳ ನಿರ್ಮಾಣ ಕಾಮಗಾರಿ ಹಾಗೂ ಹೆಚ್ಚುವರಿ ವಸತಿ ಗೃಹಗಳ ನಿರ್ಮಾಣಕ್ಕೆ ವಿವಿಧ ದಿನಾಂಕಗಳಂದು ಇ-ಪೋರ್ಟಲ್‌ನಡಿ ಟೆಂಡರ್ ಕರೆಯಲಾಗಿದ್ದು, ಈ ಕಾಮಗಾರಿಗಳಿಗೆ ಅರ್ಹ ಟೆಂಡರ್‌ದಾರರರು ಅನುಮೋದಿಸಿರುವ ದರಗಳನ್ನು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಸಂಘದ ಉಪಾಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ ಟೆಂಡರ್ ಅಂಗೀಕಾರ ಸಮಿತಿ ಸಭೆಯ ದಿನಾಂಕ:21-07-2015 ಮತ್ತು 04-09-2015 ರಂದು ಅನುಮೋದಿಸಲಾಗಿದೆ. ವಿವರಗಳನ್ನು ಈ ಕೆಳಕಂಡಂತೆ ನೀಡಲಾಗಿದೆ. ನಡವಳಿಯ ಪ್ರತಿಯನ್ನು ಪ್ರತ್ಯೇಕವಾಗಿ ನೀಡಲಾಗಿದೆ.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

| ಕ್ರ. ಸಂ | ಟೆಂಡರ್ ಕಾಮಗಾರಿ ವಿವರಗಳು | ಅನುಮೋದಿಸಿದ ಕಾಮಗಾರಿಗಳ ವಿವರಗಳು |
|---|---|---|
| 1 | ಮೊರಾರ್ಜಿ ದೇಸಾಯಿ ವಸತಿ ಶಾಲೆ/ಕಾಲೇಜು | 20 |
| 2 | ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ | 11 |
| 3 | ವಿದ್ಯಾರ್ಥಿನಿಲಯ ಕಟ್ಟಡಗಳ ಕಾಮಗಾರಿ | 02 |
| 4 | ಹೆಚ್ಚುವರಿ ವಸತಿ ಗೃಹ ನಿರ್ಮಾಣ | 05 |
| 5 | ವಸತಿ ಶಾಲೆಗಳಿಗೆ ದುರಸ್ತಿ ಕಾಮಗಾರಿಗಳು | 06 |
| | ಒಟ್ಟು | |

ಮೇಲೆ ಹೇಳಲಾದ ಟೆಂಡರ್ ಅನುಮೋದನಾ ಸಮಿತಿ ನಡವಳಿಗಳನ್ನು ಸಭೆಯ ಅವಗಾಹನೆಗೆ ಸಲ್ಲಿಸಿದೆ.

**ತೀರ್ಮಾನ:**

**ವಿಷಯವನ್ನು ಸಭೆಯು ಚರ್ಚಿಸಿತು. ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಪದವಿ ಪೂರ್ವ ವಸತಿ ಕಾಲೇಜು ಹಾಗೂ ವಿದ್ಯಾರ್ಥಿನಿಲಯಗಳ ನಿರ್ಮಾಣ ಕಾಮಗಾರಿ ಹಾಗೂ ಹೆಚ್ಚುವರಿ ವಸತಿ ಗೃಹಗಳ ನಿರ್ಮಾಣದ ಟೆಂಡರ್ ಅನುಮೋದನಾ ಸಮಿತಿ ನಡವಳಿಗಳನ್ನು ಸಭೆಯು ಅವಗಾಹಿಸಿತು.**

**ವಿಷಯ ಸಂಖ್ಯೆ: 32**

**ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳ ಕಾಮಗಾರಿಗಳ ಪ್ರಗತಿ ವಿವರಗಳನ್ನು ಸಲ್ಲಿಸುವ ಬಗ್ಗೆ.**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜುಗಳಿಗೆ ಸಂಕೀರ್ಣ ನಿರ್ಮಾಣ ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳ ಕಟ್ಟಡ ಕಾಮಗಾರಿಗಳನ್ನು ಕೈಗೆತ್ತಿಕೊಂಡು, ಸದರಿ ಕಾಮಗಾರಿಗಳ ಪ್ರಗತಿಯ ಘೋಷ್ವಾರೆಗಳನ್ನು ಕ್ರಮವಾಗಿ ಅನುಬಂಧಗಳಲ್ಲಿ ನೀಡಲಾಗಿದೆ. ವಿಷಯವನ್ನು ಸಭೆಯ ಅವಗಾಹನೆಗೆ ಮಂಡಿಸಿದೆ.

ಸದಸ್ಯ ಕಾರ್ಯದರ್ಶಿ                                        ಅಧ್ಯಕ್ಷರು

ತೀರ್ಮಾನ:

**ವಿಷಯವನ್ನು ಸಭೆಯು ಚರ್ಚಿಸಿತು. ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಪದವಿ ಪೂರ್ವ ವಸತಿ ಕಾಲೇಜು ಹಾಗೂ ವಿದ್ಯಾರ್ಥಿನಿಲಯಗಳ ನಿರ್ಮಾಣ ಕಾಮಗಾರಿಗಳ ಪ್ರಗತಿಗಳನ್ನು ಅವಲೋಕಿಸಿತು. ಅಲ್ಲದೇ ನಿವೇಶನ ಲಭ್ಯವಿಲ್ಲದ ವಸತಿ ಶಾಲೆಗಳಿಗೆ ನಿವೇಶನ ಪಡೆಯಲು ಅಗತ್ಯ ಕ್ರಮಕೈಗೊಳ್ಳಲು ಸಭೆಯು ಸೂಚಿಸಿತು.**

**ವಿಷಯ ಸಂಖ್ಯೆ: ೩೩**

**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಜಿಲ್ಲಾ ಮಟ್ಟದಲ್ಲಿ ಟೆಂಡರ್ ಕರೆಯುವ ಪ್ರಾಧಿಕಾರದ ಅಧಿಕಾರಿಯಾಗಿ ನೇಮಿಸುವ ಬಗ್ಗೆ.**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜುಗಳಿಗೆ ಸಂಕೀರ್ಣ ನಿರ್ಮಾಣ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಈವರೆವಿಗೂ ಟೆಂಡರ್‌ಗಳನ್ನು ಕೇಂದ್ರ ಕಛೇರಿಯಿಂದ ನಿರ್ವಹಿಸಲಾಗುತ್ತಿತ್ತು. ಆದರೆ, ಈ ಪ್ರಕ್ರಿಯೆಯಿಂದ ಟೆಂಡರ್‌ಗೆ ನಿಗಧಿತ ಕಾಲಾವಧಿಯಾದ ೯೦ ದಿನಗಳೊಳಗಾಗಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಸಾಧ್ಯವಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಸಂಘದ ಉಪಾಧ್ಯಕ್ಷರು, ಲೋಕೋಪಯಯೋಗಿ ಇಲಾಖೆಯ ಅಭಿಪ್ರಾಯದೊಂದಿಗೆ ಟೆಂಡರ್ ಕರೆಯುವ ಪ್ರಾಧಿಕಾರದ ಕುರಿತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಅಧಿನಿಯಮ ಸೆಕ್ಷನ್ ೯(1) ರಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರುಗಳನ್ನು ಟೆಂಡರ್ ಆಹ್ವಾನಿಸುವ ಪ್ರಾಧಿಕಾರದ ಅಧಿಕಾರಿಯಾಗಿ ನೇಮಿಸಲಾಗಿದೆ.

ಈ ಹಿನ್ನೆಲೆಯಲ್ಲಿ ದಿನಾಂಕ:: 08-01-2016 ರಂದು ಸಂಘವು ಸಹಾಯಕ ಕಾರ್ಯಪಾಲಕ ಅಭಿಯಂತರರುಗಳು, ಜಿಲ್ಲಾ ಮಟ್ಟದಲ್ಲಿ ಟೆಂಡರ್ ಕರೆಯುವ ಪ್ರಾಧಿಕಾರದ ಅಧಿಕಾರಿಗಳಾಗಿ ನೇಮಕ ಮಾಡಿದೆ.

ಮೇಲ್ಕಂಡ ಅಂಶಗಳನ್ನು ಸಭೆಯ ಅವಗಾಹನೆಗೆ ಮಂಡಿಸುತ್ತಾ, ಈ ಬಗ್ಗೆ ಸಂಘವು ಕೈಗೊಂಡ ಕ್ರಮವನ್ನು ಅನುಮೋದಿಸಲು ಕೋರಿದೆ.

**ತೀರ್ಮಾನ:**

**ಆಡಳಿತ ಮಂಡಳಿಯು, ಸಂಘವು ಕೈಗೊಂಡ ಕ್ರಮವನ್ನು ಅನುಮೋದಿಸಿತು.**

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

<u>ವಿಷಯ ಸಂಖ್ಯೆ: 34</u>

**<u>ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕಾಮಗಾರಿಗಳನ್ನು ವರ್ಕ್ ಸಾಫ್ಟ್ ಮಾನಿಟರಿಂಗ್ ಸಿಸ್ಟಮ್‌ನಲ್ಲಿ ಅಳವಡಿಸುವ ಬಗ್ಗೆ.</u>**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜುಗಳಿಗೆ ಸಂಕೀರ್ಣ ನಿರ್ಮಾಣ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಕಾಮಗಾರಿಗಳ ಬಿಲ್ಲುಗಳನ್ನು ಪಾವತಿಸುವ ಸಂಬಂಧ ಕಡತ ಮತ್ತು ಚೆಕ್ಕುಗಳನ್ನು ಪ್ರತ್ಯೇಕವಾಗಿ ಮಾನ್ಯ ಸಂಘದ ಉಪಾಧ್ಯಕ್ಷರಿಗೆ ಸಲ್ಲಿಸಲಾಗುತ್ತಿತ್ತು. ಸಂಘದಲ್ಲಿ ಕಾಮಗಾರಿಗಳ ವಿವರಗಳ ಬಗ್ಗೆ ಪಾರದರ್ಶಕತೆ ಕಾಯ್ದುಕೊಳ್ಳುವ ಉದ್ದೇಶದಿಂದ ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಸಂಘದ ಉಪಾಧ್ಯಕ್ಷರು, ಕಾಮಗಾರಿಗಳ ವಿವರಗಳನ್ನು **ವರ್ಕ್ ಸಾಫ್ಟ್ ಮಾನಿಟರಿಂಗ್ ಸಿಸ್ಟಮ್‌ನಲ್ಲಿ** ಅಳವಡಿಸಿಕೊಂಡು ಬಿಲ್ಲುಗಳ ಪಾವತಿಯನ್ನು ಆನ್‌ಲೈನ್ ಮೂಲಕ ನಿರ್ವಹಿಸಲು ಸೂಚನೆ ನೀಡಿರುತ್ತಾರೆ. ಅದರಂತೆ, ಸಂಘವು ಕ್ರಮಕೈಗೊಂಡಿದ್ದು, ಕಾಮಗಾರಿಗಳ ವಿವರಗಳನ್ನು **ವರ್ಕ್ ಸಾಫ್ಟ್ ಮಾನಿಟರಿಂಗ್ ಸಿಸ್ಟಮ್‌ನಲ್ಲಿ** ಅಳವಡಿಸುವ ಪ್ರಕ್ರಿಯೆಯು ಪ್ರಗತಿಯಲ್ಲಿದೆ.

ಈ ಬಗ್ಗೆ ಸಂಘವು ಕೈಗೊಂಡಿರುವ ಕ್ರಮವನ್ನು ಅವಗಾಹನೆಗೆ ಮತ್ತು ಅನುಮೋದನೆಗೆ ಮಂಡಿಸಿದೆ.

<u>ತೀರ್ಮಾನ:</u>

**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ನಿರ್ವಹಿಸುತ್ತಿರುವ ಕಾಮಗಾರಿಗಳ ವಿವರಗಳನ್ನು ವರ್ಕ್ ಸಾಫ್ಟ್ ಮಾನಿಟರಿಂಗ್ ಸಿಸ್ಟಮ್‌ನಲ್ಲಿ ಅಳವಡಿಸುವ ಕುರಿತು ಸಂಘವು ತೆಗೆದುಕೊಂಡಿರುವ ಕ್ರಮವನ್ನು ಅನುಮೋದಿಸಿತು.**

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

<u>ವಿಷಯ ಸಂಖ್ಯೆ: 35</u>

<u>ಸ್ವಂತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆ/ಕಾಲೇಜುಗಳಿಗೆ ಮೂಲಭೂತ ಸೌಕರ್ಯಗಳನ್ನು ಸಮಗ್ರವಾಗಿ ಕಲ್ಪಿಸುವ ಬಗ್ಗೆ.</u>

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ 328 ಸ್ವಂತ ಕಟ್ಟಡಳು, 138 ಬಾಡಿಗೆ ಕಟ್ಟಡಗಳು ಹಾಗೂ 42 ಬಾಡಿಗೆ ರಹಿತ ಕಟ್ಟಡಗಳಲ್ಲಿ ವಸತಿ ಶಾಲೆ/ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಈ ವಸತಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಕುಡಿಯುವ ನೀರಿನ ವ್ಯವಸ್ಥೆ, ನೈರ್ಮಲೀಕರಣ, ವಿದ್ಯುತ್ ವ್ಯವಸ್ಥೆ, ಸೋಲಾರ್ ವಾಟರ್ ಹೀಟರ್ ಮತ್ತು ಬೀದಿ ದೀಪಗಳ ವ್ಯವಸ್ಥೆ, ರಸ್ತೆ, ಚರಂಡಿ, ಆವರಣ ಗೋಡೆ ನಿರ್ಮಾಣ, ಹಾಲಿ ಇರುವ ಕಟ್ಟಡಗಳ ದುರಸ್ತಿ ಮತ್ತು ಹೆಚ್ಚುವರಿ ಸಿಬ್ಬಂದಿ ವಸತಿ ಗೃಹ ನಿರ್ಮಾಣ ಇತ್ಯಾದಿಗಳನ್ನೊಳಗೊಂಡ ಕಾಮಗಾರಿಗಳನ್ನು ಸಮಗ್ರವಾಗಿ ಕಲ್ಪಿಸುವ ಸಂಬಂಧ ಒಟ್ಟಾರೆ ರೂ.740.43 ಕೋಟಿಗಳ ಅಂದಾಜು ಮಾಡಲಾಗಿದೆ. ವಿವರಗಳನ್ನು ಪ್ರತ್ಯೇಕವಾಗಿ ನೀಡಲಾಗಿದೆ.

ವಿಷಯವನ್ನು ಸಭೆಯ ಅವಗಾಹನೆಗೆ ಮಂಡಿಸಿದೆ.

**ತೀರ್ಮಾನ:**

**ಆಡಳಿತ ಮಂಡಳಿಯು ಸ್ವಂತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆ/ಕಾಲೇಜುಗಳಿಗೆ ಮೂಲಭೂತ ಸೌಕರ್ಯಗಳನ್ನು ಸಮಗ್ರವಾಗಿ ಕಲ್ಪಿಸುವ ಸಂಬಂಧ ವರ್ಗವಾರು ಅನುದಾನದ ಲಭ್ಯತೆಯನ್ನಾಧರಿಸಿ, ಈ ಬಗ್ಗೆ ಕ್ರಮಕೈಗೊಳ್ಳಬೇಕೆಂದು ಸೂಚನೆ ನೀಡಿತು.**

<u>ಹೆಚ್ಚುವರಿ ವಿಷಯ ಸಂಖ್ಯೆ: 1</u>

<u>ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಆಡಳಿತ ಮಂಡಳಿಗೆ ವಸತಿ ಶಾಲೆಯ ಒಬ್ಬ ಪ್ರಾಂಶುಪಾಲರನ್ನು ಸದಸ್ಯರನ್ನಾಗಿ ನೇಮಕ ಮಾಡಿಕೊಳ್ಳುವ ಬಗ್ಗೆ.</u>

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವನ್ನು ಸರ್ಕಾರದ ಆದೇಶ ಸಂಖ್ಯೆ: ಸಕಇ 532 ಎಸ್ಇಡಬ್ಲ್ಯೂ 1999, ಬೆಂಗಳೂರು ದಿನಾಂಕ:06-10-1999 ರಲ್ಲಿ ಮಂಜೂರು ಮಾಡಿ ಆದೇಶಿಸಿದೆ. ಸಂಘವು ದಿನಾಂಕ:22-11-1999 ರಂದು ನೋಂದಣಿ ಸಂಖ್ಯೆ:922/99-2000 ರಲ್ಲಿ ಸಂಘಗಳ

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ನೊಂದಣಿ ಕಾಯ್ದೆ 1960ರ ಅನ್ವಯ ನೊಂದಾಯಿತ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದ್ದು, ತನ್ನದೇ ಆದ ಬೈಲಾವನ್ನು ಹೊಂದಿರುತ್ತದೆ. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಬೈಲಾದ ನಿಯಮ(3) ರಲ್ಲಿ ಆಡಳಿತ ಮಂಡಳಿಯ 17 ಜನ ಸದಸ್ಯರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ಅವಕಾಶ ಕಲ್ಪಿಸಲಾಗಿದೆ. ಈ 17 ಸದಸ್ಯರುಗಳ ಪೈಕಿ ಒಬ್ಬ ವಸತಿ ಶಾಲೆಯ ಪ್ರಾಂಶುಪಾಲರನ್ನು ಸಂಘದ ಅಧ್ಯಕ್ಷರು ನಾಮನಿರ್ದೇಶನ ಮಾಡುವವರನ್ನು ಇತರೆ ಸದಸ್ಯರನ್ನಾಗಿ (other members) ನೇಮಕ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ 505 ವಸತಿ ಶಾಲೆ/ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ (ವಸತಿ ಶಾಲೆಗಳು-479, ವಸತಿ ಕಾಲೇಜುಗಳು-26). ಮೇಲೆ ಹೇಳಲಾದ ವಸತಿ ಶಾಲೆಗಳಲ್ಲಿ 279 ಖಾಯಂ ಪ್ರಾಂಶುಪಾಲರು ಕಾರ್ಯನಿರ್ವಹಿಸುತ್ತಿದ್ದಾರೆ. ವಸತಿ ಕಾಲೇಜುಗಳ ಪ್ರಾಂಶುಪಾಲರುಗಳ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಖಾಯಂ ಆಗಿ ಭರ್ತಿ ಮಾಡಿಕೊಳ್ಳಲು ಕ್ರಮವಹಿಸಲಾಗುವುದು.

ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಖಾಯಂ ಪ್ರಾಂಶುಪಾಲರುಗಳ ಪೈಕಿ 56 ಪ್ರಾಂಶುಪಾಲರು ವಿಲೀನಗೊಂಡವರಾಗಿದ್ದು 123 ಪ್ರಾಂಶುಪಾಲರು 2011-12ನೇ ಸಾಲಿನಿಂದ ನೇರನೇಮಕಾತಿಯಿಂದ ನೇಮಕವಾಗಿರುವ ಪ್ರಾಂಶುಪಾಲರಾಗಿರುತ್ತಾರೆ. ವಿಲೀನಗೊಂಡ ಪ್ರಾಂಶುಪಾಲರು ವಸತಿ ಶಾಲೆಗಳಲ್ಲಿ 2001-02ನೇ ಸಾಲಿನಿಂದ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸಿ, ದಿನಾಂಕ:01-10-2011 ರಿಂದ ಜಾರಿಗೆ ಬರುವಂತೆ ಖಾಯಂಗೊಂಡವರಾಗಿರುತ್ತಾರೆ. ಈ ಪ್ರಾಂಶುಪಾಲರುಗಳು, ವಸತಿ ಶಾಲೆಯ ನಿರ್ವಹಣೆ ಬಗ್ಗೆ ಹೆಚ್ಚಿನ ಅನುಭವ ಹೊಂದಿದ್ದು, ಸೇವಾಹಿರಿತನ ಹೊಂದಿದರವರಾಗಿರುತ್ತಾರೆ. ವಸತಿ ಶಾಲೆಗಳ ನಿರ್ವಹಣೆಗಳಲ್ಲಿ ಉದ್ಭವಿಸುವ ಸಮಸ್ಯೆಗಳ ಹಾಗೂ ಅದರ ಪರಿಹಾರಕ್ಕೆ ಮತ್ತು ವಿದ್ಯಾರ್ಥಿಗಳ ಶೈಕ್ಷಣಿಕ ಮತ್ತು ಇತರೆ ಶೈಕ್ಷಣೇತರ ಉತ್ತಮ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಬಗ್ಗೆ ಆಡಳಿತ ಮಂಡಳಿಯಲ್ಲಿ ಸಲಹೆಯನ್ನು ನೀಡಬಹುದಾಗಿದ್ದು, ಸೇವಾಹಿರಿತನ ಹೊಂದಿದ್ದ ಸಾಮಾಜಿಕ ನ್ಯಾಯದ ಅನ್ವಯ ಪಾಳಿ ಪದ್ಧತಿ (Rotation system) ಮೇಲೆ ಒಂದು ವರ್ಷದ ಅವಧಿಗೆ ಅಧ್ಯಕ್ಷರು ನಾಮನಿರ್ದೇಶನ ಮಾಡುವ ಪ್ರಾಂಶುಪಾಲರನ್ನು ಆಡಳಿತ ಮಂಡಳಿ ಸಭೆಯ ಸದಸ್ಯರನ್ನಾಗಿ ನೇಮಕ ಮಾಡಿಕೊಳ್ಳುವ ಬಗ್ಗೆ ವಿಷಯವನ್ನು ಮಂಡಿಸಿ ತೀರ್ಮಾನ ಕೋರಿದೆ.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ತೀರ್ಮಾನ:

**ಆಡಳಿತ ಮಂಡಳಿಯು ವಿಷಯವನ್ನು ದೀರ್ಘವಾಗಿ ಚರ್ಚಿಸಿ, ಆಡಳಿತ ಮಂಡಳಿಯ ಇತರ ಸದಸ್ಯರಾಗಿ ನಾಮನಿರ್ದೇಶನ ಹೊಂದುವ ಪ್ರಾಂಶುಪಾಲರು ಸೇವಾ ಹಿರಿತನ ಹೊಂದಿದ, ಹೆಚ್ಚಿನ ವಿದ್ಯಾರ್ಹತೆ ಹೊಂದಿರುವ, ವಸತಿ ಶಾಲೆಯಲ್ಲಿ ಸತತವಾಗಿ ಉತ್ತಮ ಫಲಿತಾಂಶ ನೀಡುತ್ತಿರುವ, ಹಾಗೂ ಕಳಂಕಿತನಾಗಿರದ ಒಬ್ಬ ಪ್ರಾಂಶುಪಾಲರನ್ನು ಸಾಮಾಜಿಕ ನ್ಯಾಯವನ್ನಾಧರಿಸಿ, ಸರದಿ ಪದ್ಧತಿ (Rotation system) ಮೇಲೆ ಒಂದು ವರ್ಷದ ಅವಧಿಗೆ ಅಧ್ಯಕ್ಷರು ನಾಮನಿರ್ದೇಶನ ಮಾಡುವ ಒಬ್ಬ ವಸತಿ ಶಾಲೆಯ ಪ್ರಾಂಶುಪಾಲರನ್ನು ಸಂಘದ ನಿಯಮ ಮತ್ತು ನಿಬಂಧನೆಗಳನ್ವಯ ನೇಮಕ ಮಾಡಿಕೊಳ್ಳಲು ಅನುಮೋದಿಸಲಾಯಿತು.**

ಹೆಚ್ಚುವರಿ ವಿಷಯ ಸಂಖ್ಯೆ: 2

**ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜುಗಳಿಗೆ ಸ್ಟಾಫ್ ನರ್ಸ್ ಮತ್ತು ವಾಚ್‌ಮನ್ ಹುದ್ದೆಗಳನ್ನು ಮಂಜೂರು ಮಾಡುವ ಬಗ್ಗೆ.**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ 26 ಪದವಿ ಪೂರ್ವ ವಿಜ್ಞಾನ ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರತಿ ವಸತಿ ಕಾಲೇಜಿಗೆ ಒಟ್ಟು 18 ಹುದ್ದೆಗಳನ್ನು ಮಂಜೂರು ಮಾಡಲಾಗಿದೆ. ವಿವರಗಳು ಈ ಕೆಳಕಂಡಂತೆ ಇವೆ.

(ಪ್ರಾಂಶುಪಾಲರು–1, ಭಾಷಾ ಉಪನ್ಯಾಸಕರು–2, ಐಚ್ಛಿಕ ಉಪನ್ಯಾಸಕರು–5, ವಾರ್ಡನ್–1, ದ್ವಿದಸ–1 ಅಡುಗೆಯವರು–4, ಅಡುಗೆ ಸಹಾಯಕರು–2 )

ಪ್ರತಿ ವಸತಿ ಕಾಲೇಜಿನ ಸಂಖ್ಯಾಬಲ –160 ಆಗಿದ್ದು, 80 ಬಾಲಕರು ಮತ್ತು 80 ಬಾಲಕಿಯರು ಆಗಿರುತ್ತಾರೆ. ವಸತಿ ಕಾಲೇಜುಗಳ ವಿದ್ಯಾರ್ಥಿ/ವಿದ್ಯಾರ್ಥಿನಿಯರ ದೈನಂದಿನ ಆರೋಗ್ಯ ಸಮಸ್ಯೆಗಳ ಬಗ್ಗೆ ನಿಗಾವಹಿಸಲು ಹಾಗೂ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಬದ್ಧತೆಗಾಗಿ ವಸತಿ ಕಾಲೇಜುಗಳ ಆಸ್ತಿಗಳನ್ನು ಕಾಪಾಡಿಕೊಳ್ಳಲು ವಿದ್ಯಾರ್ಥಿಗಳ ಸುರಕ್ಷತೆಗಾಗಿ ಶುಶ್ರೂಷಕರು ಮತ್ತು ಕಾವಲುಗಾರರ ಹುದ್ದೆಗಳ ಅವಶ್ಯಕತೆ ಇದೆ.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ವಿಷಯವನ್ನು ಆಡಳಿತ ಮಂಡಳಿ ಮುಂದೆ ಮಂಡಿಸಿ, ವಿಷಯವನ್ನು ಆಡಳಿತ ಮಂಡಳಿ ಸಭೆಯ ಮುಂದೆ ಮಂಡಿಸಿ, ವಿದ್ಯಾರ್ಥಿಗಳ ಆರೋಗ್ಯ ಹಿತದೃಷ್ಟಿಯಿಂದ ಒಂದು ಮಹಿಳಾ ಶುಶ್ರೂಷಕರ ಹುದ್ದೆಯನ್ನು ಹಾಗೂ 2 ಕಾವಲುಗಾರರ ಹುದ್ದೆಗಳನ್ನು ಮಂಜೂರು ಮಾಡುವಂತೆ, ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ತೀರ್ಮಾನ ಕೋರಿದೆ.

**ತೀರ್ಮಾನ:**

**ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜುಗಳಿಗೆ ಅಗತ್ಯವಾಗಿ ಬೇಕಾದ ವಾಚ್‌ಮನ್ ಮತ್ತು ಸ್ಟಾಫ್‌ನರ್ಸ್‌ಗಳ ಹುದ್ದೆಗಳು ಮಂಜೂರಾಗದೇ ಇರುವುದನ್ನು ಸಭೆಯು ಗಮನಿಸಿತು. ಈ ಹುದ್ದೆಗಳನ್ನು ಮಂಜೂರು ಮಾಡುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಆದೇಶ ಪಡೆಯಲು ತೀರ್ಮಾನಿಸಿತು.**

**ಹೆಚ್ಚುವರಿ ವಿಷಯ ಸಂಖ್ಯೆ: 3**
**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳ ಸುಗಮ ನಿರ್ವಹಣೆಗಾಗಿ ಕೋರ್ ಸಮಿತಿ ರಚಿಸಿರುವ ಬಗ್ಗೆ.**

******

ರಾಜ್ಯದ ಗ್ರಾಮೀಣ ಪ್ರದೇಶದ ಪ್ರತಿಭಾವಂತ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ, ಊಟ ಮತ್ತು ವಸತಿಯನ್ನು ಒದಗಿಸುವ ಉದ್ದೇಶದಿಂದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿ 505 ವಸತಿ ಶಾಲೆ ಮತ್ತು ವಿಜ್ಞಾನ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಈ ವಸತಿ ಶಾಲೆ ಮತ್ತು ಕಾಲೇಜುಗಳ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಸುಧಾರಣೆಗಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅನುಷ್ಠಾನಗೊಳಿಸಲಾಗುತ್ತಿದೆ.

ಆದುದರಿಂದ ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಏಕಲವ್ಯ ಮಾದರಿ/ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳು ಮತ್ತು ಪದವಿ ಪೂರ್ವ ವಿಜ್ಞಾನ ಕಾಲೇಜುಗಳ ಶೈಕ್ಷಣಿಕ ಕಾರ್ಯಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಬಗ್ಗೆ ರೂಪುರೇಷೆಗಳನ್ನು ಸಿದ್ಧಪಡಿಸಿ, ಅದನ್ನು ಜಾರಿಗೆ ತರಲು ಒಂದು ಸಮಿತಿ ರಚಿಸಿ, ಸದರಿ ಸಮಿತಿಯಲ್ಲಿ ವಿಷಯಗಳನ್ನು ಚರ್ಚಿಸಿ ತೀರ್ಮಾನವನ್ನು ತೆಗೆದುಕೊಂಡು, ಅದನ್ನು ಕಾರ್ಯರೂಪಕ್ಕೆ ತಂದಲ್ಲಿ ಸಂಘದ ಎಲ್ಲಾ ಧ್ಯೇಯೋದ್ಧೇಶಗಳನ್ನು ಸಾಕಾರಗೊಳಿಸಬಹುದಾಗಿರುತ್ತದೆ ಆದ್ದರಿಂದ ಪ್ರಾಂಶುಪಾಲರು ಮತ್ತು ಬೋಧಕ/ಬೋಧಕೇತರ ಸಿಬ್ಬಂದಿಗಳನ್ನು ಒಳಗೊಂಡ ಒಂದು ಕೋರ್ ಸಮಿತಿಯನ್ನು ಸರ್ಕಾರದ ಅನುಮೋದನೆಯಂತೆ ದಿನಾಂಕ: 12.01.2016 ರಂದು ರಚಿಸಿ ಆದೇಶಿಸಿದೆ.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಈ ವಿಷಯವನ್ನು ಆಡಳಿತ ಮಂಡಳಿಯ ಮುಂದೆ ಮಂಡಿಸಿ, ಸಂಘದ ಕ್ರಮವನ್ನು ಅನುಮೋದಿಸಲು ಕೋರಿದೆ.

ತೀರ್ಮಾನ:

**ಆಡಳಿತ ಮಂಡಳಿಯು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳ ಸುಗಮ ನಿರ್ವಹಣೆಗಾಗಿ ಕೋರ್ ಸಮಿತಿ ರಚಿಸಿರುವುದನ್ನು ಅವಗಾಹಿಸಿ ಅನುಮೋದಿಸಿತು.**

**ಹೆಚ್ಚುವರಿ ವಿಷಯ ಸಂಖ್ಯೆ: 4**

**ಸಂಘದ ಕಾರ್ಯನಿರ್ವಾಹಕ ನಿರ್ದೇಶಕರು ನಾಮ ನಿರ್ದೇಶನ ಮಾಡುವ ಜಿಲ್ಲೆಯ ಒಬ್ಬ ಪ್ರಾಂಶುಪಾಲರನ್ನು ಸಮಿತಿಯ ಜಂಟಿ ಕಾರ್ಯದರ್ಶಿಯನ್ನಾಗಿ (District co-ordinating officer-D.C.O) ನೇಮಿಸುವ ಬಗ್ಗೆ.**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ/ ಕಿತ್ತೂರು ರಾಣಿ ಚೆನ್ನಮ್ಮ/ಏಕಲವ್ಯ ಮಾದರಿ/ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳಲ್ಲಿ ಶೈಕ್ಷಣಿಕ ಶ್ರೇಷ್ಠತೆ ತರಲು ವಸತಿ ಶಾಲೆಗಳ ಉಸ್ತುವಾರಿಗಾಗಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ:ಸಕಇ 85 ಮೊದೇಶಾ 2009, ಬೆಂಗಳೂರು ದಿ:21.10.2009ರಲ್ಲಿ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯಲ್ಲಿ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳನ್ನು ಸದಸ್ಯ ಕಾರ್ಯದರ್ಶಿಗಳನ್ನಾಗಿ ಮಾಡಲಾಗಿದೆ. ಆದರೆ ಸದರಿ ಸಮಿತಿಯಲ್ಲಿ ವಸತಿ ಶಾಲೆಗಳ ಪ್ರಾಂಶುಪಾಲರುಗಳು ಸದಸ್ಯರಾಗಿರುವುದಿಲ್ಲ. ಆದ್ದರಿಂದ ಜಿಲ್ಲೆಯಲ್ಲಿ ಒಬ್ಬ ಪ್ರಾಂಶುಪಾಲರುನ್ನು ಶಾಲಾ ಉಸ್ತುವಾರಿ ಸಮಿತಿಯಲ್ಲಿ ಜಂಟಿ ಕಾರ್ಯದರ್ಶಿಯನ್ನಾಗಿ ನೇಮಿಸುವಂತೆ ಕೋರಲಾಗಿತ್ತು. ಅದರಂತೆ ಸಂಘದ ಕಾರ್ಯನಿರ್ವಾಹಕ ನಿರ್ದೇಶಕರು ನಾಮ ನಿರ್ದೇಶನ ಮಾಡುವ ಜಿಲ್ಲೆಯ ಒಬ್ಬ ಪ್ರಾಂಶುಪಾಲರನ್ನು ಸಮಿತಿಯ ಜಂಟಿ ಕಾರ್ಯದರ್ಶಿಯನ್ನಾಗಿ ನೇಮಿಸಿ ಸರ್ಕಾರದ ಆದೇಶ ಹೊರಡಿಸಿದ್ದು, ಈ ಬಗ್ಗೆ ಸಂಘವು ಕ್ರಮಕೈಗೊಂಡಿದೆ. ವಿಷಯವನ್ನು ಸಭೆಯ ಅವಗಾಹನೆಗೆ ಮಂಡಿಸಿದೆ.

ತೀರ್ಮಾನ:

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

1. ಆಡಳಿತ ಮಂಡಳಿಯು ಸಂಘದ ಕಾರ್ಯನಿರ್ವಾಹಕ ನಿರ್ದೇಶಕರು ನಾಮ ನಿರ್ದೇಶನ ಮಾಡುವ ಜಿಲ್ಲೆಯ ಒಬ್ಬ ಪ್ರಾಂಶುಪಾಲರನ್ನು ಸಮಿತಿಯ ಜಂಟಿ ಕಾರ್ಯದರ್ಶಿಯನ್ನಾಗಿ **(District co-ordinating officer-D.C.O)** ನೇಮಕ ಮಾಡಿರುವುದನ್ನು ಸಭೆಯು ಅವಗಾಹಿಸಿ ಅನುಮೋದಿಸಿತು. ಈ ಮಾಹಿತಿಯನ್ನು ಸರ್ಕಾರದ ಸುತ್ತೋಲೆಯ ಮುಖಾಂತರ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಗಮನಕ್ಕೆ ತರಲು ಕ್ರಮವಹಿಸಲು ತೀರ್ಮಾನಿಸಲಾಯಿತು.
2. ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ನಡೆಯುವ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ಪರಿಶೀಲನಾ ಸಭೆಗಳಿಗೆ ಜಿಲ್ಲೆಯ ವಸತಿ ಶಾಲೆಗಳಿಗೆ ಸಂಬಂಧಿಸಿದ ಸಮಗ್ರ ಮಾಹಿತಿಯೊಂದಿಗೆ ತಪ್ಪದೇ ಹಾಜರಾಗುವಂತೆ ಸುತ್ತೋಲೆ ಹೊರಡಿಸಲು ತೀರ್ಮಾನಿಸಲಾಯಿತು.

<u>ಹೆಚ್ಚುವರಿ ವಿಷಯ ಸಂಖ್ಯೆ: 5</u>

**<u>ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವೃಂದ ಮತ್ತು ನೇಮಕಾತಿ ನಿಯಮಗಳು -2011 ಕ್ಕೆ ತಿದ್ದುಪಡಿ ತರುವ ಬಗ್ಗೆ:</u>**

ಸರ್ಕಾರವು ತನ್ನ ಅಧಿಸೂಚನೆ ಎಸ್‌ಡಬ್ಲ್ಯೂಡಿ 70 ಎಂಡಿಎಸ್ (ಪಿ) ದಿನಾಂಕ:04-01-2012ರಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವೃಂದ ಮತ್ತು ನೇಮಕಾತಿ ನಿಯಮಗಳು-2011 ತಿದ್ದುಪಡಿ ಅಧಿಸೂಚನೆ ಹೊರಡಿಸಿ, ಪದವಿ ಪೂರ್ವ ವಸತಿ ಕಾಲೇಜುಗಳ ಪ್ರಾಂಶುಪಾಲರುಗಳು ಮತ್ತು ಉಪನ್ಯಾಸಕರುಗಳ ವೃಂದದ ಹುದ್ದೆಗಳನ್ನು ಸೇರ್ಪಡೆ ಮಾಡಿ ನೇಮಕಾತಿ ವಿನಿಯಮಗಳನ್ನು ರೂಪಿಸಿದೆ. ಸರ್ಕಾರದ ತಿದ್ದುಪಡಿ ಅಧಿಸೂಚನೆಯನ್ನು ಸಂಘದ ನಿಯಮ ಮತ್ತು ನಿಬಂಧನೆಗಳಲ್ಲಿ ಅಳವಡಿಸಿಕೊಳ್ಳಲಾಗಿದೆ. ಈ ವೃಂದ ಮತ್ತು ನೇಮಕಾತಿ ವಿನಿಯಮಗಳಲ್ಲಿ ಪದವಿ ಪೂರ್ವ ವಸತಿ ಕಾಲೇಜುಗಳಿಗೆ 29 ಪ್ರಾಂಶುಪಾಲರುಗಳ ಹುದ್ದೆಗಳನ್ನು ಸೇರ್ಪಡೆ ಮಾಡಲಾಗಿದ್ದು, ಈ ಹುದ್ದೆಗಳು ಪರಿಶಿಷ್ಟ ಜಾತಿ 12 ಕಾಲೇಜುಗಳಿಗೆ, 12 ಹಿಂವರ್ಗಗಳ ಕಾಲೇಜುಗಳಿಗೆ 2 ಪರಿಶಿಷ್ಟ ವರ್ಗಗಳ ಕಾಲೇಜಗುಳಿಗೆ ಮತ್ತು 3 ಅಲ್ಪಸಂಖ್ಯಾತರ ಕಾಲೇಜುಗಳಿಗೆ ಸೃಜಿಸಿದ ಹುದ್ದೆಗಳಾಗಿವೆ.

ಸರ್ಕಾರವು ದಿನಾಂಕ:01-04-2015ರಿಂದ ಅಲ್ಪಸಂಖ್ಯಾತರ ವಸತಿ ಶಾಲೆ ಮತ್ತು ಕಾಲೇಜುಗಳ ನಿರ್ವಹಣೆಯನ್ನು ಸಂಘದಿಂದ ಹೊರತುಪಡಿಸಿ, ಅಲ್ಪಸಂಖ್ಯಾತರ ಇಲಾಖಾ ವ್ಯಾಪ್ತಿಗೆ ಒಳಪಡಿಸಿದೆ. ಪ್ರತಿ ಕಾಲೇಜಿಗೆ ಸೃಜಿಸಲಾದ ಪ್ರಾಂಶುಪಾಲರು, ಭಾಷಾ/ಐಚ್ಛಿಕ ವಿಷಯಗಳ ಉಪನ್ಯಾಸಕರ ಒಟ್ಟು

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

8 ಹುದ್ದೆಗಳಂತೆ ಅಲ್ಪಸಂಖ್ಯಾತರ 3 ವಸತಿ ಕಾಲೇಜುಗಳ ಒಟ್ಟು 24 ಹುದ್ದೆಗಳನ್ನು ವೃಂದಬಲದಿಂದ ಹೊರತುಪಡಿಸಬೇಕಾಗಿದೆ.

ಮೇಲೆ ಹೇಳಲಾದ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ವಸತಿ ಶಾಲೆಗಳ ಪ್ರಾಂಶುಪಾಲರುಗಳ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಶೇ.50% ರಷ್ಟು ಹುದ್ದೆಗಳನ್ನು ನೇರನೇಮಕಾತಿಯಿಂದ ಹಾಗೂ ಶೆ.50%ರಷ್ಟು ಹುದ್ದೆಗಳನ್ನು ಪದವಿ ಪೂರ್ವ ವಸತಿ ಕಾಲೇಜುಗಳ ಉಪನ್ಯಾಸಕರುಗಳ ಹುದ್ದೆಗಳಿಂದ ಭರ್ತಿ ಮಾಡಿಕೊಳ್ಳಲು ನಿಯಮ ರೂಪಿಸಲಾಗಿದೆ.

ವಸತಿ ಕಾಲೇಜಿನ ಪ್ರಾಂಶುಪಾಲರುಗಳಿಗೆ ನಿಗಧಿಪಡಿಸಿದ ವಿದ್ಯಾರ್ಹತೆಯು ವಿಜ್ಞಾನ ವಿಷಯಗಳಾದ ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ, ಸಸ್ಯಶಾಸ್ತ್ರ, ಜೀವಶಾಸ್ತ್ರ ಮತ್ತು ಕಂಪ್ಯೂಟರ್ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿಯನ್ನು ಹೊಂದಿರಬೇಕು. ನೇಮಕಾತಿ ನಿಯಮದಲ್ಲಿ ಭಾಷಾ ಮತ್ತು ಐಚ್ಛಿಕ ವಿಷಯಗಳ ಉಪನ್ಯಾಸಕರುಗಳ ಹುದ್ದೆಗಳಿಗೆ ನಿಗಧಿಪಡಿಸಿದ ವಿದ್ಯಾರ್ಹತೆಯನ್ನು ಹೊಂದಿದ ಹಾಗೂ 5 ವರ್ಷ ಸೇವೆ ಸಲ್ಲಿಸಿದ ಉಪನ್ಯಾಸಕರುಗಳಿಗೆ ಮುಂಬಡ್ತಿ ನೀಡಲು ಅವಕಾಶ ಕಲ್ಪಿಸಿದೆ. ಆದರೆ, ಈ ಹುದ್ದೆಗಳನ್ನು ಈವರೆವಿಗೂ ಭರ್ತಿ ಮಾಡಿಕೊಂಡಿರುವುದಿಲ್ಲ. ಮುಂದುವರಿದು, ಈ ಅಧಿಸೂಚನೆಯಲ್ಲಿ ಉಪನ್ಯಾಸಕರುಗಳ ಹುದ್ದೆಗಳನ್ನು ಮೊದಲನೇ ಬಾರಿಗೆ ನೇರನೇಮಕಾತಿಯಿಂದ ಭರ್ತಿ ಮಾಡಿಕೊಳ್ಳಲು ಅನುಮೋದಿಸಲಾಗಿದೆ.

ಮೊರಾರ್ಜಿ ದೇಸಾಯಿ/ಏಕಲವ್ಯ/ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳ ಖಾಯಂ ಪ್ರಾಂಶುಪಾಲರುಗಳು ಮನವಿ ಸಲ್ಲಿಸಿ, ಕಾಲೇಜುಗಳ ಪ್ರಾಂಶುಪಾಲರುಗಳ ಹುದ್ದೆಗಳಿಗೆ ಮುಂಬಡ್ತಿ ನೀಡುವಂತೆ ಮನವಿ ಸಲ್ಲಿಸಿರುತ್ತಾರೆ. ತತ್ಸಂಬಂಧವಾಗಿ ವಿಷಯವನ್ನು ಆಡಳಿತ ಮಂಡಳಿಯ ಮುಂದೆ ಮಂಡಿಸಿ, ಈ ಕೆಳಕಂಡ ಅಂಶಗಳ ಮೇಲೆ ತೀರ್ಮಾನ ಕೋರಿದೆ.

1. ಅಲ್ಪಸಂಖ್ಯಾತರ 3 ವಸತಿ ಕಾಲೇಜುಗಳ ನಿರ್ವಹಣೆಯನ್ನು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯು ವಾಪಾಸ್ ಪಡೆದಿದ್ದರಿಂದ ಈ ಕಾಲೇಜುಗಳಿಗೆ ಸೃಜಿಸಿದ ಪ್ರಾಂಶುಪಾಲರ ಮತ್ತು ಭಾಷಾ/ಐಚ್ಛಿಕ ಉಪನ್ಯಾಸಕರುಗಳ ಹುದ್ದೆಗಳನ್ನು ವೃಂದ ಮತ್ತು ನೇಮಕಾತಿ ವಿನಿಯಮಗಳ ವೃಂದ ಬಲದಿಂದ ಹೊರತುಪಡಿಸಿ ಸಂಘದ ವೃಂದ ಮತ್ತು ನೇಮಕಾತಿ ವಿನಿಯಮಗಳಿಗೆ ತಿದ್ದುಪಡಿ ತರುವ ಬಗ್ಗೆ
2. ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲರುಗಳಿಗೆ ಕಾಲೇಜು ಪ್ರಾಂಶುಪಾಲರುಗಳ ಹುದ್ದೆಗಳಿಗೆ ಮುಂಬಡ್ತಿ ನೀಡುವ ಬಗ್ಗೆ ವೃಂದ ಮತ್ತು ನೇಮಕಾತಿ ವಿನಿಯಮಗಳಿಗೆ ಸೂಕ್ತ ತಿದ್ದುಪಡಿ ತರುವ ಬಗ್ಗೆ.
3. ಮೊರಾರ್ಜಿ ದೇಸಾಯಿ ವಸತಿ ಶಾಲೆ/ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಮುಂಬಡ್ತಿ ನೀಡುವ ಬಗ್ಗೆ ಸೂಕ್ತ ಕೋಟಾ ನಿರ್ಧರಿಸಿ, ವೃಂದ ಮತ್ತು ನೇಮಕಾತಿ ವಿನಿಯಮಗಳಿಗೆ ಸೂಕ್ತ ತಿದ್ದುಪಡಿ ತರುವ ಬಗ್ಗೆ.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

4. ಮೊರಾರ್ಜಿ ದೇಸಾಯಿ ವಸತಿ ಶಾಲೆ/ಕಾಲೇಜುಗಳ ಪ್ರಾಂಶುಪಾಲರುಗಳ ಮುಂಬಡ್ತಿಗೆ ತೀರ್ಮಾನಿಸಿದಲ್ಲಿ ಅಧಿಸೂಚನೆಯಲ್ಲಿ ತಿಳಿಸಿದ ಎಲ್ಲಾ ಹುದ್ದೆಗಳನ್ನು ಮೊದಲನೇ ಬಾರಿಗೆ ನೇರನೇಮಕಾತಿಯಿಂದ ಭರ್ತಿ ಮಾಡಿಕೊಳ್ಳಬೇಕೆಂಬ ಅಂಶವನ್ನು ಕೈಬಿಟ್ಟು ತಿದ್ದುಪಡಿ ತರುವ ಬಗ್ಗೆ.
5. ಮೊರಾರ್ಜಿ ದೇಸಾಯಿ ವಸತಿ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಂಶುಪಾಲರುಗಳು 2 ವಿಧಗಳಲ್ಲಿ ನೇಮಕಗೊಂಡಿದವರಾಗಿದ್ದು, 2001-02ನೇ ಸಾಲಿನಿಂದ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸಿ ದಿನಾಂಕ:01-10-2011 ರಿಂದ ಜಾರಿಗೆ ಬರುವಂತೆ ಖಾಯಂಗೊಳಿಸಿರುವ 56 ಪ್ರಾಂಶುಪಾಲರು ಹಾಗೂ2011-12ನೇ ಸಾಲಿನಲ್ಲಿ ನೇರ ನೇಮಕಾತಿಯಿಂದ ಆಯ್ಕೆಗೊಂಡು 123 ಪ್ರಾಂಶುಪಾಲರುಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಈ ಪ್ರಾಂಶುಪಾಲರುಗಳು 5 ವರ್ಷಗಳ ಸತತ ಸೇವೆಯನ್ನು ಪೂರ್ಣಗೊಳಿಸಿರುವುದಿಲ್ಲ. ಮುಂಬಡ್ತಿ ನೀಡಲು ತೀರ್ಮಾನಿಸಿದಲ್ಲಿ ವೃಂದ ಮತ್ತು ನೇಮಕಾತಿ ವಿನಿಯಮಗಳಲ್ಲಿ ನಿಗಧಿಪಡಿಸಿದ 5 ವರ್ಷಗಳ ಸೇವೆಯ ಬದಲಾಗಿ ಆಡಳಿತ ಮಂಡಳಿಯು ತೀರ್ಮಾನಿಸುವ ಅವಧಿಯನ್ನು ನಿಗಧಿಪಡಿಸಬೇಕಾಗುತ್ತದೆ.

ವಿಷಯವನ್ನು ಆಡಳಿತ ಮಂಡಳಿ ಸಭೆಯ ಅನುಮೋದನೆ ಮಂಡಿಸಿದೆ. ಆಡಳಿತ ಮಂಡಳಿಯ ತೀರ್ಮಾನದಂತೆ, ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು.

**ತೀರ್ಮಾನ:**

**ಆಡಳಿತ ಮಂಡಳಿಯು ವಿಷಯವನ್ನು ದೀರ್ಘವಾಗಿ ಚರ್ಚಿಸಿತು. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಪದವಿ ಪೂರ್ವ ಕಾಲೇಜಿನ ಹುದ್ದೆಗಳನ್ನು ಸಂಘದ ವೃಂದ ಮತ್ತು ನೇಮಕಾತಿ ವಿನಿಯಮಳಿಗೆ ಸೇರ್ಪಡೆ ಮಾಡಿರುವ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅನುಮೋದನೆ ದೊರತಿದೆ. ಯಾವುದೇ ಬದಲಾವಣೆಗೆ ಈ ಇಲಾಖೆಯ ಅಭಿಪ್ರಾಯ ಅಗತ್ಯವಿದ್ದು, ಮೇಲ್ಕಂಡ ಅಂಶಗಳನ್ನೊಳಗೊಂಡಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಅನುಮೋದನೆ ಪಡೆಯಲು ತೀರ್ಮಾನಿಸಲಾಯಿತು.**

ಹೆಚ್ಚುವರಿ ವಿಷಯ ಸಂಖ್ಯೆ: 06

**ವಸತಿ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಟೆಂಡರ್‌ಗಳನ್ನು ಕರೆದಿರುವ ಮತ್ತು ರೂ.10.00 ಕೋಟಿ ಮೀರಿದ ಖರೀದಿಗಳಿಗೆ ಸಚಿವ ಸಂಪುಟದ ಒಪ್ಪಿಗೆ ಪಡೆಯುವ ಬಗ್ಗೆ.**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಶಾಲೆಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಸಲುವಾಗಿ 2015-16ನೇ ಸಾಲಿನಲ್ಲಿ ಕರೆದ ಟೆಂಡರ್‌ಗಳ ಯಾದಿಯನ್ನು ಅನುಬಂಧ-1

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ರಲ್ಲಿ ಮಂಡಿಸಲಾಗಿದೆ. ಇವುಗಳಲ್ಲಿ ರೂ.10.00 ಕೋಟಿಗೂ ಮೀರಿದ ಟೆಂಡರ್‌ಗಳು ಈ ಕೆಳಕಂಡಂತಿವೆ.

| ಕ್ರ ಸಂ. | ಸಾಮಗ್ರಿಗಳ ವಿವರ | ಟೆಂಡರ್ ಮೌಲ್ಯ (ರೂ. ಕೋಟಿಗಳಲ್ಲಿ) |
|---|---|---|
| 1 | ಸೋಲಾರ್ ಉಪಕರಣಗಳು | 94.62 |
| 2 | ಪೀಠೋಪಕರಣಗಳು | 68.70 |
| 3 | Computer, Thin client ಮತ್ತು ಇತರೆ ಪರಿಕರಗಳು | 19.81 |
| 4 | Diesel Generator | 23.00 |
| | ಒಟ್ಟು | 206.13 |

ಈ ಸಂಬಂಧ 2015-16 ರ ಆಯವ್ಯಯದಲ್ಲಿ ಪ್ರವರ್ಗವಾರು ನಿರ್ವಹಣಾ ಲೆಕ್ಕಶೀರ್ಷಿಕೆಯಡಿ ಅನುದಾನ ಲಭ್ಯವಿದ್ದು, ಕ್ರಿಯಾಯೋಜನೆಯಲ್ಲಿ ಖರೀದಿಗಾಗಿ ಅನುದಾನವನ್ನು ಈ ಕೆಳಕೆಂಡಂತೆ ನಿಗದಿಪಡಿಸಲಾಗಿದೆ.

(ರೂ. ಲಕ್ಷಗಳಲ್ಲಿ)

| Details | OB | Allocation | Total | Salary | Maintaince | Infrastructure | Total |
|---|---|---|---|---|---|---|---|
| SC | 8322.85 | 31699 | **40021.85** | 9909.6 | 9057.45 | 21054.8 | **40021.85** |
| ST | 5400.47 | 9691 | **15091.47** | 2690.7 | 2932.76 | 9468.06 | **15091.47** |
| BC | 1665.41 | 15561 | **17226.41** | 5249.4 | 6242.85 | 5734.15 | **17226.41** |
| **TOTAL** | **15388.7** | **56951** | **72339.73** | **17850** | **18233.06** | **36257.01** | **72339.73** |

ಆರ್ಥಿಕ ಇಲಾಖೆಯು ಸರ್ಕಾರಿ ಆದೇಶ ಸಂಖ್ಯೆ: FD 2 TFP 2010 Dated: 30.04.2010 ರಲ್ಲಿ ಹೊರಡಿಸಿರುವ ಸಾಮಾನ್ಯ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯ ಪ್ರಕಾರ ಕ್ರಮಸಂಖ್ಯೆ 12 ರಲ್ಲಿ ಇಲಾಖಾ ಮುಖ್ಯಸ್ಥರಿಗೆ ಪ್ರದತ್ತವಾಗಿರುವ ಅಧಿಕಾರದನ್ವಯ ಮೇಲೆ ಹೇಳಿದ ಖರೀದಿಗಳಿಗೆ ಟೆಂಡರ್ ಕರೆಯಲಾಗಿದೆ. ಕರ್ನಾಟಕ ಸರ್ಕಾರದ (ಕಾರ್ಯಕಲಾಪಗಳ ನಿರ್ವಹಣೆ) ನಿಯಮಗಳು 1977 ಐಟಂ 15 ರಂತೆ ರೂ.10.00 ಕೋಟಿಗೂ ಮೀರಿದ ವೆಚ್ಚಕ್ಕೆ ಸಚಿವ ಸಂಪುಟದ ಅನುಮೋದನೆ ಪಡೆಯುವುದು

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

"ಕಾಮಗಾರಿ" ಕೆಲಸಗಳಿಗೆ ಮಾತ್ರ ಅನ್ವಯಿಸುತ್ತದೆ. ಆದ್ದರಿಂದ ಮೇಲಿನ ಖರೀದಿ ಕಡತಗಳನ್ನು ಆರ್ಥಿಕ ಇಲಾಖೆಗೆ ಕಳುಹಿಸಲಾಗಿರುವುದಿಲ್ಲ.

ಆದರೆ ಮತ್ತೊಂದು ಕಡತದಲ್ಲಿ ಆರ್ಥಿಕ ಇಲಾಖೆಯು ಹೆಚ್ಚಿನ ಮೊತ್ತವುಳ್ಳ ಟೆಂಡರ್‌ಗಳನ್ನು ಆರ್ಥಿಕ ಇಲಾಖೆಯ ಸಹಮತ ಪಡೆದು ಸಂಪುಟದ ಅನುಮೋದನೆಗೆ ಕಳುಹಿಸಬೇಕೆಂದು ಅಭಿಪ್ರಾಯಪಟ್ಟಿದೆ.

ಆದ್ದರಿಂದ ಮೇಲೆ ಹೇಳಿದ ಟೆಂಡರ್‌ಗಳಿಗೆ ಸಚಿವ ಸಂಪುಟದ ಘಟನೋತ್ತರ ಅನುಮೋದನೆ ಪಡೆಯುವ ಕುರಿತು ಆಡಳಿತ ಮಂಡಳಿಯು ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲು ಕೋರಿ ಪ್ರಸ್ತಾವನೆಯನ್ನು ಮಂಡಿಸಲಾಗಿದೆ.

ತೀರ್ಮಾನ:

**ಆಡಳಿತ ಮಂಡಳಿಯ ಸಭೆಯಲ್ಲಿ ಹಾಜರಿದ್ದ ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ(ವೆಚ್ಚ)ರವರು ಸಚಿವ ಸಂಪುಟದ ಅನುಮೋದನೆಯು ರೂ.10.00 ಕೋಟಿಗೆ ಮೀರಿದ ಕಟ್ಟಡಗಳ ನಿರ್ಮಾಣ ಕಾಮಗಾರಿಗಳಿಗೆ ಮಾತ್ರ ಸೀಮಿತವಾಗಿರದೇ ಖರೀದಿಗೂ (Procurement of goods) ಅನ್ವಯವಾಗುತ್ತದೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ಸಂಘವು ತತ್ಸಂಬಂಧವಾಗಿ ಸಚಿವ ಸಂಪುಟದ ಘಟನೋತ್ತರ ಅನುಮೋದನೆ ಪಡೆಯಲು ಕ್ರಮವಹಿಸುವಂತೆ ತೀರ್ಮಾನಿಸಲಾಯಿತು.**

ಹೆಚ್ಚುವರಿ ವಿಷಯ ಸಂಖ್ಯೆ: 07

**MOBILE HEALTH, FITNESS AND SPORTS TALENT IDENTIFICATION CLINICAL SERVICES** ಗಾಗಿ EXPRESSION OF INTEREST ಕರೆದಿರುವ ಬಗ್ಗೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ವಸತಿ ಶಾಲೆ/ಕಾಲೇಜುಗಳಲ್ಲಿರುವ ವಿದ್ಯಾರ್ಥಿಗಳಿಗೆ ಆರೋಗ್ಯ ತಪಾಸಣೆಗೊಳಸುವ ಉದ್ದೇಶದಿಂದ **MOBILE HEALTH, FITNESS AND SPORTS TALENT IDENTIFICATION CLINICAL SERVICES** ಗಾಗಿ ಖರೀದಿಸಲು **EXPRESSION OF INTEREST** ನ್ನು ದಿ: 10.01.2016 ರಂದು ಕರೆಯಲಾಗಿದೆ. **EOI** ಸ್ವೀಕರಿಸಲು ಕೋನೆಯ ದಿನಾಂಕ: 12.02.2016 ಆಗಿರುತ್ತದೆ.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಮೇಲಿನ ಅಂಶಗಳನ್ನು ಆಡಳಿತ ಮಂಡಳಿಯ ಅವಗಾಹನೆಗೆ ತರುತ್ತಾ ಸಂಘದ ಕ್ರಮವನ್ನು ಅನುಮೋದಿಸಲು ಕೋರಿದೆ.

**ತೀರ್ಮಾನ:**

**ಆಡಳಿತ ಮಂಡಳಿಯು ವಿಷಯವನ್ನು ಚರ್ಚಿಸಿತು. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ವಸತಿ ಶಾಲೆ/ಕಾಲೇಜುಗಳಲ್ಲಿರುವ ವಿದ್ಯಾರ್ಥಿಗಳಿಗೆ ಕಾಲಕಾಲಕ್ಕೆ ಆರೋಗ್ಯ ತಪಾಸಣೆ ನಡೆಸುವ ಸಂಬಂಧ MOBILE HEALTH, FITNESS AND SPORTS TALENT IDENTIFICATION CLINICAL SERVICES ಗಾಗಿ ಸಂಘವು EXPRESSION OF INTEREST ನ್ನು ಪ್ರಕಟಿಸಿರುವುದನ್ನು ಸಭೆಯು ಅವಗಾಹಿಸಿತು.**

**ಹೆಚ್ಚುವರಿ ವಿಷಯ ಸಂಖ್ಯೆ: 8**
**ಶ್ರೀ.ಟಿ.ಕೆ.ವೆಂಕಟಾದ್ರಿ, ಅಧೀಕ್ಷಕ ಅಭಿಯಂತರರು ಮೇಲಾಧಿಕಾರಿಗಳ ವಿರುದ್ಧ ವಿನಾಕಾರಣ ಅನುಸೂಚಿತ ಜಾತಿ/ಪಂಗಡಗಳ ದೌರ್ಜನ್ಯ ಪ್ರತಿಬಂಧಕ ಕಾಯ್ದೆ 1989 ರನ್ವಯ ಪ್ರಕರಣ ದಾಖಲಿಸಿರುವ ಬಗ್ಗೆ.**

******

ಶ್ರೀ.ಟಿ.ಕೆ.ವೆಂಕಟಾದ್ರಿ, ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಇವರು ನಿಯೋಜನೆ ಮೇಲೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಲ್ಲಿ ದಿನಾಂಕ:09/07/2014 ದಿಂದ ದಿನಾಂಕ:28/09/2015 ರವರೆಗೆ ಕರ್ತವ್ಯ ನಿರ್ವಹಿಸುತ್ತಿದ್ದರು.

ಇವರು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಲ್ಲಿ ಕಾರ್ಯಪಾಲಕ ಅಭಿಯಂತರರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಸಮರ್ಪಕವಾಗಿ ಕರ್ತವ್ಯ ನಿರ್ವಹಿಸದೇ ಕರ್ತವ್ಯ ಲೋಪ ಎಸಗಿದ್ದುದರಿಂದ ಈ ವಿಷಯವನ್ನು ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಗಮನಕ್ಕೆ ತಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಸಂಘದ ಉಪಾಧ್ಯಕ್ಷರ'ವರ ಆದೇಶದನ್ವಯ ದಿನಾಂಕ:28/09/2015 ರ ಪೂರ್ವಾಹ್ನ ಕರ್ತವ್ಯದಿಂದ ಬಿಡುಗಡೆ ಮಾಡಲಾಗಿದೆ. (ಬಿಡುಗಡೆಗೊಳಿಸಿರುವ ಪತ್ರದ ಪ್ರತಿಯನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ).

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಅಧಿಸೂಚನೆ ದಿನಾಂಕ:28/09/2015 ರಲ್ಲಿ ಶ್ರೀ.ಟಿ.ಕೆ.ವೆಂಕಟಾದ್ರಿ ರವರನ್ನು ಕರ್ನಾಟಕ ನಾಗರೀಕ ಸೇವಾ ನಿಯಮ 32 ರಡಿ ಅಧೀಕ್ಷಕ ಅಭಿಯಂತರರ ಹುದ್ದೆಯಲ್ಲಿ ಸ್ವತಂತ್ರ ಪ್ರಭಾರದಲ್ಲಿರಿಸಿ ಇವರ ಸೇವೆಯನ್ನು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು ಇಲ್ಲಿಗೆ ನೇಮಿಸಿ ಆದೇಶಿಸಲಾಗಿತ್ತು. ಈ ಆದೇಶದನ್ವಯ ಸಮಾಜ ಕಲ್ಯಾಣ ಇಲಾಖೆಯು ಸಂಘದಲ್ಲಿ ಖಾಲಿ ಇದ್ದ ಅಧೀಕ್ಷಕ ಅಭಿಯಂತರರ ಹುದ್ದೆಗೆ ಸ್ಥಳನಿಯುಕ್ತಿಗೊಳಿಸಿ ದಿನಾಂಖ:05/12/2015 ರಂದು ಆದೇಶಿಸಲಾಗಿತ್ತು.

ಶ್ರೀ.ಟಿ.ಕೆ.ವೆಂಕಟಾದ್ರಿ ರವರು ದಿನಾಂಕ:05/12/2015 ರ ಅಪರಾಹ್ನದಂದು ಅಧೀಕ್ಷಕ ಅಭಿಯಂತರರ ಹುದ್ದೆಯ ಪ್ರಭಾರವನ್ನು ಸಂಬಂಧಪಟ್ಟ ಅಧಿಕಾರಿಯಿಂದ ಪಡೆಯದೇ ಅವರೇ ಸ್ವಯಂ ಪ್ರಭಾರವನ್ನು ವಹಿಸಿಕೊಂಡು ಪ್ರಭಾರ ವರ್ಗಾವಣೆ ಪತ್ರಕ್ಕೆ ಸಹಿ ಮಾಡಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದರು.

ತದನಂತರ ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಮೌಖಿಕ ಸೂಚನೆಯನ್ವಯ ಸಂಘವು ದಿನಾಂಕ:07/12/2015 ರಂದು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಸಂಘದ ಉಪಾಧ್ಯಕ್ಷರ'ವರಿಗೆ ಶ್ರೀ.ಟಿ.ಕೆ.ವೆಂಕಟಾದ್ರಿ, ಕಾರ್ಯಪಾಲಕ ಅಭಿಯಂತರರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಕರ್ತವ್ಯ ನಿರ್ಲಕ್ಷತೆ ಬಗ್ಗೆ ಕರ್ತವ್ಯ ಲೋಪದ ಕಾರಣಗಳಿಂದಾಗಿ ಅವರನ್ನು ಸಂಘದಿಂದ ಬಿಡುಗಡೆಗೊಳಿಸಲಾಗಿತ್ತು ಎಂಬ ಅಂಶವನ್ನು ವಿವರಿಸಿ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. (ಪತ್ರದ ಪ್ರತಿಯನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ).

ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆರವರ ಅ.ಸ.ಪ.ಸಂಖ್ಯೆ.ದಿನಾಂಕ:18/12/2015 ರಲ್ಲಿ ಈ ಅಧಿಕಾರಿ ವಿರುದ್ಧ ದೋಷಾರೋಪಣೆ ಪಟ್ಟಿಯನ್ನು ತಯಾರಿಸಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯು ಈ ಅಧಿಕಾರಿ ವಿರುದ್ಧ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿದೆ (ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ)

ತದನಂತರ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯು ತನ್ನ ಅಧಿಸೂಚನೆ ಲೋಇ 328 ಸೇಎಸು 2015 ಬೆಂಗಳೂರು ದಿ:23.12.2015ರಲ್ಲಿ ಶ್ರೀ.ಟಿ.ಕೆ.ವೆಂಕಟಾದ್ರಿ,

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಅಧೀಕ್ಷಕ ಅಭಿಯಂತರರ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇರುವುದಾಗಿ ತಿಳಿಸಿ ಈ ಅಧಿಕಾರಿಯ ಸೇವೆಯನ್ನು ಇಲಾಖೆಯು ವಾಪಸ್ಸು ಪಡೆದಿದೆ.

ಶ್ರೀ.ಟಿ.ಕೆ.ವೆಂಕಟಾದ್ರಿ ಅಧೀಕ್ಷಕ ಅಭಿಯಂತರರು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಕಾರ್ಯನಿರ್ವಾಹಕ ನಿರ್ದೇಶಕರವರ ವಿರುದ್ಧ ಅಡಿಷನಲ್ ಸಿಟಿ ಸಿವಿಲ್ & ಸೆಷನ್ಸ್ ಜಡ್ಜ್ ನ್ಯಾಯಾಲಯದಲ್ಲಿ ದೂರು ಅರ್ಜಿ ಸಲ್ಲಿಸಿದ ನಂತರ, ವಿಧಾನ ಸೌಧ ಪೋಲೀಸ್ ಠಾಣೆಯಲ್ಲಿ (ಅನುಸೂಚಿತ ಜಾತಿ/ಪಂಗಡಗಳ ದೌರ್ಜನ್ಯ ಪ್ರತಿಬಂಧಕ ಕಾಯ್ದೆ 1989 ರನ್ವಯ) ಪಿ.ಸಿ.ಆರ್ ಸಂಖ್ಯೆ.47/2015 ರಡಿಯಲ್ಲಿ ದಿನಾಂಕ:22/12/2015 ರಂದು ಎಫ್.ಐ.ಆರ್ ದಾಖಲಾಗಿರುತ್ತದೆ.

ಇಲಾಖಾ ಮುಖ್ಯಸ್ಥರಾಗಿ ಅಧೀನ ಅಧಿಕಾರಿಗಳಿಂದ ಉತ್ತಮ ಗುಣಮಟ್ಟದ ಕೆಲಸ ನಿರ್ವಹಣೆ ಮಾಡಿಸುವ ಜವಾಬ್ದಾರಿಯನ್ನು ಸರ್ಕಾರ ನೀಡಿರುತ್ತದೆ. ಬೇಜವಾಬ್ದಾರಿಯಿಂದ ವರ್ತಿಸಿರುವ ಸಿಬ್ಬಂದಿಗಳ ಮೇಲೆ ಸರ್ಕಾರ ಶಿಸ್ತಿನ ಕ್ರಮ ಜರುಗಿಸುವುದು ಸಹಜ. ಆದರೆ ಇಂತಹ ಕ್ರಮಗಳನ್ನು ಶ್ರೀ. ಟಿ.ಕೆ ವೆಂಕಟಾದ್ರಿ ರವರು ಜಾತಿನಿಂಧನೆಯಾಗಿ ಪರಿಗಣಿಸಿ ಸರ್ಕಾರದ ಅನುಮತಿಯಿಲ್ಲದೆ ನ್ಯಾಯಾಲಯದ ಮೊರೆ ಹೋಗಿ ಪ್ರಧಾನ ಕಾರ್ಯದರ್ಶಿಯವರ ಮೇಲೆ ಖಾಸಗಿ ಪ್ರಕರಣಗಳನ್ನು ದಾಖಲಿಸುವುದು ಅತ್ಯಂತ ವಿಷಾದನೀಯ ಕ್ರಮವಾಗಿದೆ.

ಸದರಿ ಅಧೀಕ್ಷಕ ಅಭಿಯಂತರರು ಈ ಹಿಂದೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಲ್ಲಿ ಅತ್ಯಂತ ಅಸಮರ್ಪಕವಾಗಿ ಕೆಲಸಗಳನ್ನು ನಿರ್ವಹಿಸಿರುವುದರಿಂದ ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಚಿವರ ಆದೇಶದಂತೆ ಲೋಕೋಪಯೋಗಿ ಇಲಾಖೆಗೆ ಅವರ ಸೇವೆಯನ್ನು ದಿನಾಂಕ:28.09.2015ರಂದು ಹಿಂದಿರುಗಿಸಲಾಗಿತ್ತು. ಆದರೆ ದಿನಾಂಕ: 05.12.2015ರ ಅನ್ವಯ ಸದರಿಯವರನ್ನು ಪುನ: ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘಕ್ಕೆ ಮರುಸ್ಥಳ ನಿಯುಕ್ತಿಗೊಳಿಸಲಾಗಿತ್ತು. ಈ ಬಗ್ಗೆ ಮಾನ್ಯ ಸಚಿವರ ಸೂಚನೆಯಂತೆ ಅವರ ಸೇವೆಯನ್ನು ದಿನಾಂಕ: 05.12.2015ರಂದು ಸ್ವೀಕರಿಸಲು ಅನುಮತಿ ನೀಡಲಾಗಿರುವುದಿಲ್ಲ. ಅದೇ ರೀತಿ ವಿವರಿಸಿ ಈ ಬಗ್ಗೆ ದಿ: 07.12.2015ರಂದು ಮಾನ್ಯ ಸಚಿವರ ಆದೇಶದಂತೆ ಕಡತವನ್ನು ಮಾನ್ಯ ಮುಖ್ಯಮಂತ್ರಿಗಳ ಕಾರ್ಯದರ್ಶಿ ಶ್ರೀ ತುಷಾರ್ ಗಿರಿನಾಥ್ ರವರಿಗೆ ಸಲ್ಲಿಸಲಾಗಿತ್ತು. ಆದರೆ ಅವರ ಮೇಲೆ ಯಾವುದೇ ಕ್ರಮ ಆಗದೇ ಇರುವುದರಿಂದ ಮಾನ್ಯ ಸಚಿವರು ಮಾನ್ಯ ಮುಖ್ಯಮಂತ್ರಿಯವರಿಗೆ ಮೌಖಿಕವಾಗಿ ಪ್ರಸ್ತಾವನೆಯನ್ನು ಮಂಡಿಸಿರುತ್ತಾರೆ. ಅಲ್ಲದೇ ಸದರಿ ವರ್ಗಾವಣೆ ಮಾನ್ಯ

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಮುಖ್ಯಮಂತ್ರಿಗಳ ಆದೇಶದನ್ವಯ ಇರುವುದರಿಂದ ಮಾನ್ಯ ಸಚಿವರು ದಿನಾಂಕ: 16.12.2015ರಂದು ಸಚಿವ ಸಂಪುಟ ಸಭೆಯ ಪೂರ್ವದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಈ ಎಲ್ಲಾ ವಿಷಯಗಳನ್ನು ತಂದಿರುತ್ತಾರೆ ಹಾಗೂ ಸದರಿ ಅಧೀಕ್ಷಕ ಅಭಿಯಂತರರನ್ನು ಲೋಕೋಪಯೋಗಿ ಇಲಾಖೆಗೆ ವಾಪಸ್ಸು ತೆಗೆದುಕೊಳ್ಳಲು ಆದೇಶ ನೀಡಬೇಕಾಗಿ ಮಾನ್ಯ ಸಚಿವರು ಮತ್ತು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ರವರು ಮಾನ್ಯ ಮುಖ್ಯ ಮಂತ್ರಿಗಳನ್ನು ಕೋರಿದ್ದರು. ಈ ಎಲ್ಲಾ ವಿಷಯಗಳನ್ನು ಗಮನಿಸಿ ಮಾನ್ಯ ಮುಖ್ಯಮಂತ್ರಿಗಳು ಸದರಿ ಅಧೀಕ್ಷಕ ಅಭಿಯಂತರರನ್ನು ನಿಲಂಬನೆಯಲ್ಲಿಟ್ಟು, ಬೇರೆ ಕಡೆ ಮರುಸ್ಥಳನಿಯುಕ್ತಿ ಮಾಡಬಹುದು ಎಂದು ಮೌಖಿಕವಾಗಿ ಸೂಚಿಸಿದ್ದರು. ಈ ಸಮಯದಲ್ಲಿ ಶ್ರೀ ತುಷಾರ್ ಗಿರಿನಾಥ್‌ರವರು ಉಪಸ್ಥಿತರಿದ್ದರು.

ಈ ವಿಷಯದ ಬಗ್ಗೆ ಶ್ರೀ ವೆಂಕಟಾದ್ರಿರವರು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆರವರ ಕಛೇರಿಗೆ ಬಂದು ಅವರ ಮೇಲೆ ಕೋರ್ಟ್‌ನಲ್ಲಿ ದೂರು ದಾಖಲಿಸುತ್ತೇನೆ ಎಂದು ಬೆದರಿಕೆಯನ್ನು ಹಾಕಿರುತ್ತಾರೆ. ಈ ವಿಷಯವನ್ನು ಮಾನ್ಯ ಸಚಿವರ ಗಮನಕ್ಕೆ ತರಲಾಗಿದೆ. ಮಾನ್ಯ ಸಚಿವರು ಶ್ರೀ ಟಿ.ಕೆ. ವೆಂಕಟಾದ್ರಿ ಮೇಲೆ ಇರುವ ಎಲ್ಲಾ ಆರೋಪಗಳ ಪಟ್ಟಿಯನ್ನು ಸಿದ್ಧಪಡಿಸಿ ಲೋಕೋಪಯೋಗಿ ಇಲಾಖೆಗೆ ಅವರ ಮೇಲೆ ಶಿಸ್ತಿನ ಕ್ರಮ ಜರುಗಿಸಲು ಹಾಗೂ ಅವರಿಗೆ ನಿಲಂಬನೆಯಲ್ಲಿಡಲು ಪತ್ರ ಕಳುಹಿಸಬೇಕೆಂದು ಸೂಚಿಸಿರುತ್ತಾರೆ. ಈ ಎಲ್ಲಾ ಕ್ರಮಗಳನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಇಲಾಖೆಯ ಹಿತದೃಷ್ಟಿಯಿಂದ ಮಾನ್ಯ ಸಚಿವರು ಹಾಗೂ ಮಾನ್ಯ ಮುಖ್ಯಮಂತ್ರಿಗಳ ಅನುಮೋದನೆಯ ಮೇರೆಗೆ ನಡೆಸಲಾಗಿದ್ದು, ಆದಾಗ್ಯೂ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಕಾರ್ಯನಿರ್ವಾಹಕ ನಿರ್ದೇಶಕರು ಇವರನ್ನು ಪ್ರತ್ಯೇಕವಾಗಿ ಜವಾಬ್ದಾರಿಯುತರನ್ನಾಗಿ ಮಾಡಿ ಈ ಅಧಿಕಾರಿಯು ಸರ್ಕಾರದ ಶಿಷ್ಟಾಚಾರವನ್ನು ಪಾಲಿಸದೇ ಸುದ್ಧಿ ಮಾಧ್ಯಮ ಹಾಗೂ ಪತ್ರಿಕೆಗಳಲ್ಲಿ ಛತ್ತರಿಸಿರುವುದು ಸರ್ಕಾರಕ್ಕೆ ಮುಜುಗರವಾಗಿದೆ.

ಶ್ರೀ ವೆಂಕಟಾದ್ರಿಯವರು ಪರಿಶಿಷ್ಟ ಜಾತಿ ವಿಶೇಷವಾಗಿ ಭೋವಿ ಸಮಾಜದ ಸಂಘ ಸಂಸ್ಥೆಗಳ ಪ್ರತಿನಿಧಿಗಳ ಮೂಲಕ ಪ್ರತಿದಿನ ಮಾನಸಿಕ ಕಿರುಕುಳವನ್ನು ನೀಡಿ ಬೆದರಿಕೆ ಕರೆಗಳನ್ನು ಮಾಡಿಸಿರುತ್ತಾರೆ. ಆದ್ದರಿಂದ ಅವರು ಯಾವುದೇ ತೀವ್ರ ಕ್ರಮವನ್ನು ತೆಗೆದುಕೊಳ್ಳಬಹುದಾಗಿದೆ ಎಂಬ ನಿರೀಕ್ಷೆಯಿಂದ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಕಾರ್ಯನಿರ್ವಾಹಕ ನಿರ್ದೇಶಕರವರು ಕ್ರಿಮಿನಲ್ & ಮಿಸಲೇನಿಯಸ್ ಪಿಟಿಷನ್ ಸಂಖ್ಯೆ. 347/2015ನ್ನು ಬೆಂಗಳೂರು ಸಿಟಿ ಸಿವಿಲ್ & ಸೆಷನ್ಸ್ ನ್ಯಾಯಾಲಯದಲ್ಲಿ

ದಿನ್ನಾಂಕ:26/12/2015ರಂದು ಹೂಡಿದ್ದು, ಪ್ರಕರಣವನ್ನು ಆಲಿಸಿ ನ್ಯಾಯಾಲಯವು ದಿನಾಂಕ : 14/01/2016 ರಂದು ನಿರೀಕ್ಷಣಾ ಜಾಮೀನು ಮಂಜೂರು ಮಾಡಿರುತ್ತದೆ.

ಮೇಲಿನ ವಿಷಯನ್ನು ಆಡಳಿತ ಮಂಡಳಿಯ ಮುಂದೆ ಚರ್ಚೆಗೆ ಮಂಡಿಸಿ, ಸಂಘವು ತೆಗೆದುಕೊಂಡ ಕ್ರಮವನ್ನು ಅನುಮೋದನೆಗೆ ಮಂಡಿಸಿದೆ.

**ತೀರ್ಮಾನ:**

**ಆಡಳಿತ ಮಂಡಳಿಯು ವಿಷವಯನ್ನು ಅವಗಾಹಿಸಿತು. FIR ನ್ನು ರದ್ದುಗೊಳಿಸಲು ಮಾನ್ಯ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲು ತೀರ್ಮಾನಿಸಿತು.**

ಸಭೆಯು ವಂದನೆಗಳೊಂದಿಗೆ ಮುಕ್ತಾಯವಾಯಿತು.

**(ಹೆಚ್.ಆಂಜನೇಯ)**
**ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ**
**ಕಲ್ಯಾಣ ಸಚಿವರು ಹಾಗೂ ಅಧ್ಯಕ್ಷರು,**
**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ,**
**ಬೆಂಗಳೂರು**